# ಇತರೆ ಕಾರ್ಯಕ್ರಮಗಳು :

೧. **ಡಾ. ಬಾಬಾಸಾಹೇಬ ಅಂಬೇಡ್ಕರ ಜಯಂತಿ:**

ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಾಬಾಸಾಹೇಬ ಅಂಬೇಡಕರ ಅವರು ೧೨೭ ನೇ ಜನ್ಮದಿನವನ್ನು ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಅರ್ಥಪೂರ್ಣವಾಗಿ ಆಚರಿಸಿ ಗೌರವವನ್ನು ಸಮರ್ಪಿಸಲಾಯಿತು.

ಡಾ. ಅಂಬೇಡಕರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ನಂತರ ಕಾ.ಕಾ. ಸಮಿತಿ ಸದಸ್ಯ ಎಸ್. ಬಿ. ಗಾಮನಗಟ್ಟಿ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾ.ಕಾ. ಸಮಿತಿ ಸದಸ್ಯರಾದ ಬಸವಪ್ರಭು ಹೊಸಕೇರಿ, ಶಂಕರ ಕುಂಬಿ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಮಾತನಾಡಿ ದೇಶಕ್ಕೆ ಅವರು ನೀಡಿದ ಕೊಡುಗೆ ಹಾಗೂ ಸೇವೆಯನ್ನು ಸ್ಮರಿಸಿದರು.

ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾ.ಕಾ. ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ, ಗುರು ಹಿರೇಮಠ, ಬಿ. ಕೆ. ಹೊಂಗಲ ಹಾಗೂ ಸಂಘದ ಕಚೇರಿ ಅಧೀಕ್ಷಕ ಎಸ್. ಎಂ. ರಾಚಯ್ಯನವರ, ಎನ್. ಎಸ್. ಕಾಶಪ್ಪನವರ, ಎಸ್. ಆಯ್. ಭಾವಿಕಟ್ಟಿ, ಆರ್. ಬಿ. ಪಟ್ಟಣಶೆಟ್ಟಿ ಹಾಗೂ ಸಿಬ್ಬಂದಿ ವರ್ಗದವರು ಮತ್ತಿರರು ಉಪಸ್ಥಿತರಿದ್ದರು.

೨. **ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ:**

ಮಹಾಮಾನವತಾವಾದಿ, ಸಾಮಾಜಿಕ ಕ್ರಾಂತಿಯ ಹರಿಕಾರ, ವಿಶ್ವಗುರು ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಅರ್ಥಪೂರ್ಣವಾಗಿ ಆಚರಿಸಿ ಗೌರವವನ್ನು ಸಮರ್ಪಿಸಲಾಯಿತು.

ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ನಂತರ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ ಹಾಗೂ ಕಾ.ಕಾ. ಸಮಿತಿ ಸದಸ್ಯರಾದ ಸತೀಶ ತುರಮರಿ, ಎಸ್. ಬಿ. ಗಾಮನಗಟ್ಟಿ ಹಾಗೂ ಪ್ರಭು ಹಂಚಿನಾಳ ಮಾತನಾಡಿ ೧೨ನೇ ಶತಮಾನದಲ್ಲಿಯೇ ಬಸವಣ್ಣನವರು ಗೊಡ್ಡು ಸಂಪ್ರದಾಯ, ಕಂದಾಚಾರ, ಮೌಢ್ಯಾಚರಣೆ ಹಾಗೂ ಜಾತಿ, ಭೇದ, ವರ್ಗ ತಾರತಮ್ಯ ವಿರೋಧಿಸಿ ಲಿಂಗ ಸಮಾನತೆ ಸಾರಿ, ಕಾಯಕ ದಾಸೋಹಕ್ಕೆ ಹೆಚ್ಚಿನ ಮಹತ್ವ ನೀಡಿದ ಬಸವೇಶ್ವರರ ತತ್ವಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಂಡು ಶರಣರ ತತ್ವ ಸಿದ್ಧಾಂತಗಳಂತೆ ಮನ್ನಡೆಯಬೇಕೆಂದರು. ಮತ್ತು ಸಮಾಜಕ್ಕೆ ಅವರು ನೀಡಿದ ಕೊಡುಗೆ ಹಾಗೂ ಸೇವೆಯನ್ನು ಸ್ಮರಿಸಿದರು. ಕ.ವಿ.ವ. ಸಂಘದ ಕಚೇರಿ ಅಧೀಕ್ಷಕ ಎಸ್. ಎಂ. ರಾಚಯ್ಯನವರ ಬಸವಣ್ಣವರ ಕುರಿತು ವಚನ ಮಂಗಳಾರತಿ ಹಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ಸ್ವಾಗತಿಸಿ, ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.

೩. **ಮತದಾರರ ಜಾಗೃತಿ ಕಾರ್ಯಕ್ರಮ :**

ಕಾಯಕಯೋಗಿ ನಮ್ಮ ನಾಯಕನಾಗಿ ಆಯ್ಕೆಯಾಗಬೇಕು. ಕಾಯಕಯೋಗಿಯನ್ನು ಆಯ್ಕೆ ಮಾಡುವ ಮಹಾ ಅಸ್ತ್ರ ಮತದಾರ ಪ್ರಭುಗಳ ಕೈಯಲ್ಲಿಯೇ ಇದೆ. ಆದುದರಿಂದ ಹಣ, ಹೆಂಡ ಮತ್ತು ಜಾತಿಗಳ ಆಮೀಷಕ್ಕೆ ಬಲಿಯಾಗಿ ಮತದಾನ ಮಾಡದೇ ಮತದಾರ ಪ್ರಭು ಜಾಗೃತವಾದ ಹೆಜ್ಜೆ ಇಡುವುದು ದೇಶದ ಭವಿಷ್ಯತ್ತಿನ ದೃಷ್ಟಿಯಲ್ಲಿ ತೀರಾ ಅವಶ್ಯಕ. ಇಂದು ಸಮಾಜ ಸೇವೆಯ ಹೆಸರಿನಲ್ಲಿ ರಾಜಕೀಯ ಧುರೀಣರು ಲಾಭ ಮಾಡಿಕೊಳ್ಳುವ ದಂಧೆಗೆ ಇಳಿದು ಬಿಟ್ಟಿದ್ದಾರೆ. ಈ ಸನ್ನಿವೇಶ ಬದಲಾಗಬೇಕಾದರೆ ಮತ್ತು ಉತ್ತಮ ಪ್ರಜಾಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕಾದರೆ ಮತದಾನ ನಿಷ್ಕಾಮ ಮತದಾನ ಆಗಬೇಕು, ಯಾವುದೇ ಪ್ರತಿಫಲಾಪೇಕ್ಷೆಗಳಿಲ್ಲದೇ ಮತವನ್ನು ಚಲಾಯಿಸಬೇಕೆಂಬ ಕಾರಣದಿಂದ ರಾಜಕೀಯ ತಜ್ಞರು ಮತ ಚಲಾಯಿಸುವ ಕ್ರಿಯೆಯನ್ನು ಮತದಾನ ಮತ್ತು ಅದೊಂದು ಪವಿತ್ರ ಕರ್ತವ್ಯವೆಂದು ಕರೆದಿದ್ದಾರೆ, ಭವ್ಯ ಭಾರತವನ್ನು ನಿರ್ಮಾಣ ಮಾಡುವ ಮಾತನ್ನಾಡುವವರು ಮನೆಯಲ್ಲಿ ಕೂರದೇ ಮತದಾನ ದಿನದಂದು ಮನೆಯಿಂದ ಹೊರಬಂದು ತಮ್ಮ ವಿವೇಚನೆಯಂತೆ ಉತ್ತಮ ಅಭ್ಯರ್ಥಿಗಳಿಗೆ ಮತ ಚಲಾಯಿಸಿದಾಗ ಸುಂದರ ನಾಡು ನಿರ್ಮಾಣ ಮಾಡಲು ಸಾಧ್ಯ, ಬರೀ ಮಾತನಾಡಿ ಮನೆಯಲ್ಲಿ ಕೂರುವುದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲವೆಂದು ಬೈರನಟ್ಟಿ ಶ್ರೀ ದೊರೆಸ್ವಾಮಿ ವಿರಕ್ತಮಠದ ಪೀಠಾಧಿಪತಿಗಳಾದ ಶ್ರೀ ಮ.ನಿ.ಪ್ರ. ಶಾಂತಲಿಂಗ ಸ್ವಾಮಿಗಳು ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ **೮-೫-೨೦೧೮** ರಂದು ಆಯೋಜಿಸಿದ್ದ **'ಕರ್ನಾಟಕ ವಿಧಾನಸಭಾ ಚುನಾವಣೆ-೨೦೧೮, ಮತದಾರರ ಜಾಗೃತಿ ಕಾರ್ಯಕ್ರಮ'**ದ ಸಾನಿಧ್ಯ ವಹಿಸಿ, ಮಾತನಾಡಿದ ಶ್ರೀ ಮ.ನಿ.ಪ್ರ. ಶಾಂತಲಿಂಗ ಸ್ವಾಮಿಗಳು, ಸಮಾಜದ ಅನಿಷ್ಠ ಪದ್ಧತಿಗಳು ತೊಲಗಬೇಕಾದಲ್ಲಿ ಭ್ರಷ್ಟಾಚಾರ ಬೇರು ಸಮೇತ ನಿರ್ಮೂಲವಾಗಬೇಕಿದ್ದಲ್ಲಿ ಮತದಾರ ಪ್ರಭು ಅತ್ಯಂತ ಜಾಗೃತನಾಗಿ ತನ್ನ ಮತ ಚಲಾಯಿಸಬೇಕೆಂದು ಮತ್ತು ಪ್ರತಿಯೊಬ್ಬ ಮತದಾರನಿಗೆ ಸಿಕ್ಕ ಅವಕಾಶವನ್ನು ತಪ್ಪದೇ ಬಳಸಿಕೊಂಡು ಮತದಾನ ಮಾಡಬೇಕೆಂದು, ಆ ಮೂಲಕ ಸಂವಿಧಾನದ ಆಶಯಗಳಿಗೆ ಬಲ ತುಂಬಬೇಕೆಂದು ಮತದಾರರಿಗೆ ಅವರು ಕರೆ ನೀಡಿದರು.

ಜನಪ್ರತಿನಿಧಿಗಳು ಮಾಡಬೇಕಾದ ಸಂವಿಧಾನಬದ್ಧ ಕರ್ತವ್ಯವನ್ನು ಮಾಡುವಲ್ಲಿ ಜನಪ್ರತಿನಿಧಿಗಳು ವಿಫಲವಾಗಿದ್ದರಿಂದ ಈ ದೇಶದ ನ್ಯಾಯಾಂಗ ವ್ಯವಸ್ಥೆ ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿರುವುದು ತುಂಬಾ ಸಂತೋಷದ ಸಂಗತಿಯಾಗಿದೆ ಎಂದು ಅತಿಥಿ ಸ್ಥಾನದಿಂದ ಮಾತನಾಡಿದ ಹಿರಿಯ ನ್ಯಾಯವಾದಿಗಳು ಮತ್ತು ಶ್ರೀ ಸಿದ್ಧಾರೂಢಸ್ವಾಮಿ ಮಠದ ಧರ್ಮದರ್ಶಿಗಳಾದ ಶ್ರೀ ಕೆ.ಎಲ್. ಪಾಟೀಲ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ದೇಶದ ಸರ್ವೋಚ್ಚನ್ಯಾಯಾಲಯದ ತೀರ್ಪಿನ ನಿರ್ದೇಶನದಂತೆ ಪ್ರತಿಯೊಂದು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಪ್ರಮಾಣ ಪತ್ರಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ, ಈ ಪ್ರಮಾಣ ಪತ್ರಗಳ ಮೂಲಕ ಅಭ್ಯರ್ಥಿಯ ನಡೆ–ನುಡಿಗಳನ್ನು ಮತ್ತು ನಡತೆಯನ್ನು ಸಾರ್ವಜನಿಕರ ಗಮನಕ್ಕೆ ತಂದು, ಅಭ್ಯರ್ಥಿಯ ಹಿನ್ನೆಲೆಯನ್ನು ಅರಿತುಕೊಂಡು ಮತದಾರ ಜಾಗೃತನಾಗಿ ತನ್ನ ಪ್ರತಿನಿಧಿಗಳನ್ನು ಆಯ್ಕೆಮಾಡಿಕೊಳ್ಳಬೇಕೆಂಬುದು ಸರ್ವೋಚ್ಚನ್ಯಾಯಾಲಯದ ಆಶಯವಾಗಿದೆ. ಆದುದರಿಂದಲೇ ಅಭ್ಯರ್ಥಿಗಳು ಸಲ್ಲಿಸುವ ಪ್ರಮಾಣ ಪತ್ರದಲ್ಲಿ ಅಭ್ಯರ್ಥಿಗಳ ಅಪರಾಧಿಕ ಹಿನ್ನೆಲೆಯ ಬಗ್ಗೆ ಘೋಷಣೆ ಮಾಡುವುದನ್ನು ಸರ್ವೋಚ್ಚನ್ಯಾಯಾಲಯ ಕಡ್ಡಾಯ ಮಾಡಿದೆ. ಅಭ್ಯರ್ಥಿಗಳು ತಮ್ಮ ಅಪರಾಧಿಕ ಹಿನ್ನೆಲೆಯನ್ನು ಪ್ರಮಾಣ ಪತ್ರಗಳ ಮೂಲಕ ಘೋಷಣೆ ಮಾಡಿದಾಗ, ಅಂತಹ ವ್ಯಕ್ತಿಚಿತ್ರಣ ಮತದಾರನ ಕಣ್ಣೆದುರಿಗೆ ಬಂದು, ಉತ್ತಮ ಆಯ್ಕೆಗೆ ದಾರಿಯಾಗುವುದು, ಆ ಮೂಲಕ ದೇಶದ ಉನ್ನತಿಗಾಗಿ ಶ್ರಮಿಸುವ ಪ್ರಾಮಾಣಿಕ ಅಭ್ಯರ್ಥಿಗಳ ಸಾಧ್ಯತೆ ಇದೆ ಎಂದು ಅವರು ಮುಂದುವರೆದು ಮಾತನಾಡುತ್ತಾ ಹೇಳಿದರು.

ಖ್ಯಾತ ಮಕ್ಕಳ ತಜ್ಞರಾದ ಡಾ. ರಾಜನ್ ದೇಶಪಾಂಡೆ ಅವರು, ಮತ ಚಲಾಯಿಸುವುದು ನಮ್ಮ ಕರ್ತವ್ಯ, ನಮ್ಮ ಹಕ್ಕು, ನಮ್ಮ ವಿಶೇಷ ಅಧಿಕಾರ, ಚುನಾವಣೆಗಳು ಬಂದಾಗ ನಮಗೆ ಸಿಗುವ ಅಪರೂಪದ ಗೌರವ, ಇದೊಂದು ಪವಿತ್ರ ಕರ್ತವ್ಯ ಎಂಬುದನ್ನು ಮತದಾರ ಅರ್ಥೈಸಿಕೊಳ್ಳುವಲ್ಲಿ ಮತದಾರ ವಿಫಲನಾಗಿರುತ್ತಾನೆ, ಅಭ್ಯರ್ಥಿಯ ವ್ಯಕ್ತಿತ್ವ ಮತ್ತು ಚಾರಿತ್ರ್ಯ ನೋಡಿ ಮತ ನೀಡಬೇಕು ವಿನಃ, ಅಭ್ಯರ್ಥಿಯ ಖೊಟ್ಟಿ ಜನಪ್ರಿಯತೆ, ಜಾತಿಯತೆ ನೋಡಿ ಮತ ಚಲಾಯಿಸುವುದು ಉಚಿತವಲ್ಲ, ಜಾತಿ ಬಿಡಿ–ನೀತಿ ನೋಡಿ ಮತ ಚಲಾಯಿಸಿ, ಸಿಕ್ಕ ಅವಕಾಶ ಬಳಸಿಕೊಂಡು ಯಾರಿಗೆ ಓಟು ಹಾಕಬೇಕೆಂದು ನಿರ್ಧರಿಸಿ, ಮತದಾರ ಮತ ಚಲಾಯಿಸಿದಾಗ ಮಾತ್ರ ಒಳ್ಳೆಯ ಸರಕಾರಗಳನ್ನು ನಿರೀಕ್ಷೆ ಮಾಡಬಹುದು, ಮತದಾನ ಮಾಡದೇ ನಂತರದಲ್ಲಿ ಸರಕಾರಗಳು ಸರಿಯಿಲ್ಲ ಅಂತಾ ಮಾತನಾಡುವ ನೈತಿಕ ಹಕ್ಕು ಇರುವುದಿಲ್ಲ. ಆದುದರಿಂದ ಪ್ರತಿಯೊಬ್ಬ ಮತದಾರನು ಮತ ಚಲಾಯಿಸುವುದು ತನ್ನ ಆದ್ಯ ಕರ್ತವ್ಯವೆಂದು ಮತದಾನ ಮಾಡುವಂತೆ ಮತ್ತು ರಾಜಕೀಯ ಮುಖಂಡರ ಬಣ್ಣದ ಮಾತುಗಳಿಗೆ ಆಕರ್ಷಿತರಾಗಿ ಮತ ಚಲಾಯಿಸದೇ, ಅಭ್ಯರ್ಥಿಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ಯೋಗ್ಯ, ಸುಶಿಕ್ಷಿತ ಹಾಗೂ ಸಾಮಾಜಿಕ ಬದ್ಧತೆ ಇರುವ ಅಭ್ಯರ್ಥಿಗಳಿಗೆ ಮತ ಚಲಾಯಿಸಿ ಎಂದು ಮತದಾರರಲ್ಲಿ ಡಾ. ರಾಜನ್ ದೇಶಪಾಂಡೆ ವಿನಂತಿಸಿದರು. ಡಾ. ರಾಜನ್ ದೇಶಪಾಂಡೆ ಅವರು ಅತಿಥಿಗಳ ಸ್ಥಾನದಿಂದ ಮಾತನಾಡುತ್ತಾ ಮತದಾರರಿಗೆ ಕರೆ ನೀಡಿದರು.

ಸಭ್ಯ ಸಮಾಜ ನಿರ್ಮಾಣವಾಗಬೇಕು ಎಂದು ಬಯಸುವ ಮತದಾರ ಪ್ರಭು ಮನೆಯಿಂದ ಆಚೆ ಬಂದು ಆತನ ಆತ್ಮಸಾಕ್ಷಿಗೆ ಅನುಗುಣವಾಗಿ ಅರ್ಹ ಮತ್ತು ಸಮಾಜಮುಖಿ ಶುದ್ಧಹಸ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳುವ ಅನಿವಾರ್ಯ ಪರಿಸ್ಥಿತಿಯಲ್ಲಿ ಇಂದಿನ ಸಮಾಜವಿದೆ, ಮತದಾರ ತನ್ನ ಜವಾಬ್ದಾರಿಯನ್ನು ಮರೆತರೆ ಸಭ್ಯ ಸಮಾಜ ಮತ್ತು ಉತ್ತಮ ಸರಕಾರಗಳು ಹೇಗೆ ತಾನೆ ಮೂಡಿಬಂದಾವು, ಅನೇಕತೆಯಲ್ಲಿ ಏಕತೆಯನ್ನು ಮತ್ತು ಅದರ ವಿಸ್ಮಯತೆಯನ್ನು ಮಾತನಾಡುವ ಮತದಾರರು ಚುನಾವಣೆ ಬಂದಾಗ ಈ ವಿಸ್ಮತೆಯನ್ನು ಮರೆಯದೇ ಜಾಗೃತ ಹೆಜ್ಜೆ ಇಡಬೇಕು, ಬಹಳ ಆಶಾ ಭಾವನೆಯಿಂದ ನಡೆಯುವ ಚುನಾವಣೆಯಲ್ಲಿ ಮತದಾರ ಪ್ರಭು ಜಾಗೃತ ಹೆಜ್ಜೆ ಇಡದ ಪರಿಣಾಮವಾಗಿ ನಿರಾಶದಾಯಕ ಫಲಿತಾಂಶಗಳನ್ನು ಕಂಡಿದ್ದೇವೆ, ಈ ನಿರಾಶದಾಯಕ ಫಲಿತಾಂಶಕ್ಕೆ ಸುಶಿಕ್ಷಿತರು ತಮ್ಮನ್ನು ತಾವೆ ಕರೆದುಕೊಂಡು ಹೆಮ್ಮೆಪಡುವವರು ಬೇಜವಾಬ್ದಾರಿಯಿಂದ ಮತ ಚಲಾಯಿಸದೆ ಇರುವುದೇ ಪ್ರಾಮುಖ್ಯ ಕಾರಣ, ಮಹಿಳೆಯರ, ಮಕ್ಕಳ, ಹಿಂದುಳಿದವರ ಮತ್ತು ರೈತರ ಏಳ್ಗೆ ಮಾಡುತ್ತೇವೆ ಎಂದು ಸುಳ್ಳು ಭರವಸೆ ನೀಡಿ ವಂಚಿಸಿರುವುದನ್ನು ಈ ಸಮಾಜ ಕಂಡಿದೆ, ಆದ್ದರಿಂದ ಮತದಾರ 'ಓಟಬ್ಯಾಂಕ್' ಆಗದೇ ರಾಜಕಾರಣಿಗಳ ತಾಳಕ್ಕೆ ತಕ್ಕಂತೆ ಕುಣಿದು ದುರ್ಬಳಕೆಯಾಗದೆ ಕನಿಷ್ಠ ದೃಷ್ಟಿಕೋನ ಇಟ್ಟುಕೊಂಡು ಪ್ರಾಮಾಣಿಕ ವ್ಯಕ್ತಿ ಕೇಂದ್ರಿಕೃತ ಮತದಾನ ಮಾಡುವುದು ತೀರಾ ಉಚಿತ ಎಂದು ಮುಖ್ಯ ಅತಿಥಿಗಳ ಸ್ಥಾನದಲ್ಲಿ ಮಾತನಾಡಿದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಖ್ಯಾತ ಭಾಷಾ ತಜ್ಞರಾದ ಡಾ.ರಾಜೇಶ್ವರಿ ಮಹೇಶ್ವರಯ್ಯಾ ಅವರು ನುಡಿದರು.

ಚುನಾವಣೆ ಬಂದಾಗ ರೊಕ್ಕ, ಜಾತಿ, ಅಭ್ಯರ್ಥಿಯು ಮಾಡಿದ ವೈಯಕ್ತಿಕ ಉಪಕಾರಗಳ ಪ್ರತಿಫಲವೆಂದು ಮತದಾನ ಮಾಡುವ ಸಂಪ್ರದಾಯ ಬಹುಸಂಖ್ಯಾತ ಮತದಾರರು ಹಾಕಿಕೊಂಡಿರುವುದರಿಂದ, ಮತದಾರನಿಗೆ ರಾಜಕೀಯ ಮುಖಂಡರುಗಳಿಗೆ ನೇರವಾಗಿ ಪ್ರಶ್ನೆ ಮಾಡುವ ನೈತಿಕ ಬಲವಿಲ್ಲ, ಯೋಗ್ಯವಲ್ಲದ ಅಭ್ಯರ್ಥಿಯ ಮುಖದ ಮೇಲೆ ನಿನಗೆ ಓಟು ನೀಡುವುದಿಲ್ಲ ಎಂದು ಹೇಳುವ ಧೈರ್ಯ ಮತದಾರನಲ್ಲಿ ಇರುವುದು ಶೋಚನೀಯ ಸ್ಥಿತಿ, ಕಾರಣ ಮತದಾರರನ್ನು ಯಾವುದೇ ಪ್ರತಿಫಲವಿಲ್ಲದೆ ಮತ ನೀಡುವಂತೆ ಹುರಿದುಂಬಿಸಿ ಜಾಗೃತಿ ಮೂಡಿಸಬೇಕಾಗಿದೆ, ಎಲ್ಲಿಯವರೆಗೆ ನಮ್ಮಲ್ಲಿ ಜಾತಿ–ಒಳಜಾತಿಗಳ ಪ್ರೇಮವಿರುವುದೋ ಮತ್ತು ಎಲ್ಲಿಯವರೆಗೆ ಹಣ ಮತ್ತು ಹೆಂಡದ ಆಮಿಷಕ್ಕೆ ಒಳಗಾಗಿ ಮತ ಚಲಾಯಿಸುವ ಪ್ರವೃತ್ತಿ ನಮ್ಮಲ್ಲಿರುವುದೋ ಅಲ್ಲಿಯವರೆಗೆ ಚಮತ್ಕಾರವನ್ನು ನಾವು ನಿರೀಕ್ಷೆ

ಮಾಡಲಾಗದು. ಕಾರಣ ನಾವು ತಿನ್ನುವುದು, ಕುಡಿಯುವುದು ಬಿಟ್ಟು ಪ್ರಾಮಾಣಿಕ ಮತದಾರನಾಗಬೇಕೆಂದು ಮತದಾರರನ್ನು ಎಚ್ಚರಿಸುತ್ತಿದ್ದೇನೆ ಎಂದು ಖ್ಯಾತ ನ್ಯಾಯವಾದಿಗಳು, ಕಾನೂನು ಅರಿವು ಕಾರ್ಯಕ್ರಮಗಳ ಹರಿಕಾರ ಮತ್ತು ಸಾಹಿತಿ ಶ್ರೀ ವೆಂಕಟೇಶ ಕುಲಕರ್ಣಿ ಅತಿಥಿ ಸ್ಥಾನದಿಂದ ಮಾತನಾಡುತ್ತಾ ಹೇಳಿದರು.

ರಾಷ್ಟ್ರೀಯ ನಾಯಕರು ಜನಸಾಮಾನ್ಯರಿಗೆ ತಮ್ಮ ಭಾಷೆ, ನಡೆ ಮತ್ತು ನುಡಿಗಳ ಮೂಲಕ ಆದರ್ಶಪ್ರಾಯರಾಗಿರಬೇಕು. ಇಡೀ ಸಮಾಜ ಅವರನ್ನು ಅನುಕರಿಸಲು ಕೌತುಕದಿಂದ ಅವರ ಹೆಜ್ಜೆಗಳನ್ನು ನೋಡುತ್ತಿರುತ್ತದೆ, ಕಾರಣ ರಾಷ್ಟ್ರೀಯ ನಾಯಕರು ಮಾತನಾಡುವಾಗ ಸಮಾಜದ ಮೇಲೆ ದುಷ್ಪರಿಣಾಮ ಬೀರುವ ರೀತಿಯಲ್ಲಿ ಭಾಷೆಗಳನ್ನು ಬಳಸದೆ, ತಮ್ಮ ಮಾತುಗಳ ಮೇಲೆ ಹಿಡಿತ ಇಟ್ಟುಕೊಳ್ಳುವುದು ಯೋಗ್ಯ, ನಾಯಕರ ದೃಷ್ಟಿಕೋನ ಮತ್ತು ಸಮಾಜ ಮುನ್ನಡೆಸುವ ಶಕ್ತಿ ಮತದಾರನಿಗೆ ದಾರಿದೀಪಗಳಿದ್ದಂತೆ, ಮತದಾರ ಇವುಗಳನ್ನು ಅರಿತು ಯೋಗ್ಯ ಮತ್ತು ಆದರ್ಶಪ್ರಾಯರಾದ, ಸಾಮಾಜಿಕ ಬದ್ಧತೆ ಹೊಂದಿದ, ಸಾಮಾಜಿಕ ಜೀವನದಲ್ಲಿ ತಪ್ಪು ಎಸಗದ ವ್ಯಕ್ತಿಗಳನ್ನು ನೋಡಿ ಮತ ಚಲಾಯಿಸಬೇಕೆಂದು ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಹೇಳಿದರು.

ಮತದಾನದ ದಿನ ಸಾರ್ವಜನಿಕ ರಜೆಯ ದಿನವಾಗಿರುವುದರಿಂದ, ಆ ದಿನ ಮೋಜಿನ ದಿನವಾಗಿ ಅಥವಾ ವಿಶ್ರಾಂತಿಯ ದಿನವಾಗಿ ಮತದಾರ ಮತ ಚಲಾಯಿಸದೇ ದೂರು ಉಳಿಯುತ್ತಿದ್ದಾನೆ, ಮತದಾನದ ಮಹತ್ವ ಸಾರುವ ಸಲುವಾಗಿ ಸಾಮಾಜಿಕ ಕಳಕಳಿ ಇರುವ ಕರ್ನಾಟಕ ವಿದ್ಯಾವರ್ಧಕ ಸಂಘ ಮತದಾರರಲ್ಲಿ ಜಾಗೃತಿ ಮೂಡಿಸಿ, ಹೆಚ್ಚಿನ ಪ್ರಮಾಣದ ಮತ ಚಲಾವಣೆಯಾಗಬೇಕು ಮತ್ತು ಮತದಾನ ಶಾಂತಯುತವಾಗಿ ನಡೆಯಬೇಕೆಂಬ ಸದುದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಕೋಶಾಧ್ಯಕ್ಷರಾದ ಶ್ರೀ ಕೃಷ್ಣ ಜೋಶಿ ತಿಳಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ಜಯಶ್ರೀ ಜಾತಿಕರ್ತ ಕನ್ನಡ ಗೀತೆ ಹಾಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ನ್ಯಾಯವಾದಿ ಶ್ರೀಮತಿ ಪ್ರಫುಲ್ಲಾ ನಾಯಕ ಸ್ವಾಗತಿಸಿದರೆ, ಸಂಘದ ಸಹ ಕಾರ್ಯದರ್ಶಿ ಶ್ರೀ ಸದಾನಂದ ಶಿವಳ್ಳಿ ಅವರು ವಂದನಾರ್ಪಣೆಗೈದರು. 'ಮತ ಶಕ್ತಿಯೇ ಜನ ಶಕ್ತಿ' ಎಂಬ ಕವಿತೆಯನ್ನು ಗಂಗಾಧರ ಗಡಾದ ಕಾರ್ಯಕ್ರಮದಲ್ಲಿ ಹಾಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಶಂಕರ ಕುಂಬಿ ಕಾರ್ಯಕ್ರಮ ನಿರೂಪಣೆ ಮಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಕಾರಿ ಸಮಿತಿ ಸದಸ್ಯರಾದ ವಿಶ್ವೇಶ್ವರಿ ಹಿರೇಮಠ, ಎಸ್.ಬಿ. ಗಾಮನಗಟ್ಟಿ ಉಪಸ್ಥಿತರಿದ್ದರು.

೪. **ಜಿಲ್ಲಾಧಿಕಾರಿಗಳಿಗೆ ಮನವಿ :**

ಕಳೆದ ೧೨೮ ವರ್ಷಗಳಿಂದ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಹಾಗೂ ನೆಲ-ಜಲ, ನುಡಿ-ಗಡಿಗಳ ರಕ್ಷಣೆಗಾಗಿ ಸ್ಮರಣೀಯ, ಗಣನೀಯ ಸೇವೆಯನ್ನು ಅವ್ಯಾಹತವಾಗಿ ಸಲ್ಲಿಸುತ್ತಲೇ ಬಂದಿರುವ ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಐದು ಎಕರೆ ಭೂಮಿಯನ್ನು ಮಂಜೂರು ಮಾಡುವುದಾಗಿ ಮುಖ್ಯಮಂತ್ರಿಗಳು ನೀಡಿದ್ದ ವಾಗ್ದಾನದಂತೆ ಐದು ಎಕರೆ ಜಾಗೆಯನ್ನು ಕೂಡಲೇ ಮಂಜೂರು ಮಾಡಬೇಕು ಎಂದು ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು ರಾಜ್ಯ ಸರಕಾರ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಆಗ್ರಹಿಸಿದೆ.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಕೋಶಾಧ್ಯಕ್ಷ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಸತೀಶ ತುರಮರಿ, ಶಾಂತೇಶ ಗಾಮನಗಟ್ಟಿ ಹಾಗೂ ಎಸ್. ಎಂ. ರಾಚಯ್ಯನವರ, ಎಸ್. ಆಯ್. ಭಾವಿಕಟ್ಟಿ, ಬಸಲಿಂಗಯ್ಯ ಹಿರೇಮಠ, ವಾಯ್. ಸಿ. ಬಿಜಾಪುರ ಇವರನ್ನು ಒಳಗೊಂಡ ನಿಯೋಗವು ಅಪರ ಜಿಲ್ಲಾಧಿಕಾರಿ ರಮೇಶ ಕಳಸದರವರಿಗೆ ಈ ಬಗ್ಗೆ ಮನವಿಯನ್ನು ಸಲ್ಲಿಸಿತು. ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಜಾಗೆಯ ಅವಶ್ಯಕತೆಯ ಬಗ್ಗೆ ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಅವರು ಅಪರ ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

೨೦೧೭ ಜುಲೈ ೨೦ ರಂದು ನಡೆದ ಕರ್ನಾಟಕ ವಿದ್ಯಾವರ್ಧಕ ಸಂಘದ ೧೨೮ ನೇ ಸಂಸ್ಥಾಪನಾ ದಿನಾಚರಣೆ ಸಂದರ್ಭದಲ್ಲಿ ಭಾಗವಹಿಸಿದ್ದ ಅಂದಿನ ಮುಖ್ಯಮಂತ್ರಿ ಮಾನ್ಯಶ್ರೀ ಸಿದ್ಧರಾಮಯ್ಯನವರಿಗೆ ಐದು ಎಕರೆ ಜಾಗೆಯನ್ನು ಮಂಜೂರು ಮಾಡಬೇಕೆಂದು ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮನವಿಯನ್ನು ಸಲ್ಲಿಸಿದ್ದರು. ಮನವಿಯನ್ನು ಸ್ವೀಕರಿಸಿದ್ದ ಅಂದಿನ ಮುಖ್ಯಮಂತ್ರಿಗಳು ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಐದು ಎಕರೆ ಭೂಮಿಯ ವಾಗ್ದಾನ ಮಾಡಿ, ಈ ಬಗ್ಗೆ ಕೂಡಲೇ ಕ್ರಮಕೈಕೊಳ್ಳಬೇಕೆಂದು ಸ್ಥಳದಲ್ಲಿ ಉಪಸ್ಥಿತರಿದ್ದ ಮಾನ್ಯ ಜಿಲ್ಲಾಧಿಕಾರಿಗಳಿಗೆ ಅವರು ಆದೇಶ ನೀಡಿದ್ದನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಮನವಿಯನ್ನು ಸ್ವೀಕರಿಸಿದ ಅಪರ ಜಿಲ್ಲಾಧಿಕಾರಿ ರಮೇಶ ಕಳಸದ ಅವರು ಈ ಬಗ್ಗೆ ಕೂಡಲೇ ಕ್ರಮಕೈಕೊಳ್ಳುವುದಾಗಿ ಹೇಳಿದ್ದಾರೆ ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

೫. **ತತ್ವಪದಗಳ ಕಾರ್ಯಕ್ರಮ :**

ಮನುಷ್ಯ ಜೀವನದಲ್ಲಿ ಹಾಗೂ ಸಮಾಜದಲ್ಲಿ ಉತ್ತಮವಾದ ಬದುಕನ್ನು ರೂಪಿಸಿಕೊಳ್ಳಲು ತತ್ವಜ್ಞಾನಿಗಳು, ವಚನಕಾರರು, ದಾಸರು, ಸಂತರು, ಮಹಾನುಭಾವರು ತತ್ವಪದಗಳ ಮೂಲಕ ನಮಗೆ ಹಾದಿಗಳನ್ನು ಹಾಕಿಕೊಟ್ಟಿದ್ದಾರೆ. ಆ ತತ್ವದ ಅಡಿಯಲ್ಲಿ ನಮ್ಮ ಜೀವನವನ್ನು ನಡೆಸಿದಲ್ಲಿ ನಾವು ಪರಿಪೂರ್ಣವಾದ ಬದುಕನ್ನು ಕಟ್ಟಿಕೊಳ್ಳಬಹುದಾಗಿದೆ ಎಂದು ಇಟಿಗಟ್ಟಿಯ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಕಲಾವಿದರಾದ ಪ್ರಭು ಕುಂದರಗಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೨೬-೬-೨೦೧೮** ರಂದು ಆಯೋಜಿಸಿದ್ದ **'ತತ್ವ ಪದಗಳು'** ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅಗಮಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಪ್ರಭು ಕುಂದರಗಿ ಅವರು, ಅನೇಕ ಮಹಾನುಭಾವರ ತತ್ವಪದಗಳನ್ನು ಕ್ರೋಢಿಕರಿಸಿ ಗ್ರಂಥ ರೂಪದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಹೊರ ತಂದು ಇಂದಿನ ಸಮಾಜಕ್ಕೆ ನೀಡಬೇಕಾಗಿರುವುದು ಅತ್ಯವಶ್ಯವಾಗಿದೆ ಎಂದ ಅವರು ಸೊಗಸಾಗಿ ತತ್ವಪದಗಳನ್ನು ಹಾಡುವ ಮೂಲಕ ತಮ್ಮ ಕಲಾ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ನಿವೃತ್ತ ಶಿಕ್ಷಣಾಧಿಕಾರಿಗಳಾದ ಶಾಂತೇಶ ಬ. ಗಾಮನಗಟ್ಟಿ ಮಾತನಾಡಿ, ತತ್ವಪದಗಳಲ್ಲಿ ನಾವು ಜೀವನದ ಮೌಲ್ಯಗಳನ್ನು ಕಾಣುತ್ತೇವೆ. ಸಿದ್ಧಾರೂಢರು, ನವಲಗುಂದ ನಾಗಲಿಂಗ ಸ್ವಾಮಿಗಳು, ಗರಗದ ಮಡಿವಾಳಪ್ಪನವರು, ಶಿಶುನಾಳ ಶರೀಫರು ಸೇರಿದಂತೆ ಅನೇಕ ಮಹನೀಯರು ತತ್ವಶಾಸ್ತ್ರದ ಮೂಲಕ ಜನರಿಗೆ ತಿಳುವಳಿಕೆ ನೀಡಿ, ಜನರನ್ನು ಸಾಮಾಜಿಕವಾಗಿ ತಿದ್ದುವ ಕೆಲಸ ಮಾಡಿದ್ದು ಸ್ಮರಣೀಯ ಎಂದ ಅವರು ಅಡಿವೆಪ್ಪ ಕುರಿಯವರ ಅವರ ಪ್ರಾಸ ಬದ್ಧವಾದ ತತ್ವಪದ ಹಾಡುಗಾರಿಕೆಯನ್ನು ಶ್ಲಾಘಿಸಿದರು.

ಮೊಟೆಬೆನ್ನೂರಿನ ತತ್ವಪದ ಕಲಾವಿದ ಅಡಿವೆಪ್ಪ ಸಣ್ಣಬೀರಪ್ಪ ಕುರಿಯವರ ಅವರು ತತ್ವ ಪದಗಳನ್ನು ಸುಶ್ರಾವ್ಯವಾಗಿ ಹಾಡಿ, ನೆರೆದ ಸಭಿಕರನ್ನ ಮನಸೂರೆಗೊಳಿಸಿದರು. ಇವರಿಗೆ ತಾಳದಲ್ಲಿ ತಿಪ್ಪಣ್ಣ ಕುರಿಯವರ, ದಪ್ಪದಲ್ಲಿ ರೇವಣಪ್ಪ ಬೇವಿನಮರದ ಹಾಗೂ ಹಿಮ್ಮೇಳದಲ್ಲಿ ಬಸವರಾಜ ಗೊರವರ ಸಾಥ್ ನೀಡಿದರು.

ವೇದಿಕೆಯಲ್ಲಿ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶಿವಾನಂದ ಆಮರಶೆಟ್ಟಿ ಹಾಗೂ ಜಿ.ಟಿ. ದೊಡಮನಿ ಅವರಿಂದ ಪ್ರಾರ್ಥನೆ ಜರುಗಿತು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಿವಾನಂದ ಭಾವಿಕಟ್ಟಿ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು.

೬. **ಸಂತ ಶಿಶುನಾಳ ಶರೀಫರ ಜಯಂತಿ ಮತ್ತು ಶರೀಫರ ತತ್ವಪದಗಳ ಗಾಯನ :**

**"**ಕರ್ನಾಟಕದ ಕಬೀರ**"** ಎಂದು ಹೆಸರಾದ ಶಿಶುವಿನಹಾಳದ ಸಂತ ಶರೀಫರ ತತ್ವಪದಗಳು ನಾಡಿನಲ್ಲಿ ಭಾವೈಕ್ಯತೆಯನ್ನು ಬೆಳೆಸಿವೆ. ಅವರ ಸತ್ವಪೂರ್ಣ ತತ್ವಪದಗಳು ಯಾವುದೇ ಜಾತಿಗೆ ಮೀಸಲಾಗಿಲ್ಲ. ಸಮಾಜದಲ್ಲಿಯ ಅಂಕುಡೊಂಕುಗಳನ್ನು ತಿದ್ದುವಲ್ಲಿ ಅವರ ಈ ತತ್ವಪದಗಳು ನಮಗೆ ದಾರಿದೀಪಗಳಾಗಿವೆ. ಶಿಶುನಾಳ ಶರೀಫರಂಥ ಮಹಾಮಹೀಮರ ತತ್ವ ಆದರ್ಶಗಳನ್ನು, ಅವರ ಹಾಡುಗಳನ್ನು ಕೇಳುವುದೇ ಒಂದು ಭಾಗ್ಯವಾಗಿದೆ. ಅವುಗಳಿಂದ ನಮ್ಮ ಜೀವನದಲ್ಲಿ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ. ಇಂದಿನ ಯುವಜನಾಂಗ ಹಿರಿಯರ ತತ್ವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ಶಕ್ತಿಶಾಲಿ ಸಮಾಜವನ್ನು ಕಟ್ಟುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ**"** ಎಂದು ಧಾರವಾಡ ಜಿಲ್ಲಾ ಪಂಚಾಯತ ಅಧ್ಯಕ್ಷರಾದ ಶ್ರೀಮತಿ ಚೈತ್ರಾ ಶಿರೂರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಜಾನಪದ ಸಂಶೋಧನಾ ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ **೩-೭-೨೦೧೮** ರಂದು ಆಯೋಜಿಸಿದ್ದ **'ಸಂತ ಶಿಶುನಾಳ ಶರೀಫ ಜಯಂತಿ ಆಚರಣೆ-೨೦೧೮'** ಮತ್ತು **'ಶರೀಫರ ತತ್ವಪದಗಳ ಗಾಯನ ಕಾರ್ಯಕ್ರಮ'**ದಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿ, ಅವರು ಮಾತನಾಡುತ್ತಿದ್ದರು.

ಭಾರತವು ಜಾತ್ಯಾತೀತ ರಾಷ್ಟ್ರವಾಗಿದ್ದು ನಾವು ಭಾವೈಕ್ಯತೆಗೆ ಹೆಸರಾಗಿದ್ದೇವೆ. ನಾವು ಮೊದಲು ಭಾರತೀಯರು ಎಂಬುದನ್ನು ಮನದಲ್ಲಿಟ್ಟುಕೊಂಡು ಯಾವುದೇ ಕ್ಷೇತ್ರದಲ್ಲಿದ್ದರೂ ಕೂಡ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂಬುದನ್ನು ಒತ್ತಿ ಹೇಳಿದ ಅವರು, ಉತ್ತಮ ಸಮಾಜ ನಿರ್ಮಾಣ ಮಾಡುವುದರಲ್ಲಿ ಮಹಿಳೆಯರ ಪಾತ್ರವು ಮಹತ್ವದ್ದಾಗಿದೆ. ಸಂಗೀತವು ಸಹ ನಮ್ಮ ಜೀವನದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದು, ಮನಸ್ಸಿಗೆ ಆನಂದವನ್ನು ಕೊಡುತ್ತದೆ ಎಂದರು.

ಮುಖ್ಯಅತಿಥಿಗಳಾಗಿ ಮಾತನಾಡಿದ ಕಾನೂನು ತಜ್ಞ ಡಾ. ಲೋಹಿತ ನಾಯ್ಕರ ಮಾತನಾಡಿ, ಸಮಾಜವನ್ನು ತಿದ್ದಿ, ಸುಧಾರಿಸಿ, ಶುದ್ಧಿಕರಿಸಿ ಸಮಾಜವನ್ನು ಒಳ್ಳೆಯ ಹಾದಿಗೆ ತಂದ ಶಿಶುನಾಳ ಶರೀಫರು ಮಹಾನ್ ವ್ಯಕ್ತಿಗಳಾಗಿದ್ದಾರೆ. ಇಂದು ಸಮಾಜದಲ್ಲಿ ನಡೆಯುತ್ತಿರುವ ಹೀನಾಯ ಕೃತ್ಯಗಳು, ದೌರ್ಜನ್ಯಗಳು, ಮೂಢನಂಬಿಕೆಗಳು, ಮಹಿಳೆಯರ ಮೇಲೆ

ಅತ್ಯಾಚಾರ ಆಗುವುದನ್ನು ನಾವು ನೋಡುತ್ತಿದ್ದೇವೆ. ಇವುಗಳನ್ನು ಕಾನೂನಿಂದ ಮಾತ್ರ ತಿದ್ದಲು ಸಾಧ್ಯವಿಲ್ಲ. ಮನುಷ್ಯರು ಮನುಷ್ಯರನ್ನು ಪ್ರೀತಿಸುವ ಗುಣವನ್ನು ಬೆಳೆಸಿಕೊಳ್ಳಬೇಕಾಗಿದೆ. ಅಭಿವೃದ್ಧಿ ಎಂದರೆ ಬಾಹ್ಯವಾದದ್ದು ಅಲ್ಲ. ನಮ್ಮಲ್ಲಿಯ ಒಳ್ಳೆಯ ಗುಣಗಳು ಸಮೃದ್ಧಿಯಾಗಿ ಹೊರಹೊಮ್ಮಬೇಕಾಗಿದೆ ಎಂದರು.

ಮತ್ತೊಬ್ಬ ಅತಿಥಿ ಕ.ವಿ.ವ. ಸಂಘದ ಕೋಶಾಧ್ಯಕ್ಷ ಹಾಗೂ ಗೋವಿಂದ ಭಟ್ಟರ ವಂಶಸ್ಥ ಕೃಷ್ಣ ಜೋಶಿ ಮಾತನಾಡಿ, ಜಾತೀಯತೆ ಬಲಾಢ್ಯವಾದ ಸನ್ನಿವೇಶದಲ್ಲಿ ಮುಸಲ್ಮಾನ ಧರ್ಮದ ಶರೀಫರನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ಬಹು ಹಿಂದೆಯೇ ಭಾವೈಕ್ಯದ ಸಂದೇಶವನ್ನು ಸಾರಿದ್ದ ಗೋವಿಂದ ಭಟ್ಟರು ಬಹು ದೊಡ್ಡ ಸಮಾಜ ಸುಧಾರಕರಾಗಿದ್ದರು ಎಂದರು. ಶರೀಫ ಮತ್ತು ಗೋವಿಂದಭಟ್ಟರು ಒಂದು ಬಗೆಯ ಕ್ರಾಂತಿಕಾರರೆಂದೇ ಹೇಳಬಹುದಾಗಿದ್ದು, ಶರೀಫರ ತತ್ವಗಳು ನಿತ್ಯನಿರಂತರವಾಗಿವೆ, ಸಮಾಜಕ್ಕೆ ಮಾರ್ಗದರ್ಶಿಯಾಗಿವೆ. ರಾಮಕೃಷ್ಣಪರಮಹಂಸರು–ವಿವೇಕಾನಂದರು, ಗೋವಿಂದ ಭಟ್ಟರು–ಶರೀಫ ಸಾಹೇಬ ಇವರು ಅಪೂರ್ವ ಗುರು ಶಿಷ್ಯರ ಜೋಡಿ ಎಂದು ವರ್ಣಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯ ನಿರ್ದೇಶಕರಾದ ಸಿದ್ಧಲಿಂಗೇಶ ರಂಗಣ್ಣವರ ಮಾತನಾಡಿ, ಶರೀಫರು ಮತ್ತು ಗೋವಿಂದ ಭಟ್ಟರು ಸರ್ವಧರ್ಮಗಳ ಶಾಂತಿಯ ತೋಟದ ಕನಸನ್ನು ಕಂಡಿದ್ದರು. ಶರೀಫರ ಒಂದೊಂದು ಪದಗಳಲ್ಲಿ ಸಮಾಜದ ಸುಧಾರಣೆ ಧ್ಯೇಯಗಳೇ ಕಂಡು ಬರುತ್ತವೆ. ಯಾವುದೇ ಪದವಿಗಳನ್ನು ಪಡೆಯದ ಇವರು ಇಂದು ಸಮಾಜ ಮಾಡುವ ಕಾರ್ಯಕ್ಕಿಂತ ಹೆಚ್ಚಿನ ಕಾರ್ಯಗಳನ್ನು ತಮ್ಮ ತತ್ವಪದಗಳ ಮೂಲಕ ತೋರಿಸಿದ್ದಾರೆ. ಆಧ್ಯಾತ್ಮದ ಅದ್ಭುತವಾದ ಸಾಧನೆಯನ್ನುಳ್ಳ ಅವರ ತತ್ವಪದಗಳು ನಮಗೆ ಮಾರ್ಗದರ್ಶಿಯಾಗಿವೆ ಎಂದರು.

ಜಾನಪದ ಸಂಶೋಧನಾ ಕೇಂದ್ರದ ಅಧ್ಯಕ್ಷ, ಖ್ಯಾತ ಜಾನಪದ ವಿದ್ವಾಂಸ ಬಸವಲಿಂಗಯ್ಯ ಹಿರೇಮಠ ಅಧ್ಯಕ್ಷತೆ ವಹಿಸಿ, ಭಾಷಣವನ್ನು ಮಾಡದೇ ಹಾಡುಗಳ ಮೂಲಕ ಅಧ್ಯಕ್ಷೀಯ ಸಮಾರೋಪ ಮಾಡಿ, ಒಂದು ಹೊಸ ಸಂಪ್ರದಾಯವನ್ನು ಪ್ರಾರಂಭಿಸಿದರು.

ಪ್ರಕಾಶ ಕಂಬಳಿ, ಪ್ರಭು ಕುಂದರಗಿ, ಜಿ.ಟಿ.ದೊಡಮನಿ, ಕು. ಮೈತ್ರಾ ಭಜಂತ್ರಿ, ಕು. ಸುನಂದಾ ನಿಂಬನಗೌಡರ, ವಲೆಪ್ಪನವರ, ಆಶಾ ಸೈಯ್ಯದ, ಖೈರುನ್ನಿಸಾ ತಂಡದವರು ಹಾಗೂ ಡಾ. ಪ್ರಭಾ ನೀರಲಗಿ ಮತ್ತು ತಂಡದವರು ಸಂತ ಶಿಶುನಾಳ ಶರೀಫರ ಪ್ರಸಿದ್ಧ ಗೀತೆಗಳಾದ ಕೋಡಗನ ಕೋಳಿ ನುಂಗಿತ್ತ.. ಸುಳ್ಳೇ ಸುಳ್ಳು ಸಂಸಾರದಾಟ.. ಬರಕೋ ಪದ ಬರಕೋ.. ಹುಟ್ಟಿದ್ದು ಹೊಲೆಮನಿ.. ಕುಂಬಾರಕಿ ಈಕಿ ಕುಂಬಾರಕಿ .. ಮುಂತಾದ ತತ್ವಪದಗಳನ್ನು ಪ್ರಸ್ತುತ ಪಡಿಸಿ, ನೆರೆದ ಸಭಿಕರನ್ನು ಸಂಗೀತದ ಅಲೆಯಲ್ಲಿ ತೇಲಿಸಿದರು. ಹಾರ್ಮೋನಿಯಂ ಮತ್ತು ತಬಲಾದಲ್ಲಿ ನಾಗರಾಜ ಕಮ್ಮಾರ, ಉಮೇಶ ಹಾಗೂ ಸುರೇಶ ನಿಡಗುಂದಿ ಸಾಥ್ ನೀಡಿದರು. ಸುಜಾತಾ ಹಡಗಲಿ ಮತ್ತು ಜಯಶ್ರೀ ಗೌಳಿಯವರ ಕಲಾವಿದರನ್ನು ಪರಿಚಯಿಸಿದರು.

ಕು. ಗಾಯತ್ರಿ ಕುಲಕರ್ಣಿ ಅವರಿಂದ ಪ್ರಾರ್ಥನೆ, ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಶ್ರೀಮತಿ ಹೇಮಾಕ್ಷಿ ಕಿರೇಸೂರ, ನಾಗಭೂಷಣ ಹಿರೇಮಠ, ಮಹೇಶ ಕುಲಕರ್ಣಿ ಅತಿಥಿಗಳಿಗೆ ಪುಷ್ಪ ನೀಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಿವಾನಂದ ಭಾವಿಕಟ್ಟಿ ನಿರೂಪಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ವಂದಿಸಿದರು.

೭. **ಅಂಧ ಮಕ್ಕಳ ಪ್ರತಿಭೋತ್ಸವ :**

ವಚನ ಸಾಹಿತ್ಯ ಬದುಕಿನ ಸಾಹಿತ್ಯ, ವಚನ ಸಾಹಿತ್ಯ ಮೌಲ್ಯಗಳಿಂದ ಕೂಡಿದ್ದು ಇದು ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲದು, ಇದು ಪ್ರತಿಯೊಬ್ಬರ ಮನೆಯಲ್ಲಿ ಇರುವಂಥದ್ದು ಎಂದು ಹಿರಿಯ ಸಾಹಿತಿ ವೀರಣ್ಣ ರಾಜೂರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನ ಸಂಯುಕ್ತವಾಗಿ ಅಂಧರ ಬಾಳಿನ ಬೆಳಕು ಡಾ. ಹೆಲನ್ ಕೆಲ್ಲರ್ ಅವರ ೧೩೮ ನೆಯ ಜನ್ಮದಿನಾಚರಣೆ ಅಂಗವಾಗಿ ದಿನಾಂಕ **೧೩,೧೪,೧೫ ಜುಲೈ ೨೦೧೮** ರಂದು ಏರ್ಪಡಿಸಿದ್ದ ಅಂಧ ಮಕ್ಕಳ ಪ್ರತಿಭೋತ್ಸವ ಹಾಗೂ ಡಾ. ಎಂ. ಎಂ. ಕಲಬುರ್ಗಿಯವರು ಸಂಪಾದಿಸಿದ ಬ್ರೈಲ್ ಲಿಪಿಯಲ್ಲಿರುವ **'ವಚನ ವರ್ಷ'** ಕೃತಿ ಬಿಡುಗಡೆ ಹಾಗೂ ಉಚಿತ ವಿತರಣೆ ಮತ್ತು **'ಬೆಳಕು'** ದ್ವೈಮಾಸಿಕ ಪತ್ರಿಕೆ ಬಿಡುಗಡೆ ಕಾರ್ಯಕ್ರಮಗಳ ಸಮಾರೋಪ ಸಮಾರಂಭದಲ್ಲಿ 'ವಚನ ವರ್ಷ' ಕೃತಿ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಅಂಧರಿಗಾಗಿ ಆಯೋಜಿಸಿದ ಈ ಕಾರ್ಯಕ್ರಮ ಅದ್ಭುತ ಮತ್ತು ಐತಿಹಾಸಿಕವಾದ್ದು, ಇಂಥ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಪುಣ್ಯದ ಕೆಲಸ ಎಂದ ಅವರು, ಅಂಧರಿಗೆ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಿ, ಅವರು ಸಮಾಜದ ಮುಖ್ಯವಾಹಿನಿಗೆ ಬಂದು, ಸ್ವಸಾಮರ್ಥ್ಯದಿಂದ ಉದ್ಯೋಗಾವಕಾಶಗಳನ್ನು ಪಡೆದುಕೊಂಡು, ಸಮಾಜದಲ್ಲಿ ಗೌರವಯುತವಾಗಿ ಬಾಳುವಂತೆ ಮಾಡಬೇಕು ಎಂದರು.

ಶ್ರೀಮತಿ ಉಮಾದೇವಿ ಎಂ. ಕಲಬುರ್ಗಿ ಅವರು 'ಬೆಳಕು' ದ್ವೈಮಾಸಿಕ ಪತ್ರಿಕೆ ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಕೇವಲ ೧೫ ದಿನಗಳಲ್ಲಿ ಸತತ ಪರಿಶ್ರಮದಿಂದ ಈ ಪತ್ರಿಕೆಯನ್ನು ಬ್ರೈಲ್ ಲಿಪಿಗೆ ಲಿಪ್ಯಂತರ ಮಾಡಿ, ಹೊರತರುವಲ್ಲಿ ಸಹಾಯ, ಸಹಕಾರ ನೀಡಿದ ಶಿವಕುಮಾರ ಮತ್ತು ಶ್ರೀಮತಿ ದೇವಿಕಾ ದಂಪತಿಗಳನ್ನು ಹಾಗೂ ಇವರಿಗೆ

ಪಠ್ಯಪುಸ್ತಕಗಳನ್ನು ಓದಿ ಬ್ರೈಲ್ ಲಿಪ್ಯಂತರ ಮಾಡುವಲ್ಲಿ ಮತ್ತು ಸತತವಾಗಿ ಆರ್ಥಿಕವಾಗಿಯೂ ಸಹಾಯ ಸಹಕಾರ ನೀಡುತ್ತಿರುವ ಗಂಗಣ್ಣ ಕುರಡಿಕೇರಿ ಇವರುಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮುಖ್ಯ ಅತಿಥಿಯಾಗಿ ಮಾತನಾಡಿದ, ಆಕಾಶವಾಣಿಯ ನಿವೃತ್ತ ನಿರ್ದೇಶಕ ಡಾ. ಆನಂದ ಪಾಟೀಲ ಮಾತನಾಡಿ, ಸಮಾಜ ಹಾಗೂ ಸಂಘ, ಸಂಸ್ಥೆಗಳು ಅಂಧರ ಹಾಗೂ ವಿಕಲಚೇತನರ ಬಗ್ಗೆ ಕೇವಲ ಅನುಕಂಪ ತೋರುವ ಬದಲು, ಅವರಿಗೆ ಅವಶ್ಯ ಸೌಲಭ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಕಾರ್ಯಮಾಡಿ ಅವರೂ ಕೂಡ ಮುಖ್ಯವಾಹಿನಿಗೆ ಬರುವಂತೆ ಮಾಡಬೇಕಿದೆ ಎಂದರು.

ಇನ್ನೊರ್ವ ಮುಖ್ಯ ಅತಿಥಿ ಕ.ವಿ.ವ.ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘವು ನಾಡು, ನುಡಿ, ನೆಲ, ಜಲ, ಸಾಹಿತ್ಯ, ಸಂಗೀತ ಕಾರ್ಯಕ್ರಮಗಳ ಜೊತೆ ಅಂಧರ ಬಾಳಿಗೆ ಬೆಳಕು ನೀಡುವಲ್ಲಿ ನೆರವಾಗುವಂತ ಕಾರ್ಯಕ್ರಮಗಳನ್ನೂ ಆಯೋಜಿಸುವಲ್ಲಿ ತನ್ನದೇ ಅದು ಕೊಡುಗೆ ನೀಡುತ್ತಿದೆ ಎಂದರು.

ಮತ್ತೋರ್ವ ಅತಿಥಿ, ಧಾರವಾಡ ನೆಕ್ಚರ ಬೆವರಿಜಸ್, ಪ್ರೈ.ಲಿ. ಜನರಲ್ ಮ್ಯಾನೇಜರ ಚೇತನ ಕೆ. ಅವರು ತಮ್ಮ ಅನುಪಸ್ಥಿತಿಯಲ್ಲಿ ಸ.ಅ.ಸೇ.ಪ್ರತಿಷ್ಠಾನಕ್ಕೆ ರೂ. ೮ ಸಾವಿರಗಳ ಧನಸಹಾಯದ ಚೆಕ್ಕನ್ನು ಕಳಿಸಿದ್ದರು. ಬೆಂಗಳೂರಿನ ಶ್ರೀಧರ ಅವರು ಅಂಧ ವಿದ್ಯಾರ್ಥಿಗಳಿಗೆ ವಿತರಿಸಲು ೨೦ 'ಬೆಳಕು ಪತ್ರಿಕೆ'ಗೆ ಧನಸಹಾಯ ಮಾಡಿದರು. ಅಮೇರಿಕಾದಲ್ಲಿರುವ ಗಿರೀಶ ಹಾಗೂ ಮಂಜುನಾಥ ಅವರು ಅಂಧ, ಅನಾಥ ವಿದ್ಯಾರ್ಥಿಯೊಬ್ಬರಿಗೆ ರೂ. ೨ ಸಾವಿರ ಧನಸಹಾಯ ನೀಡಿದರು.

ವಿಶ್ರಾಂತ ಪ್ರಾಚಾರ್ಯ ಡಾ. ಆರ್. ಬಿ. ಚಿಲುಮಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಧ ಕಾಲೇಜು ವಿದ್ಯಾರ್ಥಿಗಳಿಗೆ ಬ್ರೈಲ್ ಪಠ್ಯಪುಸ್ತಕಗಳನ್ನು ಒದಗಿಸುವ ನಿಟ್ಟಿನಲ್ಲಿ ಸರಕಾರ ವಿಫಲವಾಗಿದೆ. ಆದರೆ ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನವು ಸತತ ಪ್ರಯತ್ನದಿಂದ ಬ್ರೈಲ್ ಪುಸ್ತಕಗಳನ್ನು ಒದಗಿಸುವಲ್ಲಿ ತನ್ನದೇ ಆದ ಕೊಡುಗೆ ಕೊಡುತ್ತಿರುವದು ಶ್ಲಾಘನೀಯ. ಆದರೆ ಎಲ್ಲ ಮಕ್ಕಳಿಗೆ ಬ್ರೈಲ್ ಪಠ್ಯಪುಸ್ತಕಗಳನು ಒದಗಿಸುವದು ಕಷ್ಟಸಾಧ್ಯ. ಈ ದಿಶೆಯಲ್ಲಿ ಸರಕಾರವು ಮುಂದೆ ಬರಬೇಕೆಂದರು.

ಸಾಹಿತಿ, ಅಂಧರಾದ ಬಾಪು ಖಾಡೆ ಹಾಗೂ ಭಾಗ್ಯಶ್ರೀ ತಮ್ಮ ಸ್ವರಚಿತ ಕವನವನ್ನು ವಾಚಿಸಿದರು, ಬೆಳಕು ಪತ್ರಿಕೆಗೆ ತಮ್ಮ ಲೇಖನಗಳನ್ನು ಕಳಿಸುವ ಆಶ್ವಾಸನೆ ನೀಡಿದರು.

ಸಹನಾ ಅಂಗವಿಕಲರ ಸೇವಾ ಪ್ರತಿಷ್ಠಾನದ ಸಂಚಾಲಕರು ಹಾಗೂ 'ಬೆಳಕು' ಪತ್ರಿಕೆ ಸಂಪಾದಕರಾದ ರಾಮಚಂದ್ರ ಧೋಂಗಡೆ ಹಾಗೂ ಅಧ್ಯಕ್ಷರಾದ ನರಸಿಂಹಯ್ಯ ಮತ್ತು ಧರ್ಮದರ್ಶಿ ಶ್ರೀಮತಿ ಲಕ್ಷ್ಮೀ ಹೆಬ್ಬಾರ ಇವರನ್ನು ಕ.ವಿ.ವ. ಸಂಘದಿಂದ ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ, ರಾಮಚಂದ್ರ ಧೋಂಗಡೆ ಅವರು ಕ.ವಿ.ವ.ಸಂಘವು ಅಂಧರ ಕಾರ್ಯಕ್ರಮ ಏರ್ಪಡಿಸುವಲ್ಲಿ ತಮಗೆ ನೀಡುತ್ತಿರುವ ಸಹಾಯ, ಸಹಕಾರಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿ, 'ಬೆಳಕು' ಬ್ರೈಲ್ ಪತ್ರಿಕೆಗೆ ಎಲ್ಲ ವಿದ್ಯಾರ್ಥಿಗಳು ಚಂದಾದಾರರಾಗಿ ಸಹಕರಿಸಿದಲ್ಲಿ ಈ ಪತ್ರಿಕೆಯು ಸತತವಾಗಿ ಅಂಧರ ಬಾಳಿಗೆ ನಿಜವಾಗಿ ಬೆಳಕಾಗುವದು ಎಂದರು.

ಬ್ರೈಲ್ ಓದುವ ಹಾಗೂ ಬರೆಯುವ ಮತ್ತು ರಸಪ್ರಶ್ನೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಯಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳನ್ನು ಸತ್ಕರಿಸಿ ಪ್ರೋತ್ಸಾಹಿಸಲಾಯಿತು. ಹಾಗೂ ಬೆಳಗಾವಿಯ ಮಹೇಶ್ವರಿ ಅಂಧಮಕ್ಕಳ ಶಾಲೆಯು ಸತತ ೩೭ ವರ್ಷಗಳಿಂದ ಶೇ ನೂರಕ್ಕೆ ನೂರು ಫಲಿತಾಂಶ ನೀಡುತ್ತಾ ಸಾಧನೆ ಮಾಡುತ್ತಿರುವದರಿಂದ, ಶಾಲೆಯ ವಿಶ್ರಾಂತ ಪ್ರಾಚಾರ್ಯರಾದ ರಾಷ್ಟ್ರಪ್ರಶಸ್ತಿ ಪುರಸ್ಕೃತ ಶ್ರೀಮತಿ ಚೌಗಲಾ ಅವರ ಅನುಪಸ್ಥಿತಿಯಲ್ಲಿ ಶಾಲೆಯ ಶಿಕ್ಷಕ ಮಲ್ಲಪ್ಪ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ಉಪಸ್ಥಿತರಿದ್ದರು. ಸ.ಅ.ಸೇ.ಪ್ರತಿಷ್ಠಾನದ ಅಧ್ಯಕ್ಷ ನರಸಿಂಹಯ್ಯ ಸ್ವಾಗತಿಸಿದರು. ಅಂಧ ವಿದ್ಯಾರ್ಥಿ ಯಶೋಧಾ ಪ್ರಾಸ್ತಾವಿಕವಾಗಿ ಮಾತನಾಡಿ, ಅಂಗವಿಕಲರ ಬಗ್ಗೆ ಇರುವ ಬಸವಣ್ಣನವರ ವಚನವನ್ನು ಪ್ರಸ್ತಾಪಿಸಿ, ಡಾ. ಹೆಲನ್ ಕೆಲ್ಲರ್ ಹಾಗೂ ಲೂಯಿ ಬ್ರೈಲ್ ಅವರು ಅಂಧರಿಗಾಗಿ ಕೊಟ್ಟ ಕೊಡುಗೆಗಳನ್ನು ಸ್ಮರಿಸುತ್ತಾ, ಅಂಧರು ಯಾರಿಗೂ ಕಡಿಮೆಯಲ್ಲ. ಸತತ ಪ್ರಯತ್ನ, ಕಠಿಣ ಪರಿಶ್ರಮದಿಂದ ಅವರೂ ಕೂಡಾ ಏನಾಲ್ಲಾ ಸಾಧನೆ ಮಾಡಬಹುದು ಎಂದರು. ಕ.ವಿ.ವ.ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ನಿರೂಪಿಸಿದರು. ಸತೀಶ ತುರಮರಿ ವಂದಿಸಿದರು.

೮. **ಕುಂದಣಗಾರ ಜನ್ಮದಿನಾಚರಣೆ :**

ಶ್ರೇಷ್ಠ ಸಂಶೋಧಕರಾಗಿ, ವಿಮರ್ಶಕರಾಗಿ, ಸೃಜನಶೀಲ ಬರಹಗಾರರಾಗಿ, ಹರಟೆ ಪ್ರಬಂಧಕಾರರಾಗಿ ಇಪ್ಪತ್ತನೇ ಶತಮಾನದ ಆರಂಭ ಕಾಲದ ಕನ್ನಡ ಪಂಡಿತರಲ್ಲಿ ಪ್ರಮುಖರಾಗಿದ್ದ ಪ್ರೊ. ಕೆ. ಜಿ. ಕುಂದಣಗಾರ ಅವರ ೧೨೩ನೇ ಜಯಂತಿಯಂದು ನಗರದ ಕಾಲೇಜು ರಸ್ತೆಯಲ್ಲಿರುವ "ಕುಂದಣಗಾರ ಪುತ್ಥಳಿಗೆ" ಮಾಲಾರ್ಪಣೆಯನ್ನು ಮಾಡುವ ಮೂಲಕ ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು ತನ್ನ ಗೌರವವನ್ನು ಸಲ್ಲಿಸಿತು.

ಪ್ರೊ. ಕೆ. ಜಿ. ಕುಂದಣಗಾರ ಹೆಸರಿನಲ್ಲಿರುವ ಕುಂದಣಗಾರ ಪ್ರಶಸ್ತಿಯನ್ನು ಧಾರವಾಡದಲ್ಲಿ ಪ್ರಾರಂಭಿಸಬೇಕೆಂದು ಈ ಸಂದರ್ಭದಲ್ಲಿ ಸರಕಾರವನ್ನು ಒತ್ತಾಯಿಸಲಾಯಿತು. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಕೋಶಾಧ್ಯಕ್ಷ ಕೃಷ್ಣ ಜೋಶಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ, ಶಂಕರ ಕುಂಬಿ, ವಿಶ್ವೇಶ್ವರಿ ಹಿರೇಮಠ ಅವರಲ್ಲದೆ ಜಾನಪದ ವಿದ್ವಾಂಸ ಬಸವಲಿಂಗಯ್ಯ ಹಿರೇಮಠ, ಸಮಾಜಸೇವಕ ಮಡಿವಾಳೆಪ್ಪ ಸಿಂದೋಗಿ ಹಾಗೂ ಸಿಬ್ಬಂದಿಗಳಾದ ಎಸ್.ಆಯ್. ಭಾವಿಕಟ್ಟಿ, ನಾಗರಾಜ ಸವದತ್ತಿ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಕುಂದಣಗಾರ ಮೂರ್ತಿ ಸ್ಥಾಪನೆಗಾಗಿ ಹಾಗೂ ಕುಂದಣಗಾರ ಹೆಸರಿನ ಪ್ರಶಸ್ತಿ ನೀಡುವ ಬಗ್ಗೆ ಹೋರಾಟ ಮಾಡಿದ್ದ ಕುಂದಣಗಾರರ ಮಾನಸಪುತ್ರ ಎಂದೇ ಗುರುತಿಸಲ್ಪಟ್ಟಿದ್ದ ಸಿದ್ದಪ್ಪ ಕಿಲ್ಲೇದ ಅವರನ್ನು ಸ್ಮರಿಸಲಾಯಿತು.

೯. **ಮಹಾತ್ಮಾ ಗಾಂಧಿ ಹಾಗೂ ಲಾಲ ಬಹದ್ದೂರ ಶಾಸ್ತ್ರೀ ಜಯಂತಿ :**

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಹಾತ್ಮಾ ಗಾಂಧಿ ಹಾಗೂ ಲಾಲ ಬಹದ್ದೂರ ಶಾಸ್ತ್ರಿಯವರ ಜಯಂತಿ ಅಂಗವಾಗಿ ಅವರ ಭಾವಚಿತ್ರಗಳಿಗೆ ಪುಷ್ಪನಮನದೊಂದಿಗೆ ದಿನಾಂಕ **೨-೧೦-೨೦೧೮** ರಂದು ಗೌರವ ಸಲ್ಲಿಸಲಾಯಿತು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿಯವರು ಮಾತನಾಡಿ, ಅಹಿಂಸೆಯಿಂದ ಸ್ವಾತಂತ್ರ್ಯವನ್ನು ಗಳಿಸಿದ ದೇಶವೆಂದರೆ ಅದು ಭಾರತ ಒಂದೆ. ಇದಕ್ಕೆ ಕಾರಣ ಮಹಾತ್ಮಾ ಗಾಂಧಿಯವರ. ತಾಳ್ಮೆ, ಸತ್ಯ, ಶಾಂತಿ, ಅಹಿಂಸೆ, ಉಪವಾಸ ಸತ್ಯಾಗ್ರಹ ಅವರ ಮಂತ್ರಗಳಾಗಿದ್ದವು. ಭಾರತ ದೇಶದಲ್ಲಿ ಪ್ರತಿಯೊಬ್ಬರಿಗೂ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ ಸಿಗುವವರೆಗೂ ನಾನು ಹೊಟ್ಟೆ ತುಂಬ ಊಟಮಾಡುವುದಿಲ್ಲ, ಮೈತುಂಬ ಬಟ್ಟೆ ತೊಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿ, ಅದರಂತೆ ನಡೆದುಕೊಂಡ ಮಹಾತ್ಮರು ಇವರು ಎಂದರು. ಲಾಲಬಹಾದ್ದೂರ ಶಾಸ್ತ್ರಿಯವರು ಬಡತನದಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದು ದೇಶದ ಪ್ರಧಾನ ಮಂತ್ರಿಯಾದರೂ ಸರಳ ಜೀವನ ಬದುಕಿ, ದೇಶಕ್ಕೆ ಮಾದರಿಯಾದ ಏಕೈಕ ವ್ಯಕ್ತಿ ಎಂದರೆ ಅತಿಶಯೋಕ್ತಿಯಾಗಲಾರದು ಎಂದರು.

ಗಾಂಧಿವಾದಿಗಳು ಹಾಗೂ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಆದ ಬಸವಪ್ರಭು ಹೊಸಕೇರಿ ಅವರು ಮಾತನಾಡುತ್ತಾ, ಬಹುತೇಕ ನಮ್ಮ ದೇಶದ ಜನರೆಲ್ಲರೂ ಗಾಂಧೀಜಿಯವರ ಕೆಲಸ ಕಾರ್ಯಗಳ ಬಗ್ಗೆ ಮಾತನಾಡುತ್ತಾರೆ, ನೆನಪಿಸಿಕೊಳ್ಳುತ್ತಾರೆ. ಆದರೆ ಅದಕ್ಕಿಂತ ಹೆಚ್ಚು ತ್ಯಾಗ ಮಾಡಿದ ಗಾಂಧಿಯವರ ಪತ್ನಿ ಕಸ್ತೂರಿಬಾ ಅವರನ್ನು ನಾವು ನೆನೆಯುವುದಿಲ್ಲ. ಅವರು ಮಾಡಿದ ಕೆಲಸ, ತ್ಯಾಗ ಅದ್ಭುತ ಮತ್ತು ಅಭೂತಪೂರ್ವವಾದವುಗಳು. ಮಹಾತ್ಮಾ ಗಾಂಧೀಜಿಯವರ ಪುತ್ರ ಮತಾಂತರಗೊಂಡಾಗ ಕಸ್ತೂರಿಬಾ ಅವರು ಮಾತನಾಡಿದ ಮಾತುಗಳು, ತೆಗೆದುಕೊಂಡ ನಿರ್ಧಾರ ಬಹಳ ಜನರಿಗೆ ಗೊತ್ತಿಲ್ಲ ಎಂದರು. ಲಾಲಾಬಹಾದ್ದೂರ ಶಾಸ್ತ್ರಿ ಅವರ ಬಗ್ಗೆಯೂ ಪ್ರಶಂಸನೀಯ ಮಾತುಗಳನ್ನಾಡುತ್ತಾ ಈ ಇಬ್ಬರೂ ವ್ಯಕ್ತಿಗಳನ್ನು ನಾವು ಮಾದರಿ ವ್ಯಕ್ತಿಗಳನ್ನಾಗಿಟ್ಟುಕೊಂಡು ಅವರ ವಿಚಾರ ಧಾರೆಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಮಾತನಾಡಿ, ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಬ್ರಿಟಿಷರು ತಪ್ಪಾಗಿ ಬಿಂಬಿಸಿದ್ದಾರೆ ಎಂಬ ಮಾತುಗಳು ಕೇಳಿಬರುತ್ತವೆ. ಹಾಗೇ ನೋಡಿದರೆ ನಿಜವಾದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯ ಪ್ರಾರಂಭವೆಂದರೆ ಅದು ಕಿತ್ತೂರ ಚನ್ನಮ್ಮಳಿಂದ ಪ್ರಾರಂಭವಾದದ್ದು ಎಂದು ಮಾತನಾಡುತ್ತಾ ಮಹಾತ್ಮಾ ಗಾಂಧೀ ಅವರ ೧೫೦ ನೇ ಜನ್ಮದಿನದ ಅಂಗವಾಗಿ ಸಂಘದಿಂದ ಈ ತಿಂಗಳಲ್ಲಿ ಒಂದು ವಿಶೇಷ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶಂಕರ ಕುಂಬಿ ಮಾತನಾಡಿ, ನಾವು ಮಹಾತ್ಮಾ ಗಾಂಧಿ ಹಾಗೂ ಲಾಲಬಹಾದ್ದೂರ ಶಾಸ್ತ್ರಿಯವರ ಜಯಂತಿಯನ್ನು ಸಾಂಕೇತಿಕವಾಗಿ ಕೇವಲ ಮಾಲಾರ್ಪಣೆ ಮಾಡಿ ಆಚರಿಸುವ ಬದಲು, ಅರ್ಥಪೂರ್ಣ ಕಾರ್ಯಕ್ರಮಗಳನ್ನು ಏರ್ಪಡಿಸಿ ಅವರ ತತ್ವ, ಆದರ್ಶ, ಗುಣಗಳನ್ನು ಹಾಗೂ ಅವರು ದೇಶಕ್ಕೆ ನೀಡಿದ ನಿಸ್ವಾರ್ಥ ಸೇವೆಗಳ ಕುರಿತು ಎಲ್ಲರಿಗೂ ತಿಳಿಸುವಂತೆ ಕಾರ್ಯಕ್ರಮ ಮಾಡುವುದು ಅವಶ್ಯ ಎಂದರು.

ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಾತ್ಮಾ ಗಾಂಧಿ ಹಾಗೂ ಲಾಲಬಹಾದ್ದೂರ ಶಾಸ್ತ್ರಿಯವರ ಜೀವನ, ಅವರು ದೇಶಕ್ಕೆ ನೀಡಿದ ಕೊಡುಗೆ ಇತ್ಯಾದಿ ಕುರಿತು ಯುವಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಕಿರುಪುಸ್ತಕ ಹೊರತರುವಂತೆ ಆಗಬೇಕು ಎಂದರು.

ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ ಅವರು ಕೊನೆಯಲ್ಲಿ ವಂದನಾರ್ಪಣೆ ಮಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ನಿರೂಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ), ಕಾ.ಕಾ. ಸಮಿತಿ ಸದಸ್ಯರಾದ ಸತೀಶ ತುರಮರಿ, ಶಾಂತೇಶ ಗಾಮನಗಟ್ಟಿ, ಸಂಘದ ಸದಸ್ಯರಾದ ಅರವಿಂದ ಕಪಲಿ ಸಂಘದ ಸಿಬ್ಬಂದಿ ವರ್ಗ ಮತ್ತಿತರರು ಪಾಲ್ಗೊಂಡಿದ್ದರು.

೧೧. **ಡಾ. ಸಿ.ಎನ್.ಆರ್. ರಾವ್ ಅವರ ಭೇಟಿ :**

ಕಳೆದ ೧೨೫ ವರ್ಷಗಳ ಮೊದಲೇ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾರ್ಥಕ್ಯದ ಸೇವೆಯನ್ನು ಸಲ್ಲಿಸುತ್ತಿರುವ ಈ ಸಂಸ್ಥೆಯ ಸ್ಥಾಪಕರಾದ ಪುಣ್ಯಪುರುಷರು ನಿತ್ಯ ಸ್ಮರಣೀಯರಾಗಿದ್ದಾರೆ, ಅವರೆಲ್ಲರ ದೂರದರ್ಶಿತ್ವ ಗುಣವೇ ಇಂದಿನ ಕರ್ನಾಟಕ ಅಭ್ಯುದಯಕ್ಕೆ ಕಾರಣವಾಗಿದೆ ಎಂದು ಭಾರತರತ್ನ ಪ್ರಶಸ್ತಿ ವಿಭೂಷಿತ ಪ್ರಖ್ಯಾತ ವಿಜ್ಞಾನಿ ಡಾ. ಸಿ. ಎನ್. ಆರ್. ರಾವ್ ಹೇಳಿದ್ದಾರೆ.

ಇಲ್ಲಿಯ ಪ್ರತಿಷ್ಠಿತ ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಭೇಟ್ಟಿ ನೀಡಲು ಅವರನ್ನು ಆಮಂತ್ರಿಸಲು ಬಂದಿದ್ದ ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ನೇತೃತ್ವದ ಪದಾಧಿಕಾರಿಗಳನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯ ಉದ್ದೇಶ ಹಾಗೂ ಸಂಘವು ಸಾಧಿಸಿದ ಸಾಧನೆಯ ಬಗ್ಗೆ ವಿವರಣೆ ನೀಡುತ್ತಿರುವಾಗ, ಡಾ. ಸಿ.ಎನ್.ಆರ್. ರಾವ್ ಅವರು, ಕನ್ನಡ ಗುಡಿ ಎಂದೇ ಪ್ರಖ್ಯಾತವಾಗಿರುವ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಸ್ಫೂರ್ತಿದಾಯಕವಾದ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಕಳೆದ ೫೦ ವರ್ಷಗಳಿಗೂ ಹೆಚ್ಚು ಕಾಲ ಸಂಘದ ಚುನಾಯಿತ ಅಧ್ಯಕ್ಷರಾಗಿ ಸಂಘದ ಹಾಗೂ ನಾಡಿನ ಶ್ರೇಯೋಭಿವೃದ್ಧಿಗಾಗಿ ಅವ್ಯಾಹತವಾಗಿ ಸೇವೆ ಸಲ್ಲಿಸುತ್ತಿರುವ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಸಂಘವು ಸಲ್ಲಿಸುತ್ತಿರುವ ಸೇವೆಯನ್ನು ಸಂಪೂರ್ಣವಾಗಿ ಬಲ್ಲವನಾಗಿದ್ದೇನೆ. ಇಂತಹ ಹೆಮ್ಮೆಯ ಸಂಸ್ಥೆಗೆ ಭೇಟ್ಟಿ ನೀಡಬೇಕೆನ್ನುವ ಪ್ರಬಲ ಆಸೆ ನನ್ನಲಿದೆ. ಬರುವ ದಿನಗಳಲ್ಲಿ ಕ.ವಿ.ವ.ಸಂಘಕ್ಕೆ ಭೇಟ್ಟಿ ನೀಡಲು ನಾನು ನಿರ್ಧರಿಸಿದ್ದೇನೆ ಎಂದೂ ಅವರು ಪ್ರಕಟಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಅನೇಕ ಜನಪರ ಹೋರಾಟಗಳ ನೇತೃತ್ವ ವಹಿಸಿ ನಾಡು-ನುಡಿಗೆ ಗಣನೀಯ ಸ್ಮರಣೀಯ ಸೇವೆ ಸಲ್ಲಿಸಿದ ಹೆಮ್ಮೆಯ ಸಂಸ್ಥೆಯಾಗಿದೆ. ಹಾಗೂ ನಾಡು-ನುಡಿ-ನೆಲ-ಜಲ-ಗಡಿಗಳ ಸಮಸ್ಯೆಗಳನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದನ್ನು ಡಾ. ಸಿ.ಎನ್.ಆರ್.ರಾವ್ ಅವರು ಶ್ಲಾಘಿಸಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಹೆಸರಿನಲ್ಲಿಯೇ ಕರ್ನಾಟಕ-ಕರ್ನಾಟಕತ್ವವು ಸಂಪೂರ್ಣವಾಗಿ ಬೆರೆತು ಹೋಗಿದೆ. ಕನ್ನಡಕ್ಕಾಗಿ ಹೋರಾಡುವಂತ ಈ ಸಂಸ್ಥೆಯ ಮಾರ್ಗದರ್ಶನ ನಾಡಿಗೆ ಇನ್ನೂ ಅತ್ಯವಶ್ಯವಾಗಿದೆ ಎಂದು ಹೇಳಿ ಸಂಘದ ಸದಸ್ಯರೆಲ್ಲರನ್ನು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಡಾ. ಸಿ.ಎನ್.ಆರ್. ಹಾಗೂ ಶ್ರೀಮತಿ ಇಂದುಮತಿ ರಾವ್ ಅವರನ್ನು ಕ.ವಿ.ವ.ಸಂಘದ ಪರವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಮತ್ತು ಸಿಬ್ಬಂದಿಗಳಾದ ಎಸ್. ಆಯ್. ಭಾವಿಕಟ್ಟಿ, ರಾಘವೇಂದ್ರ ತೇರದಾಳ ಹಾಗೂ ಕ.ವಿ.ವಿ.ಯ ಡಾ. ಎಸ್. ಎಂ. ಶಿವಪ್ರಸಾದ, ಡಾ. ಎಚ್. ಬಿ. ನೀಲಗುಂದ ಉಪಸ್ಥಿತರಿದ್ದರು.

### ೧೨. **'ವ್ಯಸನ ಮುಕ್ತ ದಿನಾಚರಣೆ'**

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಹಾಗೂ ವಿಮೋಚನಾ ಸಂಸ್ಥೆ, ಅಥಣಿ ಸಂಯುಕ್ತಾಶ್ರಯದಲ್ಲಿ ಲಿಂ. ಶ್ರೀ ಮ.ನಿ.ಪ್ರ. ಮಹಾಂತ ಶಿವಯೋಗಿಗಳು, ಇಲಕಲ್‌ರವರ ಸ್ಮರಣೋತ್ಸವ ಮತ್ತು ಜನ್ಮದಿನೋತ್ಸವ ಅಂಗವಾಗಿ 'ವ್ಯಸನ ಮುಕ್ತ ದಿನಾಚರಣೆ' ಡಾ. ನಾಗಲೋಟಿಮಠ ಆದರ್ಶ ಶಿಕ್ಷಕ ಪ್ರಶಸ್ತಿ ಹಾಗೂ 'ಮಹಾಂತ ಮಂದಾರ ಪ್ರಶಸ್ತಿ' ಪ್ರದಾನ ಸಮಾರಂಭ ಏರ್ಪಡಿಸಲಾಗಿತ್ತು.

ಅಥಣಿ ಮೋಟಗಿಮಠದ ಶ್ರೀ ಮ.ನಿ.ಪ್ರ. ಪ್ರಭು ಚನ್ನಬಸವ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಅತಿಥಿಗಳಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾದ ಡಾ. ಬಾಳಾಸಾಹೇಬ ಲೋಕಾಪೂರ ಹಾಗೂ ಬನಹಟ್ಟಿಯ ಮಕ್ಕಳ ಸಾಹಿತಿಗಳಾದ ಪ್ರೊ. ಜಯವಂತ ಕಾಡದೇವರ ಆಗಮಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ವಹಿಸಿದ್ದರು.

### ೧೩. **೬೩ ನೇ ಕನ್ನಡ ರಾಜ್ಯೋತ್ಸವ : ರಾಜ್ಯೋತ್ಸವ ಕಾರ್ಯಕ್ರಮಗಳಿಗೆ ಚಾಲನೆ.**

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ದಿನಾಂಕ: ೧-೧೧-೨೦೧೮ ರಂದು ೬೩ ನೇ ಕರ್ನಾಟಕ ರಾಜ್ಯೋತ್ಸವವನ್ನು ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಪಣೆ ಮಾಡುವುದರೊಂದಿಗೆ ಆಚರಿಸಿ, ಸಂಘವು ಹಮ್ಮಿಕೊಂಡ ರಾಜ್ಯೋತ್ಸವ ಕಾರ್ಯಕ್ರಮಗಳಿಗೆ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಚಾಲನೆ ನೀಡಿದರು. ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಅಧ್ಯಕ್ಷತೆ ವಹಿಸಿದರು.

~~೧೪. **ಕನ್ನಡದ ಜಗದ್ಗುರುಗಳಿಗೆ ನುಡಿನಮನ :**~~

~~ಕನ್ನಡದ ಜಗದ್ಗುರುಗಳೆಂದೇ ಪ್ರಖ್ಯಾತಿ ಹೊಂದಿದ ಗದುಗಿನ ತೋಂಟದಾರ್ಯ ಮಠದ ಪೀಠಾಧಿಪತಿಗಳಾಗಿದ್ದ ಪರಮ ಪೂಜ್ಯ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಲಿಂಗೈಕ್ಯರಾದ ಪ್ರಯುಕ್ತ ಪೂಜ್ಯರಿಗೆ ದಿನಾಂಕ ೪-೧೧-೨೦೧೮ ರಂದು ನುಡಿನಮನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.~~

~~ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ವಹಿಸಿದ್ದರು.~~

## ೬೩ ನೇ ರಾಜ್ಯೋತ್ಸವ ಅಂಗವಾಗಿ ದಿನಾಂಕ ೧೬-೧೧-೨೦೧೮ ರಿಂದ ೩೦-೧೧-೨೦೧೮ ರವರೆಗೆ ಆಯೋಜಿಸಿದ್ದ ೧೫ ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳು

### ೧೫. ಸಾಂಸ್ಕೃತಿಕ ಉತ್ಸವಕ್ಕೆ ಅದ್ದೂರಿ ಚಾಲನೆ :

೧. ಕರ್ನಾಟಕ ರಾಜ್ಯೋತ್ಸವವನ್ನು ಬೆಂಗಳೂರು ಭಾಗದಕ್ಕಿಂತಲೂ ಉತ್ತರ ಕರ್ನಾಟಕದ ಜನರು ವಿಶಿಷ್ಟವಾಗಿ ಆಚರಣೆ ಮಾಡುತ್ತಾರೆ. ಜೊತೆಗೆ ಅಷ್ಟೇ ಭಾಷಾ ಅಭಿಮಾನ ಹೊಂದಿದ್ದಾರೆ ಎಂದು ಹಿರಿಯ ಸಾಹಿತಿ ನಾಡೋಜ ಡಾ. ಚನ್ನವೀರ ಕಣವಿ ಹೇಳಿದರು.

೬೩ ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನವ್ಹಂಬರ ೩೦ ರವರೆಗೆ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ (**ದಿನಾಂಕ ೧೬-೧೧-೨೦೧೮**) ಶುಕ್ರವಾರ ಸಂಜೆ ಚಾಲನೆ ನೀಡಿ ಅವರು ಮಾತನಾಡಿದರು.

ಧಾರವಾಡ ಸಾಂಸ್ಕೃತಿಕ ನಗರ ಎಂದು ಕರೆಸಿಕೊಳ್ಳಲು ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರಮುಖ ಕಾರಣವಾಗಿದೆ. ಇಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳು, ಮಠಗಳು ಶತಮಾನೋತ್ಸವವನ್ನು ಆಚರಿಸಿಕೊಂಡಿವೆ. ಅವುಗಳ ಕಾರ್ಯ ಸ್ಮರಣೀಯವಾಗಿದೆ. ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದ ಮಹಾನ್ ವ್ಯಕ್ತಿಗಳ ಕಾರ್ಯಗಳು ಅನನ್ಯ. ಅವರ ಆದರ್ಶಗಳು ಯುವ ಪೀಳಿಗೆಗೆ ಮಾರ್ಗದರ್ಶಕವಾಗಿವೆ. ಕರ್ನಾಟಕ ಏಕೀಕರಣಕ್ಕೆ ಸಂಘದ ಕೊಡುಗೆ ಅಪಾರವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಮಾಜಿ ಶಾಸಕ ಬೆಲ್ಲದ, ಡಾ. ಪಂಚಾಕ್ಷರಿ ಹಿರೇಮಠ, ಡಾ. ಬಿ.ಸಿ. ಜವಳಿ, ಡಾ. ಸಿ.ವ್ಹಿ. ವೇಣುಗೋಪಾಲ, ಪ್ರೊ. ವಿ.ಟಿ. ನಾಯಕ ಅವರನ್ನು ಸನ್ಮಾನಿಸಲಾಯಿತು. ಕಲಾವಿದೆ ಗೀತಾ ಆಲೂರ ಸಂಗೀತ ಸೇವೆ ಸಲ್ಲಿಸಿದರು. ಗದಗ ತೋಂಟದಾರ್ಯ ಮಠದ ಡಾ. ತೋಟದ ಸಿದ್ಧರಾಮ ಸ್ವಾಮೀಜಿ ಮಾತನಾಡಿ, ಇಂಗ್ಲೀಷ ಭಾಷೆಯ ವ್ಯಾಮೋಹಕ್ಕೆ ಒಳಗಾಗದೆ ಕನ್ನಡ ಭಾಷೆಯ ಬೆಳವಣಿಗೆಗೆ ಪ್ರತಿಯೊಬ್ಬರೂ ಶ್ರಮಿಸಬೇಕು ಪಾಲಕರು ಮಕ್ಕಳಿಗೆ ಭಾಷೆಯ ಬಗ್ಗೆ ಅಭಿಮಾನ ಮೂಡಿಸಬೇಕು. ಕರ್ನಾಟಕ ಏಕೀಕರಣಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘ ವಿಶೇಷ ಕೊಡುಗೆ ನೀಡಿದೆ ಎಂದರು.

ನಾಡೋಜ ಡಾ. ಪಾಟೀಲ ಪುಟ್ಟಪ್ಪ, ವಿಜಯಪುರ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಕುಲಪತಿ ಡಾ. ಸಬಿಹಾ ಭೂಮಿಗೌಡ, ಮಾಜಿ ಸಂಸದ ಐ.ಜಿ. ಸನದಿ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಇತರರು ಉಪಸ್ಥಿತರಿದ್ದರು.

೨. **ನಾಟಕ ಸಂಜೆ :**

ಭಾರತವು ಸರ್ವಧರ್ಮಗಳ ಸಮನ್ವಯ ಹಾಗೂ ಭಾವೈಕ್ಯತೆಯ ಪುಣ್ಯಭೂಮಿಯ ಸುಂದರ ನಾಡು ಎಂದು ಶಿವಪುತ್ರಯ್ಯ ಮ. ರಾಚಯ್ಯ ಅವರು ಅವರು ಹೇಳಿದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಹಮ್ಮಿಕೊಂಡ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಅಂಗವಾಗಿ ದಿನಾಂಕ **೧೭-೧೧-೨೦೧೮** ರಂದು ನಾಟಕ ಸಂಜೆಯಲ್ಲಿ 'ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ' ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಶನಿವಾರ ಅವರು ಮಾತನಾಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ಸರ್ವಧರ್ಮಗಳ ಸದಸ್ಯರನ್ನು ಹೊಂದಿದ್ದು ಭಾವೈಕ್ಯತೆಯನ್ನು ಸಾರುವ ನಾಡು ಎಂದರು.

ಹಿರಿಯ ಸದಸ್ಯರಾದ ಪ್ರೊ. ವಿ.ಆರ್. ಸಂಗೊಂದಿಮಠ, ವಿನಾಯಕ ಬೊಮ್ಮಯ್ಯ ಗಾಂವಕರ, ರಂಗಭೂಮಿ ಕಲಾವಿದರಾದ ಭೀಮನಗೌಡ ಖಟಾವಿ ಅವರನ್ನು ಕ.ವಿ.ವ. ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಸನ್ಮಾನಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ರಂಗಾಯಣ ತಂಡದ ಕಲಾವಿದರು 'ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ' ನಾಟಕವನ್ನು ಪ್ರದರ್ಶಿಸಿದರು.

ಕ.ವಿ.ವ. ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ ಅವರು ಮಾತನಾಡಿದರು, ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ, ಎಸ್.ಬಿ. ಗುತ್ತಲ, ಶಾಂತೇಶ ಗಾಮನಗಟ್ಟಿ, ವೀರಣ್ಣ ಒಡ್ಡೀನ, ಡಾ. ರಾಜಶೇಖರ ಬಶೆಟ್ಟಿ, ಲಕ್ಷ್ಮಣ ಪುರದ, ಪ್ರಭು ಹಂಚಿನಾಳ, ಜಯಶ್ರೀ ಗೌಳಿ, ಎಚ್.ಡಿ. ನದಾಫ್, ವೈ.ಎನ್. ಮಾಳಗಿ, ಶಂಕರ ರಾಜಗೊಳಿ, ರಾಘವೇಂದ್ರ ಕುಂದಗೋಳ, ಲಕ್ಷ್ಮಣ ಬಕ್ಕಾಯಿ, ಮಹೇಶ ಕುಲಕರ್ಣಿ, ವೈ.ಸಿ. ಬಿಜಾಪೂರ, ಚನಬಸಪ್ಪ, ಎಂ.ಬಿ. ಕಟ್ಟಿ, ಸೇತುರಾಮ ಹುನಗುಂದ, ಶಿವಣ್ಣ ಬೆಲ್ಲದ, ಕೃಷ್ಣ ಜೋಶಿ, ಕ.ವಿ.ವ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಸತೀಶ ತುರಮರಿ, ಶಂಕರ ಕುಂಬಿ ಉಪಸ್ಥಿತರಿದ್ದರು.

ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ವಿಶ್ವೇಶ್ವರಿ ಹಿರೇಮಠ ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.

೩. **ನಾಟಕ ಸಂಜೆ : ದೊಡ್ಡಾಟ :**

ಸಾಂಸ್ಕೃತಿಕ ಪ್ರಯೋಗಗಳು ನಮ್ಮ ಸಂಸ್ಕತಿಯ ಪ್ರತಿಬಿಂಬಗಳು. ನಮ್ಮ ಸಮಾಜದ ನಡೆ-ನುಡಿ-ಆಚಾರ-ವಿಚಾರ-ಯೋಚನೆಗಳೆ ಸಾಂಸ್ಕೃತಿಕ ಪಯೋಗಗಳ ಮೂಲ ಬೇರು. ನಮ್ಮ ಸಾಂಸ್ಕತಿಕ ರಂಗ ಬಲಿಷ್ಠವಾದದ್ದು, ಹಾಗೆಯೇ ಭವ್ಯ ಇತಿಹಾಸ ಹೊಂದಿದ್ದು, ಸಾಂಸ್ಕೃತಿಕ ರಂಗದ ಪ್ರಯೋಗಗಳು ಸಾಮಾಜಿಕ ಚಿಂತನೆಗೆ ಮಾರ್ಗದರ್ಶಕವಾಗಿದ್ದು, ಸಮಾಜದ ನಡೆ ಸ್ವಾಸ್ಥ್ಯ ಸಮಾಜದ ಸರ್ವ ರೀತಿಯ ಹಿತಕ್ಕಾಗಿ ಹೇಗಿರಬೇಕು ಎಂದು ದಾರಿ ತೋರಿಸುತ್ತವೆ ಎಂದು ಖ್ಯಾತ ಶಿಕ್ಷಕ, ಮಕ್ಕಳ ಸಾಹಿತಿ, ರಂಗಕರ್ಮಿ, ಕ.ವಿ.ವ. ಸಂಘದ ಉಪಾಧ್ಯಕ್ಷ ಶ್ರೀ ನಿಂಗಣ್ಣ ಕುಂಟಿ(ಇಟಗಿ) ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದಿನಾಂಕ **೧೮-೧೧-೨೦೧೮** ರಂದು **ಉದ್ಯೋಗ ಪರ್ವ ದೊಡ್ಡಾಟ** ಪ್ರಯೋಗಕ್ಕೆ ಮದ್ದಳೆ ಬಾರಿಸಿ ಚಾಲನೆ ನೀಡಿ ಮಾತನಾಡಿದ ಶ್ರೀ ನಿಂಗಣ್ಣ ಕುಂಟಿ(ಇಟಗಿ) ದೊಡ್ಡಾಟ ಉತ್ತರ ಕರ್ನಾಟಕ ಗ್ರಾಮೀಣ ಪ್ರದೇಶದ ಉದರದಿ ಸಹಜವಾಗಿ ಜನಿಸಿದ ಪ್ರಸಿದ್ಧ ರಂಗ ಪ್ರಕಾರಗಳಲ್ಲಿ ಒಂದು, ಇಂತಹ ರಂಗ ಪ್ರಕಾರಗಳು ನಿಧಾನವಾಗಿ ಕಣ್ಮರೆ ಆಗುವ ಆತಂಕ ನಮ್ಮೆದಿರು ಇದೆ. ಆದ್ದರಿಂದ ಜನ ಇಂತಹ ವಿಶೇಷ ಪ್ರಕಾರ ಉಳಿಸುವ ಪ್ರಯತ್ನ ಮಾಡಬೇಕಿದೆ. ಕರ್ನಾಟಕ ವಿದ್ಯಾವರ್ಧಕ ಸಂಘ ಎಲ್ಲ ಸಾಂಸ್ಕೃತಿಕ ಕಲಾ ಪ್ರಕಾರಗಳನ್ನು ಉಳಿಸುವ ಪ್ರಯತ್ನ ನಿತ್ಯ ನಿರಂತರವಾಗಿ ಮಾಡುತ್ತಿದೆ. ೧೨೮ ವರ್ಷಗಳಿಂದ ಸತತವಾಗಿ ಈ ಕಾರ್ಯ ಶ್ರದ್ಧೆಯಿಂದ ಮಾಡುತ್ತಿರುವ ಸಂಘದ ಕಾರ್ಯ ಶ್ಲಾಘನೀಯ, ಈ ದೊಡ್ಡಾಟ ಪ್ರದರ್ಶನಕ್ಕೆ ಚಾಲನೆಗೆ ಅವಕಾಶ ಸಿಕ್ಕಿರುವುದು ನ್ನನ ಪುಣ್ಯವೇ ಸರಿ, ನಾನು ದೊಡ್ಡಾಟ ಪ್ರದರ್ಶನಕ್ಕೆ ಅತ್ಯಂತ ಪ್ರೀತಿಯಿಂದ ಚಾಲನೆ ನೀಡಿದ್ದೇನೆ. ಮತ್ತು ಮಮ್ಮಿಗಟ್ಟಿಯ ಜನಸಾಗರ ಸಾಹಿತ್ಯ ಕಲಾ ಮತ್ತು ಸಾಂಸ್ಕೃತಿಕ ಸಂಸ್ಥೆ(ರಿ) ದೊಡ್ಡಾಟ ಕಲೆ ಸಂರಕ್ಷಿಸುವ ಕಾರ್ಯ ಮಾಡುತ್ತಿದ್ದು ಅವರಿಗೆ ಅಭಿನಂದನೆಗಳು ಎಂದರು.

ಅಧಿಕಾರದಲ್ಲಿ ಇರುವವರನ್ನು ದುಂಬಾಲು ಬಿದ್ದು, ಅವರಿಂದ ಪ್ರಯೋಜನದ ನಿರೀಕ್ಷೆಯಲ್ಲಿ ಸನ್ಮಾನ ಮಾಡುವುದು ಸಾಮಾನ್ಯ. ನಾನು ಇಂದು ಯಾವುದೇ ಅಧಿಕಾರದಲ್ಲಿ ಇಲ್ಲದಿದ್ದರೂ ಕೂಡಾ, ನಾನೋರ್ವ ಸಂಘದ ಹಿರಿಯ ಸದಸ್ಯ ಎಂಬ ಕಾರಣಕ್ಕೆ ಈ ನಾಡಿನ ಪುಣ್ಯಭೂಮಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನನ್ನನ್ನು ಸನ್ಮಾನಿಸಿದ್ದಕ್ಕೆ ನನಗೆ ಅತ್ಯಂತ ಸಂತೋಷ ಉಂಟಾಗಿದೆ, ಇದು ನನ್ನ ಜೀವನದ ಸರ್ವಶ್ರೇಷ್ಠ ಕ್ಷಣವಾಗಿದೆ ಎಂದು ಸನ್ಮಾನ ಸ್ವೀಕರಿಸಿ ಮಾತನಾಡಿದ ಶ್ರೀ ಎಸ್.ಆರ್. ಮೋರೆಯವರು ಹೇಳಿದರು. ಸಂಘಕ್ಕೆ ನಾನು ಯಾವುದೇ ಸಹಾಯ ಮಾಡಲಿಲ್ಲ. ಆದಾಗ್ಯೂ ಸಂಘದ ಹಿರಿಯ ಸದಸ್ಯ ಎಂಬ ಒಂದೇ ಕಾರಣದಿಂದ ನನ್ನನ್ನು ಸನ್ಮಾನಿಸಿದ ಸಂಘದ ನಡೆ ಅತ್ಯಂತ ಮೇಲುಪಂಕ್ತಿಯ , ಆದರ್ಶ ನಡೆಯಾಗಿದೆ, ಉಳಿದ ಸಂಘ ಸಂಘ-ಸಂಸ್ಥೆಗಳನ್ನು ಇದನ್ನು ಅನುಸರಿಸಲಿ ಎಂದು ಕೂಡಾ ಶ್ರೀ ಮೊರೆಯವರು ಹೇಳಿದರು.

ಕನ್ನಡ ಅನ್ನದ ಭಾಷೆಯಲ್ಲ ಎಂಬ ಸುಳ್ಳು ಗುಲ್ಲನ್ನು ಕೇಳುತ್ತಿದ್ದೇವೆ, ಕನ್ನಡ ಭಾಷೆ ವಿಷಯವನ್ನು ನಾನು ಓದಿದ್ದು ನನಗೆ ಉದ್ಯೋಗ ಸಿಕ್ಕಲು ಆಧಾರವಾಯಿತು, ಕನ್ನಡ ಮಾಧ್ಯಮದಲ್ಲಿ ಓದಿದ ನನ್ನ ಮಕ್ಕಳು ಇಂದು ಉತ್ತಮ ನೌಕರಿ ಗಳಿಸಿ ಸೇವೆ ಮಾಡುತ್ತಿದ್ದಾರೆ, ಆದ್ದರಿಂದ ಇಂತಹ ಅಪಪ್ರಚಾರ ಮಾಡುವುದನ್ನು ಕೈಬಿಡಬೇಕು. ಸಂಘ-ಸಂಸ್ಥೆಗಳಲ್ಲಿ ಆಡಳಿತ ಚುಕ್ಕಾಣಿ ಹಿಡಿದವರು ತಮ್ಮನ್ನು ತಾವೇ ಸನ್ಮಾನ ಮಾಡಿಕೊಳ್ಳುವುದು ಸರ್ವಸಾಮಾನ್ಯವಾಗಿ ಬಿಟ್ಟಿದೆ, ನಾನು ನಿರೀಕ್ಷೆ ಮಾಡಿರಲಿಲ್ಲ ಸಂಘ ನಾನು ಹಿರಿಯ ಸದಸ್ಯ ಅಂತಾ ಗುರುತಿಸಿ ಸನ್ಮಾನ ಮಾಡಿದ್ದರಿಂದ, ಇಂತಹ ಪ್ರತಿಷ್ಠಿತ ಸಂಸ್ಥೆಯಿಂದ ಸನ್ಮಾನ ಸಿಕ್ಕಿದ್ದರಿಂದ ಈಗ ನನಗೆ ನನ್ನ ತಂದೆ-ತಾಯಿ ಪುಣ್ಯ ಉದರದಿಂದ ನಾನು ಹುಟ್ಟಿದ್ದು ಸಾರ್ಥಕ ಆಯಿತು ಎಂದು ಅತೀವ ಸಂತೋಷ, ಹೆಮ್ಮೆ ಉಂಟಾಗಿದೆ ಎಂದ ಸನ್ಮಾನಕ್ಕೆ ಪ್ರತಿಕ್ರಿಯೆ ನೀಡಿ ಮಾತನಾಡಿದ ಸಂಘದ ಹಿರಿಯ ಸದಸ್ಯ ಶ್ರೀ ಬಸವೇಶ್ವರ ಬಾ. ಕೊಟಬಾಗಿ ಹೇಳಿದರು. ಮತ್ತು ಹಿರಿಯ ಸದಸ್ಯರಾದ ಶ್ರೀ ಪ್ರಭಾಕರ ನಾಯಕ ಅವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ರಂಗಕರ್ಮಿ ಸಿಕಂದರ ದಂಡಿನ ಅವರಿಗೆ ರಂಗಕಲಾ ಸನ್ಮಾನ ಮಾಡಿ ಗೌರವಿಸಲಾಯಿತು.

ವೇದಿಕೆ ಮೇಲೆ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಗೌರವ ಉಪಸ್ಥಿತರಿದ್ದು, ಗೌರವ ಉಪಾಧ್ಯಕ್ಷ ಸೇತುರಾಮ ಹುನಗುಂದ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ, ಶಿವಾನಂದ ಭಾವಿಕಟ್ಟಿ ಉಪಸ್ಥಿತರಿದ್ದರು.

ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರ ಮನೋಜ ಪಾಟೀಲ ವಂದಿಸಿದರು. ಕಾರ್ಯಕ್ರಮ ಸಂಯೋಜಕಿ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಅತಿಥಿಗಳನ್ನು ಪರಿಚಯಿಸಿ ಕಾರ್ಯಕ್ರಮ ನಿರೂಪಿಸಿದರು. ಆರಂಭದಲ್ಲಿ ವಾಯ್. ಎನ್. ಮಾಳಗಿ ಪ್ರಾರ್ಥಿಸಿದರು.

ನಂತರ ಜನಸಾಗರ ಸಾಹಿತ್ಯ ಕಲಾ ಮತ್ತು ಸಾಂಸ್ಕೃತಿಕ ಸಂಸ್ಥೆ, (ರಿ) ಮುಮ್ಮಿಗಟ್ಟಿ ಇವರಿಂದ 'ಉದ್ಯೋಗ ಪರ್ವ' ದೊಡ್ಡಾಟ ಪ್ರದರ್ಶನಗೊಂಡಿತು.

೪. **ನಾಟಕ ಸಂಜೆ 'ಟ್ರಾನ್ಸ್ ನೇಷನ್' :**

ಜೀವನ್ಮುಖಿ, ಸಮಾಜಮುಖಿ, ನಿಲುವುಗಳನ್ನು ಗಟ್ಟಿಯಾಗಿ ಬಹುದೊಡ್ಡ ಪರಿಣಾಮಕಾರಿ ಪ್ರಮಾಣದಲ್ಲಿ ಬಿತ್ತರಿಸುವುದು ನಾಟಕ ಎಂಬ ಕಲಾ ಮಾಧ್ಯಮ. ವೇಗದಲ್ಲಿ ಓಡುತ್ತಿರುವ ಈ ಪ್ರಪಂಚದಲ್ಲಿ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಕಷ್ಟ–ನಷ್ಟ, ಮಾನ–ಅಪಮಾನ, ಶೋಷಣೆ, ಅಂದ, ಅಂಧಕಾರ, ದೌರ್ಜನ್ಯ, ಬಲಾತ್ಕಾರ, ಮೇಲು–ಕೀಳು, ಬಡವ–ಬಲ್ಲಿದ ಎಂಬ ಒಳಿತು–ಕೆಡಕುಗಳನ್ನು ಕಾಣುತ್ತೇವೆ. ಮಾನವೀಯ ಮೌಲ್ಯಗಳನ್ನು ಒಂದೆಡೆ ಕಂಡರೆ, ಮಗದೊಂದೆಡೆ ಅಮಾನುಷ್ಯ–ಮೃಗೀಯ ಕೃತ್ಯಗಳನ್ನು ಕಾಣುತ್ತೇವೆ. ನಮ್ಮ ಮುಂದಿರುವ ಸಾಹಿತ್ಯ ಕೃತಿಗಳನ್ನು ಕಾಣುತ್ತೇವೆ. ನಮ್ಮ ಮುಂದಿರುವ ಸಾಹಿತ್ಯ ಕೃತಿಗಳಲ್ಲಿ ಇವುಗಳನ್ನು ಮನಮುಟ್ಟುವಂತೆ ಬರೆಯಲಾಗಿದೆ. ಆದರೆ, ನಮಲ್ಲಿ ಓದು–ಬರಹ ಬಲ್ಲವರ ಸಂಖ್ಯೆ ಇಂದಿಗೂ ಕಡಿಮೆ ಪ್ರಮಾಣದ್ದು ಇದೆ. ಓದು–ಬರಹದಿಂದ ವ್ಯಕ್ತಿಗತ ಪರಿಣಾಮ ಆಗುವುದೇ ವಿನಹ ಸಾಮೂಹಿಕ ಪರಿಣಾಮ ಆಗದು. ನಾಟಕ ಪ್ರಯೋಗ ನೀಡುವ ಸಂದೇಶಗಳು ಬಹು ಜನರನ್ನು ತಲುಪಿ ಸಾಮೂಹಿಕ ಮಾಧ್ಯಮವಾಗಿದೆ ಎಂದು ಕಾರ್ಮಿಕ ಹೋರಾಟಗಾರ, ಪ್ರಗತಿಪರ ಚಿಂತಕ, ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಉಪಾಧ್ಯಕ್ಷರಾದ ಶ್ರೀ ಎಂ.ಬಿ. ಕಟ್ಟಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದಿನಾಂಕ **೧೯–೧೧–೨೦೧೮** ರಂದು ಹಮ್ಮಿಕೊಂಡಿರುವ ಸಾಂಸ್ಕೃತಿಕ **'ನಾಟಕ ಸಂಜೆ'** ಕಾರ್ಯಕ್ರಮಗಳಲ್ಲಿ ಇಂದು **'ಟ್ರಾನ್ಸ್ ನೇಷನ್'** ನಾಟಕಕ್ಕೆ ಚಪ್ಪಾಳೆ ತಟ್ಟುವ ಮೂಲಕ ಚಾಲನೆ ನೀಡಿ ಮಾತನಾಡುತ್ತಿದ್ದ ಶ್ರೀ ಎಂ.ಬಿ. ಕಟ್ಟಿ ಯಾವ ಮಾತುಗಳ್ನು ಹೇಳಲು ಭಯ ಇರುವುದೋ, ಯಾರ ಮುಂದೆ ಹೇಳಲು ಅಳುಕು ಉಂಟಾಗುವುದು, ಹೇಳುವುದು ಅಸಂಭವ–ಅಸಾಧ್ಯ ಎಂಬ ಪರಿಸ್ಥಿತಿ ಇದೆಯೋ ಅಂತಹ ಮಾತುಗಳು–ಸಂದೇಶಗಳು ನಾಟಕದ ಒಂದು ದೊಡ್ಡ ಶಕ್ತಿಯಾಗಿದೆ ಮತ್ತು ನಮ್ಮ ಮಾತೃ ಭಾಷೆಯ ಸಂರಕ್ಷಣೆ ನಾಟಕ ಮಾಡುತ್ತಿವೆ ಎಂಬುದು ಅಭಿಮಾನದ ಸಂಗತಿ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರೊ. ಶೇಖರ ಪೂಜಾರ ಅವರು ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘ ಎಂಬ ಎಂಬ ಗರಡಿ ಮನೆಯಲ್ಲಿ ನಾಡೋಜ. ಡಾ. ಪಾಟೀಲ ಪುಟ್ಟಪ್ಪಾ ಆದಿಯಾಗಿ ಕನ್ನಡ ಮಹಾ ಶಕ್ತಿಗಳ ಕೈಯಲ್ಲಿ ಪಳಗಿದ ನಾನು ಕನ್ನಡ ತಾಯಿಯ ಸೇವೆಗೆ ಅಣಿಯಾದದ್ದು ಎಂದು ಹೇಳಿ, ಕನ್ನಡ ಗೀತೆಗಳನ್ನು ಹಾಡಿದರು.

ಹಿರಿಯ ಸದಸ್ಯರಾದ ಶ್ರೀಮತಿ ಪ್ರೊ. ಶೇಖರ ಪೂಜಾರ, ಪ್ರೊ. ಬಿ.ಎಸ್. ಶಿರೋಳ, ಪ್ರೊ. ಎಸ್.ಎಸ್. ದೇಸಾಯಿ, ಪ್ರೊ. ಎಸ್.ವಿ.ಅಯ್ಯನಗೌಡರ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ರಂಗ ಕಲಾ ಸನ್ಮಾನ ಸ್ವೀಕರಿಸಿ, ಮಾತನಾಡಿದ ಪ್ರಭು ಕುಂದರಗಿ ಅವರು ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘ ಎಂಬ ಮಹಾನ್ ವೇದಿಕೆಯಿಂದ ದೊರೆತ ಸನ್ಮಾನ ನನಗೆ ಕಲೆ ಸಾಹಿತ್ಯ ಮತ್ತು ನಾಡ ಸೇವೆಯ ಮುಂದುವರೆಸಲು ಮತ್ತಷ್ಟು ಶಕ್ತಿ ನೀಡಿದಂತಾಯಿತು ಎಂದರು.

ವೇದಿಕೆ ಮೇಲೆ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಗೌರವ ಉಪಾಧ್ಯಕ್ಷರಾದ ಪ್ರೊ. ಐ.ಜಿ. ಸನದಿ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಕಲಾವಿದ ಶಂಕರ ಬಡಿಗೇರ ಕನ್ನಡ ಗೀತೆಗಳನ್ನು ಹಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಾಂತೇಶ ಗಾಮನಗಟ್ಟಿ ನಿರೂಪಿಸಿದರು. ಮನೋಜ ಪಾಟೀಲ ವಂದಿಸಿದರು. ಶಿವಮೊಗ್ಗ ರಂಗಾಯಣದ ಕಲಾವಿದರಿಂದ 'ಟ್ರಾನ್ಸ್ ನೇಷನ್' ನಾಟಕ ಪ್ರದರ್ಶನಗೊಂಡು ಜನ ಮೆಚ್ಚುಗೆಗೆ ಪಾತ್ರವಾಯಿತು.

೫. **'ಶಾಸ್ತ್ರೀಯ ಸಂಗೀತ ಸಂಜೆ'** :

ಧಾರವಾಡದ ಮಹಾನ್ ಸಂಗೀತಗಾರರ ಕೀರ್ತಿ ಮತ್ತು ಅವರು ನೀಡಿದ ಅಪಾರ ಕೊಡುಗೆಯಿಂದಾಗಿ ಧಾರವಾಡ ಶಾಸ್ತ್ರೀಯ ಸಂಗೀತದ ಹಬ್ ಎಂದು ವಿಶ್ವ ಭೂಪಟದಲ್ಲಿ ಇಂದು ಗೋಚರಿಸುತ್ತಿದೆ, ಸಂಗೀತಕ್ಕೆ ಅಘಾದವಾದ ಶಕ್ತಿ ಇದೆ. ಸಂಗೀತ ಮನಸ್ಸನ್ನ ಮುದಗೊಳಿಸಿ ಆಹ್ಲಾದಕರ ವಾತಾವರಣ ಸೃಷ್ಠಿ ಮಾಡಿ ಮನಸ್ಸನ್ನು ನಿಗ್ರಹಿಸಿ, ನಿಯಂತ್ರಣದಲ್ಲಿ ಇರಿಸಿಕೊಳ್ಳಲು ಒಂದು ಪ್ರಮುಖ ಅಸ್ತ್ರ ಅಂತಾ ವೈದ್ಯಕೀಯ ವಿಜ್ಞಾನ ಲೋಕ ಹೇಳುತ್ತಿದೆ. ಅದೇ ಕಾರಣಕ್ಕೆ ಇಂದು ರೋಗಿಗಳ ಚಿಕಿತ್ಸೆಗಾಗಿ ಶಾಸ್ತ್ರೀಯ ಸಂಗೀತವನ್ನು ಉಪಯೋಗಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ ಎಂದು ವಿಶ್ರಾಂತ ಪ್ರಾಧ್ಯಾಪಕರು, ಕನ್ನಡ ವಿದ್ವಾಂಸರು ಆದ ಪ್ರೊ. ಕೆ.ಎಸ್.ಕೌಜಲಗಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದಿನಾಂಕ ೨೦-೧೧-೨೦೧೮ ರಂದು ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇಂದು **'ಶಾಸ್ತ್ರೀಯ ಸಂಗೀತ ಸಂಜೆ'** ಕಾರ್ಯಕ್ರಮಕ್ಕೆ ಖಂಝರಾ ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡುತ್ತಿದ್ದ ಪ್ರೊ. ಕೆ.ಎಸ್. ಕೌಜಲಗಿ, ಜನರನ್ನು ಆಕರ್ಷಿಸುವ ಶಕ್ತಿ ಸಂಗೀತಕ್ಕಿದೆ. ಸಂಗೀತಗಾರರು ಕನ್ನಡ ಪ್ರಜ್ಞೆ ಜಾಗೃತಿಗೊಳಿಸುವ ಕಾರ್ಯದಲ್ಲಿ ಕೂಡಾ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಈ ನಾಡಿಗೆ ನೀಡಿರುತ್ತಾರೆ. ಅವರ ಈ ಕಾರ್ಯ ಶ್ಲಾಘನೀಯ, ಸಂಗೀತಗಾರರಿಗೆ ಮತ್ತು ಕೇಳುಗರಿಗೆ ಭಾಷೆ, ಜಾತಿ, ಅಂತಸ್ತು ಎಂಬ ಎಲ್ಲೆಗಳು ಇರುವುದಿಲ್ಲ, ಭಾಷೆಯ ಮೂಲವೇ ಸಂಗೀತ. ಭಾವನೆ ವ್ಯಕ್ತಪಡಿಸುವ ಸಾಧನ ಸಂಗೀತ, ಕವಿಯ ಹಾಡಿನ ಹಿರಿಮೆ ಬೆಳೆಯಲು ಮತ್ತು ಜನರ ಮನಸ್ಸಿನಲ್ಲಿ ಅದು ಉಳಿಯಲು ಸಂಗೀತಗಾರರು ಪ್ರಮುಖ ಕಾರಣೀಕರ್ತರು, ಪ್ರಸಿದ್ಧ ಕವಿಗಳ ಕಾವ್ಯಗಳನ್ನ ಸಂಗೀತಗಾರರು ಸುಶ್ರಾವ್ಯವಾಗಿ ಹಾಡಿ ಆ ಕಾವ್ಯಗಳನ್ನು ಪ್ರಸಿದ್ಧಿಗೆ ತಂದಿರುತ್ತಾರೆ, ಕರ್ನಾಟಕ ಸಂಗೀತದ ಮೂಲ ಪುರುಷ ಪುರಂದರದಾಸರು. ಅದೇ ರೀತಿ ಹಿಂದೂಸ್ತಾನಿ ಸಂಗೀತಕ್ಕೂ ವಿಶಿಷ್ಟ ಆಯಾಮ ನೀಡಿದ್ದು ಈ ಕನ್ನಡ ನೆಲ ಎಂಬುದು ನಮ್ಮ ಹೆಮ್ಮೆಯ ಸಂಗತಿ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಬೆಳೆಯುವಲ್ಲಿ ಪರ್ಶಿಯನ್‌ರು ಮತ್ತು ವಿಜಯಪುರ ಆದಿಲ್‌ಶಾಹಿಗಳು ನೀಡಿದ ಕಾಣಿಕೆ ಬಹುದೊಡ್ಡದು, ನಮ್ಮ ಸಂಸ್ಕೃತಿಯ ವಿಶೇಷವೆಂದರೆ ಭಿಕ್ಷುಕರು ಕೂಡಾ ಸಂಗೀತ ಮತ್ತು ಹಾಡುಗಳ ಮೂಲಕ, ಸಂಗೀತವನ್ನ ಜನಪ್ರೀಯಗೊಳಿಸುತ್ತಿರುವುದನ್ನು ನಾವು ನಮ್ಮ ಕಣ್ಣಾರೆ ನೋಡುತ್ತಿದ್ದೇವೆ, ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡ ಪ್ರಜ್ಞೆ ಜಾಗೃತ ಮತ್ತು ಗಟ್ಟಿಗೊಳಿಸುವ ಜೊತೆಗೆ ಕಲಾಕಾರರಿಗೆ ಪ್ರೋತ್ಸಾಹ ನೀಡಿ, ವೇದಿಕೆ ನೀಡಿ ಅವರನ್ನ ನಾಡಿಗೆ ಪರಿಚಯಿಸುತ್ತಿರುವುದು ಮೆಚ್ಚುವಂಥ ಕಾರ್ಯ, ಇಂದು ಜನರ ಹೃದಯ ಮತ್ತು ಬಾಯಲ್ಲಿ ಇರುವ ಪದ್ಮಶ್ರೀ ಪಂಡಿತ ಎಂ. ವೆಂಕಟೇಶಕುಮಾರ ಅವರ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿರುವುದು ಕೂಡಾ ವಿದ್ಯಾವರ್ಧಕ ಸಂಘದ ಜನಪ್ರಿಯತೆಯ ಕಾರ್‍ಯಕ್ರಮಗಳ ಭಾಗವಾಗಿದೆ.

ಸನ್ಮಾನ ಸ್ವೀಕರಿಸಿ ಪ್ರತಿಕ್ರಿಯಿಸಿದ ಪದ್ಮಶ್ರೀ ಪಂಡಿತ ಎಂ. ವೆಂಕಟೇಶಕುಮಾರ ಅವರು, ಧಾರವಾಡ ನನಗೆ ಎಲ್ಲವನ್ನೂ ಕೊಟ್ಟಿದೆ, ಈಗ ನಾನು ಧಾರವಾಡಕ್ಕೆ ಏನನ್ನು ಕೊಡಲಿ ಎಂದು ಚಿಂತಿಸುತ್ತಿದ್ದೇನೆ, ನಿಮಗಾಗಿ ನಾನು ಹೃದಯ ತುಂಬಿ ಹಾಡುತ್ತೇನೆ ಮತ್ತು ನೀವು ಅಷ್ಟೇ ಹೃದಯ ತುಂಬಿ ನನ್ನ ಸಂಗೀತವನ್ನ ಸ್ವೀಕರಿಸುತ್ತೀರಿ. ಈ ಪರಂಪರೆ ಹೀಗೆ ಮುಂದುವರೆಯಲಿ ಎಂದು ನನ್ನ ಸದಾಶಯವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಹಿರಿಯ ಸದಸ್ಯರಾದ ಶಂಕರಣ್ಣ ಮುನವಳ್ಳಿ, ಡಾ. ಶರಶ್ಚಂದ್ರ ಚುಳುಕಿಮಠ, ಡಾ. ಕೃಷ್ಣ ಕಟ್ಟಿ, ಶ್ರೀಮತಿ ಮಂಜುಳಾ ಹಾರೋಗೊಪ್ಪ ಹಾಗೂ ಶಂಕರ ರಾಮಪ್ಪ ಕಾರದಗಿ ಅವರನ್ನು ಸನ್ಮಾನಿಸಲಾಯಿತು. ಸನ್ಮಾನ್ಮಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಶಂಕರಣ್ಣ ಮುನವಳ್ಳಿ ಸಮಾಜದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರ ಹಾಗೂ ಸಂಘದ ಹಿರಿಯ ಸದಸ್ಯರನ್ನು ನಾಡಿನ ಹಿರಿಯ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘ ಸನ್ಮಾನಿಸಿ ಗೌರವಿಸಿದ್ದು, ನನಗೆ ಬಹಳ ಸಂತೋಷ ತಂದಿದೆ. ಅದಕ್ಕಾಗಿ ಸಂಘಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ. ಪ್ರತಿಯೊಬ್ಬರಿಗೂ ಜೀವನದಲ್ಲಿ ಒಂದು ಅವಕಾಶ ಒದಗಿ ಬರುತ್ತದೆ, ಅದನ್ನು ಸದುಪಯೋಗಪಡಿಸಿಕೊಂಡು ಕಷ್ಟದಲ್ಲಿರುವವರಿಗೆ, ನೊಂದವರಿಗೆ, ಅಸಹಾಯಕರಿಗೆ ನಮ್ಮ ಕೈಲಾದ ಸಹಾಯ ಮಾಡಬೇಕು. ಆಗ ಸಿಗುವ ಸಂತೋಷ, ನೆಮ್ಮದಿ ಅಪಾರ ಅದನ್ನು ಮತ್ತೊಬ್ಬರಿಗೆ ಸ್ವತಃ ಸಹಾಯ ಮಾಡಿ ಅನುಭವಿಸಬೇಕು. ಇದು ಓದುವದರಿಂದ, ಬರವಣಿಗೆಯಿಂದ, ಮಾತಿನಿಂದ ಸಿಗುವುದಿಲ್ಲ ಎಂದ ಅವರು ಡಾ. ಪಾಟೀಲ ಪುಟ್ಟಪ್ಪನವರಂತಹ ದಿಗ್ಗಜರು, ಹಿರಿಯ ಮೇಧಾವಿಗಳನ್ನು ಹೊಂದಿರುವಂತ ಗಂಡು ಮೆಟ್ಟಿದ ನಾಡು ಧಾರವಾಡ ಎಂದರು.

ವೇದಿಕೆ ಮೇಲೆ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಕಾರ್‍ಯಾಧ್ಯಕ್ಷ ಶಿವಣ್ಣ ಬೆಲ್ಲದ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್‍ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ, ಶಿವಾನಂದ ಭಾವಿಕಟ್ಟಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ವಾಯ್. ಎನ್. ಮಾಳಗಿ ಪ್ರಾರ್ಥಿಸಿದರು. ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಕಾರ್‍ಯಕಾರಿ ಸಮಿತಿ ಸದಸ್ಯರಾದ ಮನೋಜ ಪಾಟೀಲ ಅತಿಥಿಗಳನ್ನು ಪರಿಚಯಿಸಿದರು. ಶಾಂತೇಶ ಗಾಮನಗಟ್ಟಿ ನಿರೂಪಿಸಿದರು. ಶಂಕರ ಕುಂಬಿ ವಂದಿಸಿದರು.

ಪದ್ಮಶ್ರೀ ಪಂ. ಎಂ. ವೆಂಕಟೇಶಕುಮಾರ ಅವರು **'ಶಾಸ್ತ್ರೀಯ ಸಂಗೀತ ಸಂಜೆ'** ಕಾರ್‍ಯಕ್ರಮ ನಡೆಸಿಕೊಟ್ಟರು. ಇವರಿಗೆ ತಬಲಾದಲ್ಲಿ ಶ್ರೀಧರ ಮಾಂಡ್ರೆ, ಹಾರ್ಮೋನಿಯಂದಲ್ಲಿ ಗುರುಪ್ರಸಾದ ಹೆಗಡೆ, ತಂಬೂರಿಯಲ್ಲಿ ಗಂಗಾಧರ ಮತ್ತು ಕು. ಐಶ್ವರ್ಯಾ ದೇಸಾಯಿ ಸಾಥ್ ನೀಡಿದರು.

೬. **ಕಾವ್ಯ ಸಂಜೆ :**

ನಮ್ಮ ಕನ್ನಡ ಭಾಷೆ ಅಭ್ಯಾಸ ಮಾಡಿ ಮತ್ತು ಸಂಸ್ಕೃತಿಯ ವೈಭವವನ್ನು ಅರಿತು, ಸಾಹಿತ್ಯದ ಪುಸ್ತಕಗಳನ್ನು ಓದಬೇಕು, ಆಗ ಮನಸ್ಸಿನ ದುಗುಡು-ದುಮ್ಮಾನ ದೂರ ಆಗಿ, ಪರಿಪಕ್ವ ಕವಿ, ಸಾಹಿತಿಯಾಗಿ ಹೊರಹೊಮ್ಮಲು ಸಾಧ್ಯ. ಬರವಣಿಗೆಯನ್ನು ಕೃಷಿ ಮಾಡಿಕೊಳ್ಳಿ, ಆನಂದ ಉಂಟಾಗುವುದು ಎಂದು ಹಿರಿಯ ಕವಿ ಡಾ. ವ್ಹಿ. ಸಿ. ಐರಸಂಗ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘ ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ

ಹಮ್ಮಿಕೊಂಡಿರುವ ೬ ನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ **'ಕಾವ್ಯಸಂಜೆ'** ಕಾರ್ಯಕ್ರಮಕ್ಕೆ ದಿನಾಂಕ **೨೧-೧೧-೨೦೧೮** ರಂದು ಸೊಗಸಾಗಿ ಕನ್ನಡ ಗೀತೆ ಹಾಡಿ, ಖಂಝುರಾ ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಐರಸಂಗ, ನೋವು ಮನುಷ್ಯ ಜೀವನದ ಸಹಜ ಭಾಗವಾಗಿದೆ. ನೋವುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಅವುಗಳನ್ನು ಮೆಟ್ಟಿ ನಿಲ್ಲಬೇಕು. ಜೀವನದಲ್ಲಿ ನೋವುಗಳೆಂಬ ಪ್ರವಾಹವನ್ನು ಈಜಬೇಕು, ಈಜಿ ಜಯಿಸಬೇಕು. ನೋವು ಉಂಟಾಗಿದೆಯೆಂದು ಚಿಂತಿಸುತ್ತಾ, ದುಃಖಿಸುತ್ತಾ ಕುಳಿತರೆ ಬದುಕಿನ ಸೊಬಗು ಹೋಗುವುದು, ಸ್ವಾರಸ್ಯ ಕ್ಷೀಣಿಸುವುದು. ನೋವು ಬಂದ ಕ್ಷಣ ಆಚೆ ಬಂದು ನಮ್ಮ ಸುತ್ತ ಮುತ್ತ ಇರುವ ಸುಂದರ ಪ್ರಪಂಚವನ್ನು ತೆರೆದ ಕಣ್ಣುಗಳಿಂದ ನೋಡಬೇಕು ಎಂದ ಅವರು, ಇಂದಿನ ಯುವ ಪೀಳಿಗೆ ಸಾಹಿತ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಕರೆ ನೀಡಿದರು.

ಕಾವ್ಯ ಸಂಜೆಯಲ್ಲಿ ಕವಿಗಳಾದ ನರಸಿಂಹ ಪರಾಂಜಪೆ, ವಿಜಯಕಾಂತ ಪಾಟೀಲ (ಕ್ಯಾಸನೂರ), ಶ್ರೀಮತಿ ಸುನಂದಾ ಕಡಮೆ, ಡಾ. ಮಲ್ಲಿಕಾರ್ಜುನ ಹಿರೇಮಠ, ಚನ್ನಪ್ಪ ಅಂಗಡಿ, ಶ್ರೀಮತಿ ಜಯಶೀಲಾ ಬೆಳಲದವರ , ರಾಮಚಂದ್ರ ಪಾಟೀಲ, ಈಶ್ವರ ಕಮ್ಮಾರ, ಡಾ. ಚಂದ್ರಶೇಖರ ರೊಟ್ಟಿಗವಾಡ, ಶ್ರೀಮತಿ ಲೀಲಾ ಕಲಕೋಟಿ, ಡಾ. ಬಸು ಬೇವಿನಗಿಡದ, ಡಾ. ಬಸವರಾಜ ಒಕ್ಕುಂದ, ಶ್ರೀಮತಿ ನಿರ್ಮಲಾ ಶೆಟ್ಟರ, ಅಶೋಕ ಚೊಳಚಗುಡ್ಡ, ಎಂ.ಎಂ. ಪುರದನಗೌಡರ, ಡಾ. ಮಂದಾಕಿನಿ ಪುರೋಹಿತ, ಸಿ.ಎಂ. ಚನಬಸಪ್ಪ, ಎಸ್. ಎಸ್. ಚಿಕ್ಕಮಠ, ಡಾ. ಸ್ನೇಹಾ ಜೋಶಿ, ಮಹ್ಮದಅಲಿ ಗೂಢುಬಾಯಿ, ಶ್ರೀಮತಿ ಸಂಧ್ಯಾ ದಿಕ್ಷೀತ, ಶ್ರೀಮತಿ ಸರಸ್ವತಿ ಭೋಸಲೆ, ಶಿವಕುಮಾರ ಜಮದಂಡಿ, ಬಿ. ಕೆ. ಹೊಂಗಲ, ಶ್ರೀಮತಿ ಅನುರಾಧಾ ಎಂ. ಕುಲಕರ್ಣಿ ಹಾಗೂ ಶ್ರೀಮತಿ ರಾಧಾ ಶ್ಯಾಮರಾವ ಭಾಗವಹಿಸಿ ನೆರೆದ ಸಾಹಿತ್ಯಾಸಕ್ತರನ್ನು ತಮ್ಮ ಕವನ ವಾಚನದ ಮೂಲಕ ಪುಳಕಿತಗೊಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಹಿರಿಯ ಸದಸ್ಯರಾದ ಶ್ರೀ ಸರಸಾನಂದ ಜಿ. ದೊಡವಾಡ, ಶ್ರೀ ಸಿ. ಎಸ್. ಪಾಟೀಲ (ಛಾಯಾಚಿತ್ರಗ್ರಾಹಕ) ಹಾಗೂ ಶ್ರೀ ಅಶೋಕ ಮಠದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ, ಮಾತನಾಡಿದ ಹಿರಿಯ ಸದಸ್ಯರಾದ ಛಾಯಾಗ್ರಾಹಕರಾದ ಹುಬ್ಬಳ್ಳಿಯ ಸಿ.ಎಸ್. ಪಾಟೀಲ(ಚಂದ್ರಶೇಖರಯ್ಯಾ ಸಿದ್ಧಪ್ಪಯ್ಯಾ ಪಾಟೀಲ), ನನ್ನ ಮಾತಿನಲ್ಲಿ ಒಂದು ಅಭಿಪ್ರಾಯ ಹೊರ ಹೊಮ್ಮಿದರೆ, ನನ್ನ ಛಾಯಾಚಿತ್ರದಲ್ಲಿ ಸಾವಿರಾರು ಅಭಿಪ್ರಾಯ ಇರುವ ಚಿತ್ರಣ ಹೊರಹೊಮ್ಮುತ್ತದೆ. ಒಂದು ಚಿತ್ರ ಸಾವಿರ ಶಬ್ದಗಳಿಗೆ ಸಮಾನವಾಗಿದೆ ಎಂದ ಅವರು ಯಾವುದೇ ಕಾರ್ಯವಿರಲಿ, ವೃತ್ತಿಯಿರಲಿ ಅದನ್ನು ಶ್ರದ್ಧೆ, ಪ್ರಾಮಾಣಿಕತೆಯಿಂದ ಮಾಡಿದರೆ ಜೀವನದಲ್ಲಿ ಯಶಸ್ಸು ಮತ್ತು ನಮ್ಮ ಗುರಿ ಮುಟ್ಟಲು ಸಾಧ್ಯ. ಆ ದಿಸೆಯಲ್ಲಿ ನನ್ನ ವೃತ್ತಿಯು ನನಗೆ ತೃಪ್ತಿಕರವಾಗಿದೆ. ಸಂಘವು ಹಿರಿಯ ಸದಸ್ಯರೆಂದು ನನ್ನನ್ನು ಗೌರವಿಸಿದ್ದು, ನನಗೆ ಆನೆಬಲ ಬಂದಂತಾಗಿದೆ. ಅದಕ್ಕಾಗಿ ಸಂಘಕ್ಕೆ ಹಾಗೂ ಸಂಘದ ಎಲ್ಲ ಪದಾಧಿಕಾರಿಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು. ಇನ್ನೋರ್ವ ಸನ್ಮಾನಿತ ಹಿರಿಯ ಸದಸ್ಯರಾದ ಅಶೋಕ ಮಠದ ಮಾತನಾಡಿ, ಸಾಹಿತಿಗಳು, ಕವಿಗಳು, ಹೋರಾಟಗಾರರು, ಸಂಗೀತಗಾರರು, ವಿದ್ವಾಂಸರು, ಅನೇಕ ಹಿರಿಯರು ಓಡಾಡಿದ ಸಂಘದ ಈ ಆವರಣದಿಂದ ಸಾಹಿತ್ಯದ ಚಟುವಟಿಕೆಗಳಲ್ಲಿ ಭಾಗವಹಿಸುವ ಸ್ಫೂರ್ತಿ ಬಂದಿದ್ದು, ಗೋಕಾಕ ಚಳುವಳಿಯಲ್ಲಿ ಭಾಗವಹಿಸಿದ್ದನ್ನು ಮತ್ತು ತಮ್ಮ ಕವನ ಸಂಕಲನ ಹೊರ ಬರಲು ಸಂಘದ ಒಡನಾಟ ಪ್ರೇರಣೆಯಾಯಿತು ಎಂದು ಮೆಲುಕು ಹಾಕಿದರು.

ವೇದಿಕೆ ಮೇಲೆ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ, ಮನೋಜ ಪಾಟೀಲ ಉಪಸ್ಥಿತರಿದ್ದರು. ಶಿಕ್ಷಕ, ಕಲಾವಿದ ಶಿವಾನಂದ ಹೂಗಾರ ಪ್ರಾರ್ಥಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಶಿವಾನಂದ ಭಾವಿಕಟ್ಟಿ ನಿರ್ವಹಿಸಿ, ವಂದಿಸಿದರು. ವೀರಣ್ಣ ಒಡ್ಡೀನ ಮತ್ತು ವಾಯ್.ಸಿ. ಬಿಜಾಪೂರ ಅತಿಥಿಗಳನ್ನು ಗೌರವಿಸಿದರು.

೭. **'ಭರತನಾಟ್ಯ ಸಂಜೆ' :**

ಭಾರತೀಯ ಸಾಂಸ್ಕೃತಿಕ ರಂಗದಲ್ಲಿರುವಷ್ಟು ಕಲಾ ಪ್ರಕಾರಗಳು ವಿಶ್ವದ ಬೇರೆ ಯಾವುದೇ ರಾಷ್ಟ್ರಗಳಲ್ಲಿ ಇಲ್ಲ. ಜಗತ್ತಿನಲ್ಲಿ ಭಾರತ ಕಲೆಯ ತವರೂರು. ಭರತನಾಟ್ಯ ನವರಸಗಳ ಅಭಿವ್ಯಕ್ತ ಒಳಗೊಂಡಿರುವ ಪ್ರಾವಿಣ್ಯತೆಯ ಶಾಸ್ತ್ರೀಯ ನಾಟ್ಯ ಪ್ರಕಾರ. ವಿಶ್ವವೇ ಇಂದು ಭರತನಾಟ್ಯಕ್ಕೆ ವಿಶೇಷ ಗೌರವ ನೀಡುತ್ತಿರುವುದು ಹೆಮ್ಮೆಯ ಸಂಗತಿ. ಕಲಾವಿದ ಅತ್ಯಂತ ಶ್ರದ್ಧೆ ಮತ್ತು ವಿವೇಚನೆಗಳಿಂದ ಭರತನಾಟ್ಯವನ್ನು ಕಠಿಣ ಶ್ರಮವಹಿಸಿ ಕಲಿತರೆ ಮಾತ್ರ ಎಲ್ಲ ಶಾಸ್ತ್ರೀಯ ಪಟ್ಟುಗಳನ್ನು ಮೈಗೂಡಿಸಿಕೊಂಡು ಪ್ರಾವಿಣ್ಯಪೂರ್ಣ, ಕ್ರಿಯಾಶೀಲ ಹಾಗೂ ಯೋಗ್ಯ ಕಲಾವಿದರಾಗಿ ಪ್ರೇಕ್ಷಕರ ಮೆಚ್ಚಿಗೆ ಪಡೆಯಲು ಸಾಧ್ಯ ಎಂದು ಕ.ವಿ.ವ. ಸಂಘದ ಗೌರವ ಉಪಾಧ್ಯಕ್ಷರು ಹಾಗೂ ಮಹಿಳಾ ಹಾಗೂ ಮಾನವ ಹಕ್ಕುಗಳ ಹೋರಾಟಗಾರ್ತಿ ಡಾ. ಇಸಬೆಲ್ಲಾ ಝೇವಿಯರ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದಿನಾಂಕ **೨೨-೧೧-೨೦೧೮** ರಂದು **'ಭರತನಾಟ್ಯ ಸಂಜೆ'** ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಡಾ. ಇಸಬೆಲ್ಲಾ ಝೇವಿಯರ್, ಮಾನವ ಮೂಳೆ ಮಾಂಸದ ತುಡಿಕೆ, ಅದರ ಮೇಲಿದೆ ತೊಗಲಿನ

ಹೊದಿಕೆ ಎಂದು ಕವಿ ದೇಹವನ್ನು ವರ್ಣಿಸಿದ್ದಾನೆ. ಈ ಶರೀರವನ್ನು ಸತತ ಕಠಿಣ ಅಭ್ಯಾಸಕ್ಕೆ ಒಳಪಡಿಸಿ, ಹಾವ–ಭಾವಗಳನ್ನು ಕರಗತ ಮಾಡಿಕೊಂಡು, ಶಾಸ್ತ್ರೀಯವಾಗಿ, ಲಯಬದ್ಧವಾಗಿ ಹೆಜ್ಜೆ ಹಾಕಿ ಭರತನಾಟ್ಯ ಪ್ರದರ್ಶನ ನೀಡುವ ಕಲಾವಿದರನ್ನು ನೋಡಿದಾಗ ಮನಸ್ಸು ಪುಳಕಿತವಾಗುವುದು, ಆ ಕ್ಷಣಗಳಲ್ಲಿ ಮಾನವನ ಈ ಶರೀರ ಕೇವಲ ಶರೀರ ಆಗಿರದೆ ದೈವಿ ಶಕ್ತಿಯ ರೂಪವಾಗಿ ತೋರುವುದು, ಆಧುನಿಕತೆ, ಜಾಗತೀಕರಣದ ಭರಾಟೆಯಲ್ಲಿ ಪಾಲಕರು ಮಕ್ಕಳಿಗೆ ಭರತನಾಟ್ಯ ಕಲಿಸಿ, ಪ್ರೋತ್ಸಾಹಿಸುತ್ತಿರುವುದು ಸಂತೋಷದ ಕ್ಷಣ ಎಂದರು.

ಸಾಮಾಜಿಕ ಚಿಂತಕ, ಸಂಘದ ಹಿರಿಯ ಸದಸ್ಯ ಮಹಾದೇವ ಹೊರಟ್ಟಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ಕ.ವಿ.ವ. ಸಂಘ ಎಂಬ ಕನ್ನಡದ ತೊಟ್ಟಿಲು ಸಾಕಷ್ಟು ನಾಯಕರನ್ನ ನಾಡಿಗೆ ನೀಡಿದೆ, ನನಗೆ ನೀಡಿದ ಸನ್ಮಾನ ದಿವಂಗತ ಎಂ.ಎಂ. ಕಲಬುರ್ಗಿಯವರಿಗೆ ಸಲ್ಲಬೇಕು. ಈ ಸಂಘದ ಸದಸ್ಯತ್ವ ದೀಕ್ಷೆ ನನಗೆ ನೀಡಿದವರು ಅವರು, ನಂತರ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಮಾರ್ಗದರ್ಶನದಲ್ಲಿ ನಾನು–ನುಡಿಯ ಸೇವೆಗೆ ನಾನು ಅಣಿಯಾದೆ. ಈ ಸಂಘದ ಸದಸ್ಯ ನಾನು ಎನ್ನುವುದೇ ನನಗೆ ಅತ್ಯಂತ ಗೌರವದ ಸಂಗತಿ, ಇಡಿ ದೇಶದಲ್ಲಿ ಅಪರೂಪದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಸರ್ಕಾರ ನೀಡಬೇಕು, ಸಂಘದ ಕಾರ್ಯಚಟುವಟಿಕೆ ಹಾಗೂ ಕಾರ್ಯವ್ಯಾಪ್ತಿಗೆ ಅವಶ್ಯವಿರುವಷ್ಟು ಸಹಾಯ–ಪ್ರೋತ್ಸಾಹ ಸರ್ಕಾರಗಳು ಮಾಡುತ್ತಿಲ್ಲ, ಕೇಂದ್ರ ಸರ್ಕಾರ ಕೂಡಾ ಈ ಸಂಘಕ್ಕೆ ಸಹಾಯ ನೀಡುವ ಅಗತ್ಯತೆ ಇದೆ ಎಂದರು. ಇನ್ನೋರ್ವ ಸನ್ಮಾನಿತ ಹಿರಿಯ ಸದಸ್ಯರಾದ ಡಾ. ಬಸವರಾಜ ಒಕ್ಕುಂದ ತಮ್ಮ ಅನಿಸಿಕೆ ಹಂಚಿಕೊಂಡು ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು.

ಧಾರವಾಡದ ಹಿರಿಯ ಕಲಾವಿದೆ ಶ್ರೀಮತಿ ಮಂದಾಕಿನಿ ಉಡುಪಿ ಹಾಗೂ ಸಂಘದ ಹಿರಿಯ ಸದಸ್ಯರಾದ ಮಹಾದೇವ ಹೊರಟ್ಟಿ, ಶ್ರೀಮತಿ ಪ್ರೇಮಾ ಹೊರಟ್ಟಿ, ಡಾ. ಬಸವರಾಜ ಒಕ್ಕುಂದ, ಸೋಮಶೇಖರ ಕೊಂಗಿ, ಮಲ್ಲಿಕಾರ್ಜುನ ಯರಗಟ್ಟಿಯವರನ್ನು ಸಂಘದ ಪದಾಧಿಕಾರಿಗಳು ಸನ್ಮಾನಿಸಿ, ಗೌರವಿಸಿದರು.

ವೇದಿಕೆಯಲ್ಲಿ ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಕಾರಿ ಸಮಿತಿ ಸದಸ್ಯ ಶಾಂತೇಶ ಗಾಮನಗಟ್ಟಿ ಹಾಗೂ ವಿದೂಷಿ ಅಂಕಿತಾರಾವ್ ಸಹೋದರಿಯರು ಮತ್ತು ವಿದೂಷಿ ಕು. ವಿಜೇತಾ ವೇರ್ಣೆಕರ ಉಪಸ್ಥಿತರಿದ್ದರು. ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ, ವಿಜಯಾ ಲಿಂಬಣ್ಣದೇವರಮಠ, ಪ್ರಭು ಹಂಚನಾಳ, ಮಧುಮತಿ ಸಣಕಲ್ಲ, ಡಾ. ಶ್ರೀಧರ ಕುಲಕರ್ಣಿ, ಪ್ರಭು ಕುಂದರಗಿ, ಬೋಳಶೆಟ್ಟಿ ಅತಿಥಿಗಳನ್ನು ಗೌರವಿಸಿದರು. ಶಿವಾನಂದ ಅಮರಶೆಟ್ಟಿ ಪ್ರಾರ್ಥಿಸಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ಸ್ವಾಗತಿಸಿದರು. ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು, ಸತೀಶ ತುರಮರಿ ವಂದಿಸಿದರು.

ವಿಶ್ವಾಂಬರಿ ನೃತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯ ವಿದೂಷಿ ಅಂಕಿತಾರಾವ ಸಹೋದರಿಯರು ಮತ್ತು ಶಾಂತಲಾ ನೃತ್ಯಾಲಯದ ವಿದೂಷಿ ಕು. ವಿಜೇತಾ ವೇರ್ಣೆಕರ ತಂಡಗಳು ಸೊಗಸಾಗಿ ಭರತನಾಟ್ಯ ಪ್ರದರ್ಶಿಸಿ ಸಭಿಕರ ಮನ ಗೆದ್ದರು.

೮. **ಹಾಸ್ಯ–ಜಾದೂ–ನೃತ್ಯ ಸಂಜೆ :**

ಕರ್ನಾಟಕ ವಿದ್ಯಾವರ್ಧಕ ಸಂಘದ ಆವರಣಕ್ಕೆ ಅಡಿಯಿಟ್ಟ ತಕ್ಷಣ ನಾನು ಪುಳಕಿತನಾಗುತ್ತೇನೆ. ಕರ್ನಾಟಕ ವಿದ್ಯಾವರ್ಧಕ ಸಂಘ ನಾಡು–ನುಡಿಗೆ ಮಾಡಿದ ಅವಿಸ್ಮರಣೀಯ ಸೇವೆ ನನ್ನನ್ನು ಪುಳಕಿತನಾಗುವಂತೆ ಮಾಡುತ್ತದೆ. ಅದೇ ರೀತಿ ಈ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಪುರವರ ಹೆಸರು ನನ್ನ ಕಿವಿಯ ಮೇಲೆ ಬಿದ್ದ ತಕ್ಷಣ ನಾನು ಪುಳಕಿತನಾಗುತ್ತೇನೆ. ಕನ್ನಡ ಭಾಷೆ ಉಳಿವು ಮತ್ತು ಬೆಳವಣಿಗೆಗೆ ಅವರು ಮಾಡಿದ ಹೋರಾಟ ನನ್ನ ಕಣ್ಣೆದುರು ಬಂದು ಪುಟ್ಟಪ್ಪನವರ ಧೀಮಂತ ವ್ಯಕ್ತಿತ್ವ ನನಗೆ ರೋಮಾಂಚ ನೀಡುತ್ತದೆ. ನಾನು ಪುಟ್ಟಪ್ಪನವರ ಜೊತೆ ಕನ್ನಡ ಕಾವಲು ಸಮಿತಿಯ ಸದಸ್ಯನಾಗಿ ಅವರು ಮಾಡಿದ ಕಾರ್ಯವನ್ನು ಹತ್ತಿರದಿಂದ ಬಲ್ಲವನಾಗಿದ್ದೇನೆ. ಪುಟ್ಟಪ್ಪನವರು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾದ ಕಾಲದಲ್ಲಿ ಕರ್ನಾಟಕದ ರಾಜ್ಯದ ಅಂದಿನ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಅಶೋಕನಾಥ ಬ್ಯಾನರ್ಜಿಯವರು, ತನಗೆ ಕನ್ನಡ ಬರುವುದಿಲ್ಲ, ಆದ್ದರಿಂದ ಈ ಸಭೆಯಲ್ಲಿ ಪಾಟೀಲ ಪುಟ್ಟಪ್ಪನವರು ಅನುಮತಿಸಿದರೆ ನಾಲ್ಕು ಮಾತು ಇಂಗ್ಲೀಷನಲ್ಲಿ ಮಾತನಾಡುತ್ತೇನೆ, ಇಲ್ಲದೇ ಹೋದಲ್ಲಿ ನಾನು ಮಾತನಾಡುವ ಸಾಹಸ ಮಾಡುವುದಿಲ್ಲ ಎಂದು ಪಾಟೀಲ ಪುಟ್ಟಪ್ಪನವರ ಅನುಮತಿ ಕೋರಿದ್ದಕ್ಕೆ ನಾನು ಸಾಕ್ಷಿಯಾಗಿದ್ದೇನೆ. ಈ ಘಟನೆ ಪಾಟೀಲ ಪುಟ್ಟಪ್ಪನವರ ಕನ್ನಡದ ಬದ್ಧತೆ ಮತ್ತು ಅವರ ಧೀಮಂತಿಕೆಯನ್ನು ಎತ್ತಿತೋರಿಸುತ್ತದೆ ಎಂದು ಖ್ಯಾತ ಸಾಹಿತಿ ಡಾ. ಸಿದ್ಧಲಿಂಗಯ್ಯ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದಿನಾಂಕ **೨೩–೧೧–೨೦೧೮** ರಂದು ಹಮ್ಮಿಕೊಂಡಿರುವ **'ಹಾಸ್ಯ–ಜಾದೂ–ನೃತ್ಯ ಸಂಜೆ'** ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇಂದು ನೃಪತುಂಗ ಪ್ರಶಸ್ತಿಗೆ ಭಾಜನರಾದ ಡಾ. ಸಿದ್ಧಲಿಂಗಯ್ಯ ಸಂಘದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ, ನಮ್ಮ ನಾಡಿನಲ್ಲಿ ಆಗಿಹೋದ ಬಸವಾದಿ ಶರಣರು, ಹರಿದಾಸರು, ದಾರ್ಶನಿಕರು ಮತ್ತು ಮಹಾನ್ ವ್ಯಕ್ತಿಗಳು ಜಾತಿ ಮೀರಿದ ಸಮಾಜ ನಿರ್ಮಾಣವಾಗುವ ಹಿತೋಪದೇಶಗಳನ್ನು ನೀಡಿದ್ದಾರೆ, ಈ ಹಿತೋಪದೇಶಗಳನ್ನು ನಾವು ಇಂದು ಮರೆತಿದ್ದೇವೆ, ಆದ್ದರಿಂದ ಈ ಮಹನೀಯರ ಹಿತೋಪದೇಶಗಳನ್ನು ನೆನಪಿಸಿಕೊಂಡು ಪಾಲಿಸೋಣ, ಆ ಮೂಲಕ ಸುಂದರ

ಸಮಸಮಾಜ ಕಟ್ಟೋಣ, ಅದೇ ರೀತಿ ಕನ್ನಡದ ಶ್ರೀ ಗದುಗಿನ ತೋಂಟದಾರ್ಯಮಠದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಕಪ್ಪತಗುಡ್ಡ ಸಂರಕ್ಷಣೆಗಾಗಿ ಮತ್ತು ಪರಿಸರ ರಕ್ಷಣೆಗಾಗಿ ಹೋರಾಟ ಮಾಡುತ್ತಾ ಬಂದಿದ್ದರು, ಇಂದು ಅವರು ನಮ್ಮನ್ನು ಅಗಲಿದ್ದಾರೆ, ಆದರೆ ಅವರ ಈ ಆದರ್ಶಗಳು ನಮ್ಮ ಕಣ್ಣು ಮುಂದಿವೆ, ಅವರ ಆದರ್ಶ ಪಾಲಿಸಿ ಕಪ್ಪತಗುಡ್ಡ ಮತ್ತು ಇತರೆ ಎಲ್ಲ ಪರಿಸರ ರಕ್ಷಣೆಯ ಕಾಯಕವನ್ನೂ ಕೂಡ ನಾವು ಮುಂದುವರೆಸಿಕೊಂಡು ಹೋಗಬೇಕಿದೆ, ಇಂದಿನ ವಿದ್ಯಾರ್ಥಿ ಯುವಜನರು ಸಾಮಾಜಿಕ ಬದ್ಧತೆಯಿಂದ ವಿಮುಖರಾಗುತ್ತಿದ್ದಾರೆ, ಅವರನ್ನು ಹುರಿದುಂಬಿಸಿ ಇಂತಹ ಸಮಾಜಮುಖಿ ಹೋರಾಟಗಳಿಗೆ ಅಣಿಗೊಳಿಸಬೇಕಾಗಿದೆ ಎಂದರು.

ಡಾ. ಎಂ. ಎಂ. ಕಲಬುರ್ಗಿಯವರ ಹತ್ಯೆಗೈದವರನ್ನು ಪತ್ತೆಹಚ್ಚುವಲ್ಲಿ ಸರಕಾರ ಇಲ್ಲಿಯವರೆಗೆ ಸಾಫಲ್ಯಗೊಂಡಿಲ್ಲ ಎಂಬುದು ವಿಷಾದನೀಯ ಮತ್ತು ಸರಕಾರ ತನಿಖೆಯನ್ನು ತೀವ್ರಗೊಳಿಸಿ ಹಂತಕರನ್ನು ಕೂಡಲೇ ಬಂಧಿಸಿ ಸಾಮಾಜಿಕ ಚಳುವಳಿಗೆ ಸರಕಾರ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸುತ್ತೇನೆಂದು ಮುಂದುವರೆದು ಮಾತನಾಡಿದ ಡಾ. ಸಿದ್ಧಲಿಂಗಯ್ಯ ಸರಕಾರವನ್ನು ಒತ್ತಾಯಿಸಿದರು.

ಸಂಘದ ಸಹಕಾರ್ಯದರ್ಶಿ ಸದಾನಂದ ಶಿವಳ್ಳಿಯವರು 'ಹಾಸ್ಯ–ಜಾದೂ–ನೃತ್ಯ' ಸಂಜೆ ಕಾರ್ಯಕ್ರಮಗಳಿಗೆ ಚಾಲನೆ ನೀಡುತ್ತಾ ಮಾತನಾಡಿ, ೧೫೯ ವರ್ಷಗಳ ಸಾರ್ಥಕ್ಯದ ಇತಿಹಾಸವುಳ್ಳ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ನಾಡು–ನುಡಿ–ನೆಲ–ಜಲಕ್ಕಾಗಿ ತನ್ನದೆ ಆದ ಅಪಾರ ಕೊಡುಗೆ ನೀಡುತ್ತಾ, ಸಾಹಿತ್ಯ, ಸಂಗೀತ, ನಾಟಕ ಮುಂತಾದ ಕಲೆ, ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಾ ಸಾಹಿತ್ಯಿಕ, ಸಾಂಸ್ಕೃತಿಕ ಪರಂಪರೆಯನ್ನು ಎತ್ತಿಹಿಡಿಯುತ್ತ ಬಂದಿದೆ, ಆ ದಿಶೆಯಲ್ಲಿ ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸಂಘವು ನಾಡೋಜ ಡಾ. ಪಾಪುರವರ ನೇತೃತ್ವದಲ್ಲಿ ಸತತ ೧೫ ದಿನಗಳ ಕಾಲ ವೈವಿದ್ಯಮಯ, ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಇಂದು 'ಹಾಸ್ಯ–ಜಾದೂ–ನೃತ್ಯ' ಸಂಜೆ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಸದಾವಕಾಶ ನನಗೆ ದೊರೆತಿದ್ದು ನನ್ನ ಸುದೈವ ಎಂದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಶ್ರೀನಿವಾಸ ವಾಡಪ್ಪಿ ಹಾಗೂ ಶಂಕರಗೌಡ ಕೆ. ಪಾಟೀಲ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಸನ್ಮಾನಿತರ ಪರವಾಗಿ ಪತ್ರಿಕ್ರಿಯಿಸಿ ಮಾತನಾಡಿದ, ಶ್ರೀನಿವಾಸ ವಾಡಪ್ಪಿಯವರು, ಸಂಘದ ಒಡನಾಟದಿಂದ ಹಾಗೂ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ, ದಿ. ಕೆ. ಎಸ್. ದೇಶಪಾಂಡೆಯವರ ಮತ್ತು ದಿ. ಡಾ. ಎಂ. ಎಂ. ಕಲಬುರ್ಗಿಯವರ ಘನ ವ್ಯಕ್ತಿತ್ವ ಹಾಗೂ ಪಾಂಡಿತ್ಯದಿಂದ ಪ್ರಭಾವಿತನಾಗಿ ಸಮಾಜಮುಖಿಯಾಗಿ ಬೆಳೆದವನು ನಾನು. ಸಂಘವು ಇಂದು ನಮ್ಮನ್ನು ಸನ್ಮಾನಿಸಿ ಗೌರವಿಸಿದ್ದು ಸೌಭಾಗ್ಯ ಎಂದರು. ಸಂಘದ ಮಕ್ಕಳಂತಿರುವ ನಮ್ಮನ್ನು ಗುರುತಿಸಿ ಸಂಘ ಸನ್ಮಾನಿಸಿರುವುದು ಸಂಘದ ಕಾರ್ಯ ಶ್ಲಾಘನೀಯ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಬಸವಪ್ರಭು ಹೊಸಕೇರಿ ನಿರ್ವಹಿಸಿದರು, ಶ್ರೀಮತಿ ಪ್ರಫುಲ್ಲಾ ನಾಯಕ ಸನ್ಮಾನಿತರನ್ನು ಪರಿಚಯಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು. ಶ್ರೀಮತಿ ಮೇಘಾ ಹುಕ್ಕೇರಿ ಹಾಗೂ ಕು. ಸಾಕ್ಷಿ ಹುಕ್ಕೇರಿ ಹುಕ್ಕೇರಿ ಕನ್ನಡ ಗೀತೆ ಹಾಡಿದರು.

ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ) ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ, ಶಂಕರ ಕುಂಬಿ, ಶ್ರೀಮತಿ ಪಾರ್ವತಿ ಹಾಲಭಾವಿ, ಜಯಶ್ರೀ ಗವಳಿ ಅತಿಥಿಗಳನ್ನು ಗೌರವಿಸಿದರು.

ಸವದತ್ತಿಯ ರಾಜು ಬದಾಮಿ ಹಾಸ್ಯ–ಜಾದೂ ಕಾರ್ಯಕ್ರಮ ನಡೆಸಿಕೊಟ್ಟರು. ಧಾರವಾಡದ ಶ್ರೀಮತಿ ಸೀತಾ ಛಪ್ಪರ ಹಾಗೂ ತಂಡದಿಂದ ನೃತ್ಯ ಹಾಗೂ ಗಣೇಶ ನೃತ್ಯ ಶಾಲೆಯ ವಿದೂಷಿ ರೋಹಿಣಿ ಇಮಾರತಿ ಹಾಗೂ ತಂಡದವರು ಸೊಗಸಾಗಿ ನೃತ್ಯ ವೈವಿಧ್ಯ ಕಾರ್ಯಕ್ರಮ ನಡೆಸಿಕೊಟ್ಟು ಸಭೀಕರ ಮನತಣಿಸಿದರು.

**೯. ಸಿತಾರ ಸಂಜೆ' :**

ನಮ್ಮ ಸುತ್ತಮುತ್ತಲಿನ ಜನರ ಜೀವನವನ್ನ ಸ್ವಲ್ಪ ಲಕ್ಷ್ಯಕೊಟ್ಟು ನೋಡಿದಾಗ, ಹೆಚ್ಚಿನ ಜನರು ದಿನನಿತ್ಯದ ಕೆಲಸಕಾರ್ಯಗಳಲ್ಲಿ ಒತ್ತಡ ಅನುಭವಿಸುವುದು, ಮಾನಸಿಕ ನೆಮ್ಮದಿ ಹಾಳುಮಾಡಿಕೊಂಡಿರುವುದು ಮತ್ತು ವಿಚಲಿತರಾಗಿರುವುದನ್ನು ಕಾಣುತ್ತೇವೆ. ಇಂತಹ ವಿಚಿತ್ರ ಸನ್ನಿವೇಶಗಳನ್ನು ಯಾವುದೆ ಒಂದು ಬಗೆಯ ಕೆಲಸ ನಿರ್ವಹಿಸುವ ಸಮೂಹಕ್ಕೆ ಮಾತ್ರ ಸೀಮಿತವಾಗದೆ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುವವರಲ್ಲಿ ಈ ವಿಚಿತ್ರ ಸನ್ನಿವೇಶ ನೋಡುತ್ತಿದ್ದೇವೆ. ನಮ್ಮ ಪೂರ್ವಜರು ನಮಗಿಂತ ಕಷ್ಟದ ಕೆಲಸಗಳನ್ನು ಬಿಸಿಲು, ಮಳೆ, ಚಳಿ ಎನ್ನದೇ ಮಾಡಿ ಸಂತುಷ್ಟರಾಗಿರುವುದನ್ನು ನಾವು ಕೇಳುತ್ತಿದ್ದೇವೆ ಮತ್ತು ಕೆಲವರು ನೋಡಿದ್ದೇವೆ ಕೂಡಾ, ಮೈಬಗ್ಗಿಸಿ ಕಠಿಣ ಕೆಲಸ ಮಾಡಿದಾಗ್ಯೂ ಕೂಡಾ ನಮ್ಮ ಪೂರ್ವಜರು ಇಂತಹ ಕೆಲಸದ ಒತ್ತಡವನ್ನು ಅನುಭವಿಸದೇ ಜೀವನವನ್ನು ಆನಂದಿಸುವ ಕಲೆಯನ್ನು ಮೈಗೂಡಿಸಿಕೊಂಡಿದ್ದರು. ಈಗಿನಂತೆ ಸಮೂಹ ಮಾಧ್ಯಮಗಳು ಅಥವಾ ಸಂಪರ್ಕ ಮಾಧ್ಯಮಗಳು ಇಲ್ಲದೇ ಇದ್ದರೂ ಕೂಡಾ ಇರುವ ಇತಿಮಿತಿಗಳಲ್ಲಿ ಸ್ಥಳೀಯವಾಗಿ ಲಭ್ಯವಾಗುತ್ತಿದ್ದ ಮನರಂಜನೆಯ ಸಾಧನಗಳ ಮೂಲಕ, ನಮ್ಮ ಹಿರಿಯರು ತಮ್ಮ ಜೀವನದ ಆನಂದವನ್ನು ಆಸ್ವಾದಿಸಿದ್ದನ್ನು ಕಾಣುತ್ತೇವೆ. ಅಧುನಿಕ ಭರಾಟೆಯ ಜೀವನ ಶೈಲಿಯ

ಹೆಸರಿನಲ್ಲಿ ನಾವು ಸಾಂಸ್ಕೃತಿಕ ಮತ್ತು ಸಾಹಿತ್ಯ ಲೋಕದಿಂದ ವಿಮುಖರಾಗುತ್ತಿದ್ದೇವೆ. ಆದ್ದರಿಂದ ಇಂತಹ ಗೊಂದಲದ ಜೀವನವನ್ನು ಅನುಭವಿಸುತ್ತಿದ್ದೇವೆ. ಸಂಗೀತ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಲೋಕ ಇಂತಹ ಜಂಜಡಗಳಿಂದ ನಮಗೆ ಮುಕ್ತಿ ನೀಡಿ ಆನಂದದಾಯಕ ಜೀವನವನ್ನು ನೀಡುತ್ತದೆ. ಆದ್ದರಿಂದ ಇವುಗಳನ್ನು ನಾವು ಮೈಗೂಡಿಸಿಕೊಳ್ಳಬೇಕೆಂದು ಖ್ಯಾತ ನ್ಯಾಯವಾದಿ ಶ್ರೀ ರಾಜಶೇಖರ ಎಚ್. ಅಂಗಡಿಯವರು ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ೧೫ ದಿನಗಳ ಕಾಲ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ, ಇಂದು **'ಸಿತಾರ ಸಂಜೆ'** ಸಂಜೆ ಕಾರ್ಯಕ್ರಮಕ್ಕೆ ದಿನಾಂಕ **೨೪-೧೧-೨೦೧೮** ರಂದು ಚಾಲನೆ ನೀಡಿ ಮಾತನಾಡಿದ ಖ್ಯಾತ ನ್ಯಾಯವಾದಿ ಶ್ರೀ ರಾಜಶೇಖರ ಎಚ್. ಅಂಗಡಿಯವರು, ಸಿತಾರ ತಂತಿವಾದ್ಯ ಪ್ರಕಾರವಾಗಿದ್ದು, ಭಾರತೀಯ ಸಂಸ್ಕೃತಿಯ ಮೂಲ ಶಾಸ್ತ್ರೀಯ ಸಂಗೀತವಾಗಿದೆ, ಸಿತಾರ ನುಡಿಸಿದಾಗ ಹೊರಹೊಮ್ಮುವ ಸಂಗೀತವಾಹಿನಿಗಳು ಮತ್ತು ತರಂಗಗಳು ಮನುಷ್ಯನ ಮೆದುಳನ್ನು ಚುರುಕುಗೊಳಿಸುತ್ತವೆ ಎಂದು ವೈದ್ಯಕೀಯ ಶಾಸ್ತ್ರದ ಅಧ್ಯಯನ ಹೇಳುತ್ತಿರುವುದು ಸಿತಾರವಾದನದ ಮಹತ್ವವನ್ನು ಎತ್ತಿತೋರಿಸುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಪ್ರೊ. ಆರ್. ಎಸ್. ಹಿರೇಮಠ, ಶ್ರೀ ಎಂ. ಟಿ. ಮಲ್ಲಾಡದ, ಡಾ. ಚಂದ್ರಮೌಳಿ ನಾಯ್ಕರ, ಶ್ರೀ ನಿಂಗಣ್ಣ ಕುಂಟಿ(ಇಟಗಿ) ಹಾಗೂ ಶ್ರೀ ಅರುಣ ಹುಯಿಲಗೋಳ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸನ್ಮಾನಿತರ ಪರವಾಗಿ ಪ್ರತಿಕ್ರಿಯಿಸಿ ಮಾತನಾಡಿದ, ಡಾ. ಚಂದ್ರಮೌಳಿ ನಾಯ್ಕರ, ಸಂಘದ ಜೊತೆಗಿನ ತಮ್ಮ ಒಡನಾಟ ಹಾಗೂ ಸಂಘದ ಗ್ರಂಥಾಲಯದಲ್ಲಿ ತಾವು ಪುಸ್ತಕ ಎರವಲು ಪಡೆಯುತ್ತಾ ಓದಿ ಬೆಳೆದದ್ದನ್ನು ಮೆಲುಕು ಹಾಕಿ, ಗ್ರಂಥಾಲಯಕ್ಕೆ ತಮ್ಮ ಹಲವು ಗ್ರಂಥಗಳನ್ನು ಕಾಣಿಕೆ ನೀಡಿ, ಇಂದು ನಾವು ಏನಾದರೂ ಆಗಿದ್ದರೆ ಅದು ಸಂಘದ ಪ್ರೇರಣೆಯಿಂದ ಎಂದು ಹೇಳಿ, ಸಂಘವು ಇಂದು ನಮ್ಮನ್ನು ಗುರುತಿಸಿ ಸನ್ಮಾನಿಸಿ ಗೌರವಿಸಿದ್ದು ನಮಗೆಲ್ಲ ಸಂತಸ ತಂದಿದೆ ಎಂದು ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ವೇದಿಕೆ ಮೇಲೆ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಶಾಂತೇಶ ಗಾಮನಗಟ್ಟಿ ಉಪಸ್ಥಿತರಿದ್ದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ಸ್ವಾಗತಿಸಿದರು. ಶ್ರೀಮತಿ ಪ್ರಫುಲ್ಲಾ ನಾಯಕ ಸನ್ಮಾನಿತರನ್ನು ಪರಿಚಯಿಸಿದರು. ಶಂಕರ ಕುಂಬಿ ವಂದಿಸಿದರು. ಕದಳಿ ಮಹಿಳಾ ವೇದಿಕೆಯ ಸದಸ್ಯರಾದ ಶ್ರೀಮತಿ ಶಾರದಾ ಕೌದಿ ಹಾಗೂ ಸಂಗಡಿಗರು ಕನ್ನಡ ಗೀತೆ ಹಾಡಿದರು.

ನಂತರ ಖ್ಯಾತ ಸಿತಾರವಾದಕರಾದ ಧಾರವಾಡದ ಪಂ. ಮೊಹಸಿನ್ ಖಾನ್ ಹಾಗೂ ಇಟಲಿಯ ಫುಲ್‌ವಿಯೋ ಕೊರೆನ್ ಅವರು ಸೊಗಸಾಗಿ ಸೀತಾರವಾದನ ಕಾರ್ಯಕ್ರಮ ನಡೆಸಿಕೊಟ್ಟು ಸಭಿಕರ ಮನಸೂರೆಗೊಂಡರು. ಇವರಿಗೆ ನಿಸಾರ ಅಹ್ಮದ ಹಾಗೂ ಕಾಶಿನಾಥ ಗಾಯಕವಾಡ ತಬಲಾ ಸಾಥ್ ನೀಡಿದರು.

೧೦. **ಯಕ್ಷಗಾನ ಸಂಜೆ :**

ಕನ್ನಡ ನಾಡಿನಲ್ಲಿ ವಿಶೇಷವಾದ ಮತ್ತು ಬೇರೆ ಬೇರೆ ಹಲವಾರು ಕಲೆಗಳು ಇವೆ. ಯಕ್ಷಗಾನ ರಂಗ ಕಲೆಯಾಗಿ ನಾಡಿನ ಸಂಸ್ಕೃತಿಯ ಅವಿಭಾಜ್ಯ ಅಂಗಗಳಲ್ಲಿ ಒಂದಾಗಿದೆ. ಯಕ್ಷಗಾನ ಒಂದು ಪ್ರದರ್ಶನ ಕಲೆಯಾಗಿದ್ದು, ಯಕ್ಷಗಾನಕ್ಕಾಗಿ ಬಳಸುವ ಸಾಮಗ್ರಿಗಳು ಮತ್ತು ನಿರೂಪಿಸುವ ತಂತ್ರಗಳಿಂದಾಗಿ ಮತ್ತು ವಿಶೇಷವಾದ ರಂಗ ವೇದಿಕೆಯಿಂದಾಗಿ ಉಳಿದ ರಂಗ ಮಾಧ್ಯಮಗಳಿಗಿಂತ ವಿಭಿನ್ನವಾಗಿ ಎದ್ದು ಕಾಣುತ್ತದೆ. ಯಕ್ಷಗಾನದ ವೇಷಭೂಷಣ ಪಾತ್ರಗಳು, ಮುಖಗಳ ಬಣ್ಣ, ತಾಳ, ವಾದನ ಆಕರ್ಷಕವಾಗಿರುತ್ತವೆ. ಇವುಗಳನ್ನು ಅನುಸರಿಸಿ ಯಕ್ಷಗಾನ ಕಲಾವಿದರು ಪ್ರದರ್ಶಿಸುವ ಮುಖಭಾವ, ನಟನೆ ಮತ್ತು ನೃತ್ಯಾಭಿನಯ ಮನಮೋಹಕವಾಗಿರುತ್ತದೆ ಎಂದು ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ೧೫ ದಿನಗಳ ಕಾಲ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ, ದಿನಾಂಕ **೨೫-೧೧-೨೦೧೮** ರಂದು **'ಲವ-ಕುಶ'** ಯಕ್ಷಗಾನಕ್ಕೆ ಚಾಲನೆ ನೀಡಿ ಮುಂದುವರೆದು ಮಾತನಾಡಿದ ಶಿವಣ್ಣ ಬೆಲ್ಲದವರು, ಯಕ್ಷ ಎಂದರೆ ದೇವರು, ಗಾನ ಎಂದರೆ ಹಾಡು, ಯಕ್ಷಗಾನ ಎಂದರೆ ದೇವಾನುದೇವತೆಗಳ ಗಾಯನ, ರಾಮಾಯಣ, ಮಹಾಭಾರತ ಮತ್ತು ಪೌರಾಣಿಕ ಕಥಾಹಂದರ ಇಟ್ಟು ಮಾಡುವ ಯಕ್ಷಗಾನ ನಮ್ಮ ಸಂಸ್ಕೃತಿಯನ್ನು ರಕ್ಷಿಸುವ ಕೆಲಸ ಮಾಡುತ್ತಿದೆ ಧಾರವಾಡದ ಯಕ್ಷಗಾನ ಮತ್ತು ಸಂಸ್ಕೃತಿ ತಂಡ ಯಕ್ಷಗಾನ ಪ್ರಸ್ತುತಪಡಿಸಲಿದ್ದಾರೆ, ಇದು ಯಶಸ್ವಿಯಾಗಲಿ ಎಂದು ಶುಭಕೋರಿ ಯಕ್ಷಗಾನ ಸಂಜೆ ಕಾರ್ಯಕ್ರಮಕ್ಕೆ ತುಂಬಾ ಸಂತೋಷದಿಂದ ಚಾಲನೆ ನೀಡಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಡಾ. ವೀಣಾ ಶಾಂತೇಶ್ವರ, ಶ್ರೀ ನರಸಿಂಹ ಪರಾಂಜಪೆ, ಶ್ರೀ ಮಾರುತಿ ರಾಜಬಾ ಭೋಸಲೆ, ಶ್ರೀ ಬಾಣದ ಮಾರುತಿ ಹಾಗೂ ಶ್ರೀ ಶಿವಪುತ್ರಯ್ಯ ಮ. ರಾಚಯ್ಯನವರ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಮುಮ್ಮಿಗಟ್ಟಿಯ ರಂಗಕರ್ಮಿ ಶ್ರೀ ಸುರೇಶ ಕಾಟ್ಕರ ಇವರಿಗೆ ರಂಗಕಲಾ ಸನ್ಮಾನ ಮಾಡಲಾಯಿತು.

ಸನ್ಮಾನಿತರ ಪರವಾಗಿ ಮಾತನಾಡಿದ ಡಾ. ವೀಣಾ ಶಾಂತೇಶ್ವರ, ನನಗೆ ಸಾಕಷ್ಟು ಪ್ರಶಸ್ತಿಗಳು, ಪುರಸ್ಕಾರಗಳು, ಸನ್ಮಾನಗಳು ನಡೆದು ಹೋಗಿವೆ. ಆ ಕ್ಷಣದಲ್ಲಿ ನನಗೆ ಸಂತೋಷ ಉಂಟಾಗಿದ್ದು ಹೌದು. ಆದರೆ ಇಂದು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಸನ್ಮಾನದಿಂದ ನಾನು ಹೆಚ್ಚು ಸಂತುಷ್ಟಳಾಗಿದ್ದೇನೆ. ಕರ್ನಾಟಕ ವಿದ್ಯಾವರ್ಧಕ ಸಂಘ ನನಗೆ ತವರು ಮನೆ ಇದ್ದ ಹಾಗೆ. ಹೆಣ್ಣಾದ ನನಗೆ ಈ ತವರು ಮನೆಯ ಸನ್ಮಾನ ಅತೀವ ಸಂತೊಷ ನೀಡಿದೆ. ಏಕೆಂದರೆ ತಾಯಿ ಏನನ್ನಾದರೂ ಕೊಟ್ಟರೆ ವಿಶೇಷ ಮಹತ್ವ ಇರುತ್ತದೆ. ಅದರ ಜೊತೆ ಸದಿಚ್ಛೆ, ಸದ್ಭಾವ, ಪ್ರೀತಿ, ಆಶೀರ್ವಾದ ಎಲ್ಲ ಇರುತ್ತದೆ. ಸಂಘದಿಂದ ದೊರೆತ ಈ ಸನ್ಮಾನ ನನಗೆ ಅಮೂಲ್ಯವಾದದ್ದು, ನನ್ನ ಜೀವನದಲ್ಲಿ ನನಗೆ ದೊರೆತ ರಾಜ್ಯ, ರಾಷ್ಟ್ರ ಮಟ್ಟದ ಎಲ್ಲ ಸನ್ಮಾನಗಳಿಗಿಂತ ದೊಡ್ಡದು. ಇದು ತವರು ಮನೆಯ ಉಡುಗೊರೆ ಎಂದು ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿ, ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಮಾರ್ಗದರ್ಶನ ಅಪರೂಪದ ಮತ್ತು ದಿಟ್ಟ ಮಾರ್ಗದರ್ಶನ ನಮ್ಮ ನಾಡಿಗೆ ಎಂದು ಡಾ. ವೀಣಾ ಶಾಂತೇಶ್ವರ ಸನ್ಮಾನಕ್ಕೆ ಪ್ರತಿಕ್ರಿಯಿಸಿದರು.

ಸನ್ಮಾನಿತರ ಪರವಾಗಿ ಮತ್ತೋರ್ವ ಹಿರಿಯ ಸದಸ್ಯ ಕ.ವಿ.ವ.ಸಂಘದ ಕಚೇರಿ ಅಧೀಕ್ಷಕ ಶಿವಪುತ್ರಯ್ಯ ಮ. ರಾಚಯ್ಯನವರ ಪ್ರತಿಕ್ರಿಯಿಸಿ, ಏನೂ ಅರಿಯದ ಬಾಲಕನಾಗಿ ಸಂಘದ ನೌಕರನಾಗಿ ಬಂದ ನನಗೆ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಮಾರ್ಗದರ್ಶನ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘವು ಅನ್ನ ಮತ್ತು ಜ್ಞಾನ ನೀಡಿ ಬೆಳೆಸಿತು ಎಂದು ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು.

ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡಿ, ಪೂಜ್ಯ ಮಹಾತ್ಮಾ ಗಾಂಧೀಜಿಯವರ ಹೆಸರನ್ನು ಒಳಗೊಂಡಿರದ ನಾಡಗೀತೆ ಪರಿಪೂರ್ಣ ನಾಡಗೀತೆ ಎನ್ನಿಸಿಕೊಳ್ಳಲಾರದು. ಸರ್ಕಾರ ಈಗ ನಾಡಗೀತೆಯ ಅವಧಿಯನ್ನು ಕಡಿಮೆಗೊಳಿಸುವ ಆಲೋಚನೆ ಮಾಡಿದೆ. ಈ ಸಂದರ್ಭದಲ್ಲಿ ತಜ್ಞರೊಡನೆ ಸಮಾಲೋಚಿಸಿ ನಾಡಗೀತೆಯಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಹೆಸರನ್ನು ಸೂಕ್ತವಾದ ಸ್ಥಳದಲ್ಲಿ ಸೇರ್ಪಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಸರ್ಕಾರ ಗಂಭೀರವಾಗಿ ಈ ದಿಸೆಯಲ್ಲಿ ಚಿಂತನ ಮಾಡಿ, ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಿಗೆ ನಾಡ ಗೀತೆಯಲ್ಲಿ ಕೂಡಾ ಗೌರವ ಸಮರ್ಪಿಸಲಿ ಎಂದು ನಾಡೋಜ ಡಾ. ಪಾಟೀಲ ಪುಟಪ್ಪ ಸರ್ಕಾರಕ್ಕೆ ಕರೆ ನೀಡಿದರು.

ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಗಳಲ್ಲಿ ಭಿನ್ನಾಭಿಪ್ರಾಯ ಸಹಜ, ಭಿನ್ನಾಭಿಪ್ರಯ ಬದಿಗಿರಿಸಿ ಸಾಹಿತಿ ಮತ್ತು ಕಲಾವಿದರನ್ನ ಅವರ ಸಾಧನೆಗಳ ಮಾನದಂಡದಿಂದ ಮಾತ್ರ ನೋಡಬೇಕು. ಡಾ. ವೀಣಾ ಶಾಂತೇಶ್ವರ ಒಬ್ಬ ಪ್ರತಿಭಾವಂತ ಅಪರೂಪದ ಬರಹಗಾರ್ತಿ, ಡಾ. ವೀಣಾ ಶಾಂತೇಶ್ವರ ಅವರಂತಹ ಕಥೆಗಾರ್ತಿ ಇನ್ನೊಬ್ಬರು ಇಲ್ಲ ಎಂದು ನಾಡೋಜ ಡಾ. ಪಾಟೀಲ ಪುಟ್ಟಪ್ಪ ಹೇಳಿದರು.

ವೇದಿಕೆ ಮೇಲೆ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಗೌರವ ಉಪಾಧ್ಯಕ್ಷರಾದ ಬಿ. ಎಲ್. ಪಾಟೀಲ, ಸದಾನಂದ ಶಿವಳ್ಳಿ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಸನ್ಮಾನಿತರನ್ನು ಪರಿಚಯಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ನಿರ್ವಹಿಸಿದರು, ಶಾಂತೇಶ ಗಾಮನಗಟ್ಟಿ ವಂದಿಸಿದರು. ಕುಮಾರ ಬಡಿಗೇರ ಹಾಗೂ ಸಂಗಡಿಗರು ಕನ್ನಡ ಗೀತೆ ಹಾಡಿದರು.

ನಂತರ ಯಕ್ಷಗಾನ ಮತ್ತು ಸಂಸ್ಕೃತಿ ಸಂಘ, ಧಾರವಾಡ ಇವರು ಮನಮೋಹಕವಾಗಿ **'ಲವ-ಕುಶ'** ಯಕ್ಷಗಾನ ಪ್ರಸ್ತುತಪಡಿಸಿ ನೆರೆದ ಸಭಿಕರ ಮನಗೆದ್ದರು. ಪಾತ್ರವರ್ಗದಲ್ಲಿ ಲವ-ಪ್ರವೀಣ ಹೆಗಡೆ, ಕುಶ- ವಿನಾಯಕ ಭಟ್ಟ, ರಾಮ- ಸುರೇಶ ಹೆಗಡೆ, ಶತೃಘ್ನ- ಶಶಾಂಕ ಹೆಗಡೆ ಹಾಗೂ ವಾಲ್ಮೀಕಿ ಪಾತ್ರದಲ್ಲಿ ಎಸ್. ಆರ್. ಹೆಗಡೆಯವರು ತಮ್ಮ ಮನೋಜ್ಞ ಅಭಿನಯ ನೀಡಿದರು. ಹಿಮ್ಮೇಳದಲ್ಲಿ: ಭಾಗವತರಾಗಿ ಮಂಜುನಾಥ ಹೆಗಡೆ ಮತ್ತು ನರಸಿಂಹಸ್ವಾಮಿ, ಮದ್ದಳೆಯಲ್ಲಿ ಗಣಪತಿ ಹೆಗಡೆ, ಚಂಡೆಯಲ್ಲಿ ಮಹಾಬಲೇಶ್ವರ ಸಾಥ್ ನೀಡಿದರು.

೧೧. **ನಾಟಕ ಸಂಜೆ :**

ನಾಟಕಗಳ ಪ್ರಯೋಗದ ಹಿಂದೆ ಕಲಾವಿದರ ದೊಡ್ಡ ಪರಿಶ್ರಮ ಇರುತ್ತದೆ. ದಿನಮಾನಗಳಿಗೆ ಸರಿದೂಗುವ, ಪ್ರೇಕ್ಷಕರಿಗೆ ಒಪ್ಪುವ ಕಥಾ ಹಂದರವುಳ್ಳ ನಾಟಕ ಕೃತಿ ಆಯ್ಕೆ, ಮನಸ್ಸನ್ನು ಗೆಲ್ಲುವ ಸಂಭಾಷಣೆಗಳ ಕಡೆಗೆ ಗಮನ, ರಂಗಸಜ್ಜಿಕೆಯಿಂದ ಹಿಡಿದು ದೀಪಾಲಂಕಾರದವರೆಗೆ ಪಾತ್ರಕ್ಕೆ ಕಲಾವಿದನ ಸಿದ್ಧತೆ, ಆ ಪಾತ್ರಕ್ಕೆ ಅವಶ್ಯವಿರುವ ವೇಷಭೂಷಣ, ಭಾವ-ಭಂಗಿ ಮೈಗೂಡಿಸಿಕೊಳ್ಳುವುದು, ಕಲಾವಿದ ಮಾಡುವ ಪಾತ್ರ ಪರಿಣಾಮಕಾರಿಯಾಗಿ ಪ್ರೇಕ್ಷಕರಿಗೆ ಕಾಣುವ ಹಾಗೆ ಪ್ರಸ್ತುತಪಡಿಸಿ ಪಾತ್ರಕ್ಕೆ ಜೀವಕಳೆ ತುಂಬುವ ಹೀಗೆ ಇರುವ ಹತ್ತು ಹಲವಾರು ಸವಾಲುಗಳನ್ನು ಕಷ್ಟಪಟ್ಟು ಕರಗತ ಮಾಡಿಕೊಂಡಾಗ ನಾಟಕ ಪ್ರಯೋಗಗಳು ಯಶಸ್ವಿ ಆಗುತ್ತವೆ. ಪ್ರೇಕ್ಷಕರು ಕಲಾವಿದರ ಈ ಪರಿಶ್ರಮವನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಕೋಶಾಧ್ಯಕ್ಷರಾದ ಶ್ರೀ ಕೃಷ್ಣ ಜೋಶಿ ಕರೆ ನೀಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ೧೫ ದಿನಗಳ ಕಾಲ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ, ದಿನಾಂಕ **೨೬-೧೧-೨೦೧೮** ರಂದು ನಾಟಕ ಸಂಜೆ **'ಅದು ಬ್ಯಾರೇನ**

**ಐತಿ'** ಹಾಸ್ಯಪ್ರಧಾನ ನಾಟಕಕ್ಕೆ ಚಾಲನೆ ನೀಡಿ ಮುಂದುವರೆದು ಮಾತನಾಡಿದ ಕೃಷ್ಣ ಜೋಶಿಯವರು ಕನ್ನಡ ರಂಗಭೂಮಿ ಶ್ರೀಮಂತ ಇತಿಹಾಸ ಹಾಗೂ ಭವ್ಯ ಪರಂಪರೆಯನ್ನು ಹೊಂದಿದೆ. ಗುಬ್ಬಿ ವೀರಣ್ಣ, ಏಣಗಿ ಬಾಳಪ್ಪ ರಂಗಭೂಮಿಯ ಧೃವ ತಾರೆಗಳು. ನಾಟಕಗಳಲ್ಲಿ ಹಾಸ್ಯ ಪ್ರಧಾನ ನಾಟಕ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಬೇಡಿಕೆಯನ್ನು ಪಡೆದುಕೊಳ್ಳುತ್ತಿದೆ. ನಾಟಕ ನೋಡಬೇಕೆನ್ನುವ ಬಯಕೆ ಜನರಲ್ಲಿ ಇಂದಿಗೂ ಜೀವಂತವಾಗಿದೆ. ಜನರ ಬಯಕೆಯನ್ನು ಪೂರೈಸುವ ಸದಭಿರುಚಿಯ ನಾಟಕ ಪ್ರಯೋಗ ಹೆಚ್ಚು ಹೆಚ್ಚು ಬರಲಿ, ಮನುಷ್ಯನ ಆರೋಗ್ಯಕ್ಕೆ ಮತ್ತು ಆರೋಗ್ಯವಂತ ಸಮಾಜಕ್ಕೆ ನಾಟಕಗಳ ಕೊಡುಗೆ ಅಪಾರವಾಗಿದ್ದು, ನಗು ಎಲ್ಲ ಸಂತೋಷಕ್ಕೂ ಕಾರಣ. ನಾಟಕ ನಗುವಿಗೆ ಕಾರಣ, ಇಂದಿನ 'ಅದು ಬ್ಯಾರೇನ ಐತಿ' ಎಂಬ ನಾಟಕಕ್ಕೆ ನಾನು ಅತ್ಯಂತ ಸಂತೋಷದಿಂದ ಚಾಲನೆ ನೀಡಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಡಾ. ಮಧು ವೆಂಕಾರಡ್ಡಿ, ಶ್ರೀಮತಿ ಹನುಮಾಕ್ಷಿ ಗೋಗಿ, ಶ್ರೀ ಚನಬಸಪ್ಪ ಮರದ, ಶ್ರೀ ಬಸವರಾಜ ಅಂಗಡಿ, ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಧಾರವಾಡದ ರಂಗಕರ್ಮಿ ಪ್ರೊ. ಹರ್ಷ ಡಂಬಳ ಇವರಿಗೆ ರಂಗಕಲಾ ಸನ್ಮಾನ ಮಾಡಲಾಯಿತು.

ರಂಗಕಲಾ ಸನ್ಮಾನ ಸ್ವೀಕರಿಸಿ ಪ್ರತಿಕ್ರಿಯಿಸಿದ ಪ್ರೊ. ಹರ್ಷ ಡಂಬಳ, ಕರ್ನಾಟಕ ಏಕೀಕರಣದಲ್ಲಿ ಏಕೈಕ ಸಂಸ್ಥೆಯಾಗಿ ನಿಂತು ಇಡೀ ಕರ್ನಾಟಕಕ್ಕೆ ಏಕೀಕರಣದ ಕರೆ ನೀಡಿದ, ೧೨೯ ವರ್ಷಗಳಿಂದ ಸಾರಸ್ವತ ಲೋಕದ ಸೇವೆ ಮಾಡಿದ ಮಹಾನ್ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ನಮ್ಮಂಥವರನ್ನು ಗುರುತಿಸಿ ಸನ್ಮಾನ ಮಾಡಿದ್ದು ಸಂಘದ ಹಿರಿಮೆಗೆ ಸಾಕ್ಷಿ. ನಾನು ರಂಗಕರ್ಮಿಯಾಗಿ ಹೊರಹೊಮ್ಮಲು ಧಾರವಾಡ ವರ್ತಕರ ಸಂಘ ಹಾಗೂ ಕೆ. ಇ. ಬೋರ್ಡ ಸಂಸ್ಥೆ ನೀಡಿದ ಪ್ರೇರಣೆ ಪ್ರಮುಖ ಕಾರಣ ಎಂದು ಹೇಳಿ ಸಂಘಕ್ಕೆ ತಮ್ಮ ಉಪಕೃತಿಯನ್ನು ಸಲ್ಲಿಸಿದರು. ಕರ್ನಾಟಕ ವಿದ್ಯಾವರ್ಧಕ ಸಂಘವು ಗಳಗನಾಥ ಆದಿಯಾಗಿ ಸಾಹಿತ್ಯ ಲೋಕದ ದಿಗ್ಗಜರಿಗೆ ತವರು ಮನೆಯಾಗಿದೆ ಎಂದರು.

ಸನ್ಮಾನಿತರ ಪರವಾಗಿ ಮಾತನಾಡಿದ ಡಾ. ಮಧು ವೆಂಕಾರಡ್ಡಿ, ನನ್ನ ಗುರುಗಳೊಬ್ಬರ ಕಿವಿಮಾತಿನಂತೆ ನಾನು ಸನ್ಮಾನ ಸ್ವೀಕರಿಸುವುದು ನಿಲ್ಲಿಸಿ ಬಹಳ ವರ್ಷಗಳು ಗತಿಸಿವೆ. ಇದೇ ಮಾತು ನೆನಪಾಗಿ ಇಂದು ಸಂಘವು ನನ್ನನ್ನು ಸನ್ಮಾನಕ್ಕೆ ಆಹ್ವಾನಿಸಿದಾಗ ಏನು ಮಾಡುವುದು ಎಂದು ನನಗೆ ಗೊಂದಲ ಉಂಟಾಯಿತು. ಕೊನೆಗೆ ಕರ್ನಾಟಕದ ಶಕ್ತಿಕೇಂದ್ರವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ನನ್ನನ್ನು ಕರೆದು ಎಚ್ಚರಿಸಿ ನಿನ್ನದು ಇನ್ನೂ ಹೆಚ್ಚಿನ ಜವಾಬ್ದಾರಿಯಿದೆ ಎಂದು ತಿಳಿಸಿಕೊಡಲು ನನಗೆ ಆಹ್ವಾನಿಸಿದೆ, ಸಂಘದ ಈ ಸನ್ಮಾನ ನನಗೆ ನಾಡು-ನುಡಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸೇವೆ ಮಾಡಲಿ ಎಂದು ನೀಡಿದ ಆದೇಶ ಎಂದು ನಾನು ಶಿರಬಾಗಿ ನಮಿಸಿ ಈ ಸನ್ಮಾನ ಸ್ವೀಕರಿಸಿದ್ದೇನೆ, ಉತ್ಸಾಹದಿಂದ ಹೆಚ್ಚಿನ ಕೆಲಸ ಮಾಡುವ ಮಹದಾಸೆ ಮೂಡಿದೆ ಎಂಬ ಧನ್ಯತಾಭಾವ ಉಂಟಾಗಿದೆ ಎಂದರು.

ಶ್ರೀಮತಿ ಹನುಮಾಕ್ಷಿ ಗೋಗಿ ಮಾತನಾಡಿ, ನಾನು ಕ.ವಿ.ವಿ. ಯಲ್ಲಿ ಕನ್ನಡ ಎಂ.ಎ. ಓದುತ್ತಿರುವಾಗ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಮಹಾನ್ ಸಾಹಿತಿಗಳು, ಸಾಧಕರು, ಕಲಾವಿದರು ಭೆಟ್ಟಿ ನೀಡಲಿದ್ದಾರೆ ಎಂಬ ಮಾಹಿತಿ ಪಡೆದು, ಅವರ ಉಪನ್ಯಾಸ ಕೇಳಲು ಕುತೂಹಲದಿಂದ ಬರುತ್ತಿದ್ದೆ, ಇಲ್ಲಿ ಬರುತ್ತಿದ್ದ ಮಹನೀಯರ ಮಾತುಗಳನ್ನು ಕೇಳಿ ನಾನು ಪ್ರಭಾವಿತಳಾದೆ, ನನ್ನ ಬೆಳವಣಿಗೆಗೆ ಅದು ಪೂರಕ ಶಕ್ತಿಯಾಯಿತು, ಆ ಪ್ರೇರಣೆಯಿಂದ ನಾನು ಸಾಹಿತ್ಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿಕೊಂಡೆ, ನನ್ನ ಗುರುಗಳಾದ ಡಾ. ಎಂ. ಎಂ. ಕಲಬುರ್ಗಿಯವರ ಪ್ರೇರಣೆಯಿಂದ ನಾನು ಸಂಘದೆಡೆಗೆ ಆಕರ್ಷಿತಳಾದೆ, ಸಂಘದಲ್ಲಿ ನಡೆಯುವ ಹಿರಿಯರ ಮಾತುಗಳನ್ನು ಆಲಿಸಿ ನಾನೂ ಕೂಡ ಒಂದುದಿನ ಇವರಂತೆ ಈ ವೇದಿಕೆ ಮೇಲೆ ಮಾತನಾಡಬೇಕೆಂದು ಕನಸು ಕಂಡೆ ಮತ್ತು ಅದನ್ನು ಸಾಕಾರ ಮಾಡಿಕೊಂಡಿದ್ದೇನೆ, ಸಂಘದ ನನ್ನನ್ನು ಕರೆದು ಸನ್ಮಾನಿಸಿದ್ದಕ್ಕೆ ನಾನು ಕೃತಜ್ಞಳಾಗಿದ್ದೇನೆ ಎಂದರು.

ವೇದಿಕೆ ಮೇಲೆ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಗೌರವ ಉಪಾಧ್ಯಕ್ಷರಾದ ಬಿ. ಎಲ್. ಪಾಟೀಲ, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಮನೋಜ ಪಾಟೀಲ, ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ನಿರ್ವಹಿಸಿದರು, ಶಿವಾನಂದ ಭಾವಿಕಟ್ಟಿ ವಂದಿಸಿದರು. ಶಾಂತೇಶ ಗಾಮನಗಟ್ಟಿ ಸನ್ಮಾನಿತರನ್ನು ಪರಿಚಯಿಸಿದರು. ಕಲ್ಪತರು ಮಹಿಳಾ ಮಂಡಳದ ಶ್ರೀಮತಿ ಸವಿತಾ ಕುಸುಗಲ್ಲ ಹಾಗೂ ಸಂಗಡಿಗರು ಕನ್ನಡ ಗೀತೆ ಹಾಡಿದರು.

ನಂತರ ಸೋಮಶೇಖರ ಜಾಡರ ರಚನೆ, ಸಂಗೀತ, ನಿರ್ದೇಶನದ **'ಅದು ಬ್ಯಾರೇನ ಐತಿ'** ಹಾಸ್ಯ ಪ್ರಧಾನ ನಾಟಕವನ್ನು **'ಸಮಣ' ಕಲಾ ಅಕಾಡೆಮಿ (ರಿ)** ಧಾರವಾಡ ತಂಡದವರು ಸೊಗಸಾಗಿ ಪ್ರಸ್ತುತಪಡಿಸಿ ನೆರೆದ ಸಭಿಕರನ್ನು ನಗೆಗಡಲಲ್ಲಿ ತೇಲಿಸಿದರು.

೧೨. **ನಾಟಕ ಸಂಜೆ :**

ಕರ್ನಾಟಕ ವಿದ್ಯಾವರ್ಧಕ ಸಂಘವು ಎಂದಿನಿಂದಲೂ ಅವ್ಯಾಹತವಾಗಿ ರಚನಾತ್ಮಕ, ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಕಲೆ, ಕಲಾವಿದರಿಗೆ, ಸಾಹಿತಿಗಳಿಗೆ, ಬರಹಗಾರರಿಗೆ ಪ್ರೋತ್ಸಾಹ ನೀಡುತ್ತಾ

ಬರುತ್ತಿರುವ ನಾಡಿನ ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ಈ ದಿಶೆಯಲ್ಲಿ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ೬೩ ನೇ ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ೧೫ ದಿನಗಳ ಕಾಲ ವೈವಿಧ್ಯಮಯ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದ್ದು ಸಂತೋಷವಾಗಿದೆ ಎಂದು ನ್ಯಾಯವಾದಿ ಹಾಗೂ ರಂಗಕರ್ಮಿ ರವಿ ಕುಲಕರ್ಣಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ೧೫ ದಿನಗಳ ಕಾಲ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದ ೧೨ ನೇ ದಿನ **(೨೬-೧೧-೨೦೧೮) 'ದಕ್ಷ ಯಜ್ಞ'** ಪೌರಾಣಿಕ ನಾಟಕಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಬಾನಂದೂರ ಕೆಂಪಯ್ಯ, ಡಾ. ಉಮೇಶ ನಲವಡಿ, ಪ್ರೊ. ಆರ್. ಜಿ. ಅಕ್ಕಿಹಾಳ, ಶ್ರೀ ಶಂಕರ ನಾಶಿ, ಶ್ರೀ ಡಿ. ಜೆ. ಕೃಷ್ಣನ್ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಬೆಳಗಾವಿಯ ರಂಗಕರ್ಮಿ ಶಿರೀಶ ಜೋಶಿ ಇವರಿಗೆ ರಂಗಕಲಾ ಸನ್ಮಾನ ಮಾಡಲಾಯಿತು.

ಸನ್ಮಾನಿತರ ಪರವಾಗಿ ಮಾತನಾಡಿದ ಡಾ. ಬಾನಂದೂರು ಕೆಂಪಯ್ಯ, ೧೯೭೦ ರ ದಶಕದಲ್ಲಿ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರನ್ನು ನನಗೆ ಗಣ್ಯರೊಬ್ಬರು ಪರಿಚಯಿಸಿದರು. ಪಾಪುರವರು ನಾಡಿಗೆ, ದೇಶಕ್ಕೆ ನಮ್ಮಂತಹ ಕಲಾವಿದರಿಗೆ, ಲೇಖಕರಿಗೆ ಮಾರ್ಗದರ್ಶಕರಾಗಿದ್ದಾರೆ. ಅವರ ಮಾರ್ಗದರ್ಶನ ನಮಗೆ ಇನ್ನೂ ಹಲವಾರು ವರ್ಷ ಒದಗಲಿ ಎಂದ ಅವರು ಈ ಸಂಸ್ಥೆ ನಾಡಿನ ಪ್ರಾತಿನಿಧಿಕ ಸಂಸ್ಥೆಯಾಗಿದ್ದು ಡಾ. ಪಾಪುರವರು ಈ ಸಂಸ್ಥೆಗೆ ಭದ್ರ ಬುನಾದಿ ಹಾಕಿದವರು, ಇಲ್ಲಿ ನಾನು ಹಲವಾರು ಬಾರಿ ಹಾಡಿದ್ದೇನೆ. ಪಾಪುರವರ ಮುಂದೆ ಹಾಡಿದ್ದೇನೆ. ಆಗೆಲ್ಲ ನನ್ನ ಬೆನ್ನು ಚಪ್ಪರಿಸಿ ಚೆನ್ನಾಗಿ ಹಾಡುತ್ತಿಯೆಂದು ನನ್ನನ್ನು ಪ್ರೋತ್ಸಾಹಿಸಿ ಸಲಹೆ ಸೂಚನೆ ನೀಡಿದ್ದುಂಟು, ಮತ್ತು ವಚನಗಳಿಗೆ ಹಾಡಿನ ರೂಪಕೊಟ್ಟು ಹಾಡಿರಿ ಎಂದು ಹಾಡಲು ಹಚ್ಚಿ, ವಚನಗಳಿಗೆ ಒಂದು ಧ್ವನಿ ಕೊಟ್ಟವರು ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಎಂದ ಅವರು, ಸಂಘದ ಈ ಸನ್ಮಾನ ನನಗೆ ಅತ್ಯಂತ ಸಂತೋಷ ನೀಡಿದೆ ಎಂದು ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ಸನ್ಮಾನಿತ ಇನ್ನೋರ್ವ ಹಿರಿಯ ಸದಸ್ಯರಾದ ಪ್ರೊ. ಆರ್. ಜಿ. ಅಕ್ಕಿಹಾಳ ಮಾತನಾಡಿ, ೧೨೫ ವರ್ಷಗಳಿಂದ ಕನ್ನಡ ಭುವನೇಶ್ವರಿಯ ಸತತ ಸೇವೆಗೈದು, ಕನ್ನಡ ದೀಪ ಹಚ್ಚುತ್ತ, ಕನ್ನಡ ಡಿಂ ಡಿಮವ ಬಾರಿಸುತ್ತ ಬಂದ ಈ ಸಂಘವು ನಮ್ಮನ್ನು ಸನ್ಮಾನಿಸಿ ಗೌರವಿಸಿದ್ದು ನಮ್ಮ ಸೌಭಾಗ್ಯ. ಎಂದ ಅವರು ನಾವು ಕರ್ನಾಟಕದಿಂದ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಂಡು ವೃತ್ತಿಗಾಗಿ ಹೊರದೇಶಗಳಿಗೆ, ಹೊರರಾಜ್ಯಗಳಿಗೆ ಹೋದರೂ ಎಂದೂ ನಾವು ಕನ್ನಡತನವನ್ನು ಬಿಟ್ಟಿಲ್ಲ ಎಂದು ಹೇಳಿ ಸಂಘದ ಈ ಸನ್ಮಾನ ತುಂಬಾ ಸಂತಸ ತಂದಿದೆ ಎಂದು ಕೃತಜ್ಞತೆ ಸಲ್ಲಿಸಿದರು.

ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಮಾತನಾಡಿ, ಸಂಘ ಬೆಳೆಸುವಲ್ಲಿ ನಲವಡಿ ಮನೆತನದವರ ಸೇವೆ ಚಿರಸ್ಮರಣೀಯವಾಗಿದೆ. ನಲವಡಿ ಕುಟುಂಬದ ಡಾ. ಉಮೇಶ ನಲವಡಿ ಇಂದು ಸನ್ಮಾನಗೊಳ್ಳುತ್ತಿರುವುದು ನನಗೆ ಸಂತೊಷವನ್ನುಂಟು ಮಾಡಿದೆ ಎಂದರು.

ವೇದಿಕೆ ಮೇಲೆ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಗೌರವ ಉಪಾಧ್ಯಕ್ಷರಾದ ಡಾ. ಇಸಬೆಲ್ಲಾ ಝೇವಿಯರ್, ಬಿ. ಎಲ್. ಪಾಟೀಲ, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಎಸ್.ಬಿ. ಗಾಮನಗಟ್ಟಿ ಉಪಸ್ಥಿತರಿದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ನಿರ್ವಹಿಸಿದರು, ಸಹ ಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ಸನ್ಮಾನಿತರನ್ನು ಪರಿಚಯಿಸಿದರು.

ನಂತರ ಸಿದ್ಧರಾಮ ಹಿಪ್ಪರಗಿ ನಿರ್ವಹಣೆಯ, ವಿರೇಶ ಮುಠಾಣಿ ರಂಗಪಠ್ಯ ಮತ್ತು ನಿರ್ದೇಶನದ **'ದಕ್ಷ ಯಜ್ಞ'** ಪೌರಾಣಿಕ ನಾಟಕವನ್ನು 'ಗಣಕರಂಗ' ಧಾರವಾಡ ತಂಡದವರು ಸೊಗಸಾಗಿ ಪ್ರಸ್ತುತಪಡಿಸಿ ನೆರೆದ ಸಭಿಕರನ್ನು ನಗೆಗಡಲಲ್ಲಿ ತೇಲಿಸಿದರು.

೧೩. **ನಾಟಕ ಸಂಜೆ :**

ಕನ್ನಡ-ಕನ್ನಡಿಗ-ಕರ್ನಾಟಕತ್ವ ಎಂಬ ಧ್ಯೇಯದೊಂದಿಗೆ, ನಾಡು ನುಡಿಯ ಹಿರಿಮೆ, ಗರಿಮೆ ಎತ್ತಿ ಹಿಡಿಯುವಲ್ಲಿ ತನ್ನದೇ ಆದ ಕೊಡುಗೆ ನೀಡುತ್ತಾ ಕನ್ನಡ ಸಾಕ್ಷಿಪ್ರಜ್ಞೆಯಾಗಿ, ೧೨೫ ವಸಂತಗಳುದ್ದಕ್ಕೂ ತಲೆಯೆತ್ತಿ ನಿಂತ ನಮ್ಮೀ ಕರ್ನಾಟಕ ವಿದ್ಯಾವರ್ಧಕ ಸಂಘವು ಸದಾವಕಾಲ ನಾಡು-ನುಡಿಯ ಘನತೆಯನ್ನು ಎತ್ತಿ ಹಿಡಿದ ಈ ಸಂಸ್ಥೆ ನಮಗೆಲ್ಲ ವಂದನೀಯ ಭೂಮಿ, ಅಭಿನಂದನೀಯ ಭೂಮಿ, ಅರ್ಪಣೆಯ ಭೂಮಿ, ಸಮರ್ಪಣೆಯ ಭೂಮಿ ಇಂಥ ಸಂಘದ ಚುಕ್ಕಾಣಿ ಹಿಡಿದವರು ಸಂತ ಸದೃಶ ಶತಾಯುಷಿ. ಸಂತನೆಂದರೆ ಯಾರು ? ದಿವ್ಯತೆಯ ಅರಿತವರು, ಸರಳತೆಯ ಸೂತ್ರದಲಿ ಸುಖವ ಕಂಡವರು, ಮಮತೆ ಬಂಧನ ಕಳಚಿ ಬಹುದೂರ ನಿಂತವರು, ಅವರೇ ನಮ್ಮ ಹಿರಿಯ ಚೇತನ, ಅನಿಕೇತನರಾದ ಡಾ. ಪಾಟೀಲ ಪುಟ್ಟಪ್ಪನವರು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಗೌರವ ಉಪಾಧ್ಯಕ್ಷರಾದ ಶ್ರೀ ಬಿ. ಎಲ್. ಪಾಟೀಲ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ೧೫ ದಿನಗಳ ಕಾಲ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದ ೧೩ನೇ ದಿನ **(೨೮-೧೧-೨೦೧೮) 'ನೀ ಹೆಂಗಂತಿ ಹಂಗ'** ಹಾಸ್ಯ ನಾಟಕಕ್ಕೆ ಚಾಲನೆ ನೀಡಿ ಮುಂದುವರೆದು ಮಾತನಾಡಿದ ಶ್ರೀ ಬಿ. ಎಲ್. ಪಾಟೀಲರು, ಕನ್ನಡ ವಿಷಯಕ್ಕೆ ಬಂದರೆ ನಾಡೋಜ ಡಾ. ಪಾಪುರವರು, ಕುವೆಂಪುರವರ ಭಾಷೆಯಲ್ಲಿ ಹೇಳುವುದಾದರೆ, ಕನ್ನಡದ ವಿಷಯದಲ್ಲಿ ನಾನು ಟ್ಯಾಂಕಿನಂತೆ ಮುನ್ನುಗ್ಗುತ್ತೇನೆ. ನೀವು ದಾರಿ ಬಿಟ್ಟಿರೋ ಸರಿ, ಇಲ್ಲವೇ ಅಪ್ಪಚ್ಚಿಯಾಗಿ ಹೋಗುತ್ತೀರಿ. ಹಾಗೆ ಕನ್ನಡದ ಈ ಭೀಷ್ಮರ ನಾಡು, ನುಡಿಯ, ಅಭಿಮಾನದ ಕೆಚ್ಚಿನಲ್ಲಿ ಕೊಚ್ಚಿ ಹೋದವರಲ್ಲಿ ಅದೆಷ್ಟೋ ಜನ ಅಧಿಕಾರಿಗಳಿರಬಹುದು, ರಾಜಕಾರಣಿಗಳಿರಬಹುದು, ಸಭಾಪತಿಗಳು, ಮುಖ್ಯಮಂತ್ರಿಗಳು ಯಾರೇ ಇರಲಿ, ಕನ್ನಡದ ಪ್ರಶ್ನೆ ಬಂದಾಗ ಎಂದೂ ಸಂಧಾನವಿಲ್ಲ, ರಾಜಿ ಇಲ್ಲ. ನಮ್ಮಿಂದ ಬಿಟ್ಟುಹೋದ ಕರವೀರ, ಸೊಲ್ಲಾಪುರಗಳಲ್ಲದೇ, ಕೇರಳ, ತಮಿಳುನಾಡುಗಳಲ್ಲಿ ಉಳಿದ ನಮ್ಮ ಪ್ರದೇಶಗಳ ಬಗ್ಗೆ ಹಗಲಿರುಳು ಮಿಡಿಯುವ ಕನ್ನಡದ ಈ ಮೇರುಗಿರಿ ನಿಜಕ್ಕೂ ರಾಜೇಶ್ವರಿಯ ವರಪುತ್ರ. ಇವರ ಪ್ರಬಲ ಇಚ್ಛಾಶಕ್ತಿ, ನೂರು ದಾಟಿದರೂ ನೆನಪಿನ ಸಾಗರವನ್ನೇ ಹೊಂದಿದ ಅವರ ಅಪಾರ ಜ್ಞಾಪಕಶಕ್ತಿ, ದೇಶವಿದೇಶಗಳಲ್ಲಿ ಇಂದಿಗೂ ಜೀವಂತವಾಗಿರುವ ಅವರ ಉನ್ನತ ಮಟ್ಟದ ಸಂಬಂಧಗಳು ಎಂಥವರನ್ನೂ ದಿಗಿಲುಗೊಳಿಸುತ್ತವೆ, ಇಂಥವರನ್ನು ಕಂಡೇ ಕವಿ "ಯುಗವೇ ಯುಗಪುರುಷನಾದ ಐತಿಹಾಸಿಕ ಘಳಿಗೆಯಿದು" ಎಂದು ಉದ್ಗಾರ ತೆಗೆದಿರಲು ಸಾಕು. ಇಂಥ ಡಾ. ಪಾಪುರವರ ನೇತೃತ್ವದಲ್ಲಿ ಕ.ವಿ.ವ. ಸಂಘವು ಉತ್ತರೋತ್ತರವಾಗಿ ಬೆಳೆಯುತ್ತಿದೆ ಎಂದ ಅವರು, ಇಂದು ಪ್ರದರ್ಶಗೊಳ್ಳುವ 'ನೀ ಹೆಂಗಂತಿ ಹಂಗ' ನಾಟಕ ನಮ್ಮ ದಿನನಿತ್ಯದ ಜೀವನವನ್ನು ಪ್ರತಿಫಲಿಸುವ ನಾಟಕ. ಬಹಳಷ್ಟು ನಿತ್ಯಜೀವನದ ಸಮಸ್ಯೆಗಳಿಗೆ 'ನೀ ಹೆಂಗಂತಿ ಹಂಗ' ಅನ್ನುವಲ್ಲಿ ಪರಿಹಾರ ಕಂಡುಕೊಳ್ಳಬಹುದೆಂದು ತಮ್ಮ ಅಭಿಪ್ರಾಯವ್ಯಕ್ತಪಡಿಸುತ್ತಾ, ಸಂತೋಷದಿಂದ ಈ ನಾಟಕಕ್ಕೆ ಚಾಲನೆ ನೀಡಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಶ್ರೀ ಬಿ. ಎಂ. ಅಮರಣ್ಣವರ, ಶ್ರೀ ಎಸ್. ಬಿ. ಮತ್ತೂರ, ಶ್ರೀ ಎಸ್. ಟಿ. ಅಂಬೋರೆ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಕಿತ್ತೂರಿನ ರಂಗಕರ್ಮಿ ಶಶಿಧರ ಮರಕುಂಬಿ ಇವರಿಗೆ ರಂಗಕಲಾ ಸನ್ಮಾನ ಮಾಡಲಾಯಿತು.

ಸನ್ಮಾನಿತರ ಪರವಾಗಿ ಹಿರಿಯ ಸದಸ್ಯರಾದ ಶ್ರೀ ಬಿ. ಎಂ. ಅಮರಣ್ಣವರ ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘವು ೧೫ ದಿನಗಳ ಕಾಲ ರಾಜ್ಯೋತ್ಸವದ ಅಂಗವಾಗಿ ಹಲವಾರು ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರ ಜೊತೆಗೆ ಹಿರಿಯ ಸದಸ್ಯರನ್ನು ಸನ್ಮಾನಿಸುತ್ತಿರುವುದು ಒಂದು ಸತ್ ಸಂಪ್ರದಾಯ, ಸಂಘದ ಈ ಸನ್ಮಾನ ನನಗೆ ಅತ್ಯಂತ ಸಂತೋಷ ನೀಡಿದೆ ಎಂದು ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ರಂಗಕಲಾ ಸನ್ಮಾನ ಸ್ವೀಕರಿಸಿದ ಕಿತ್ತೂರಿನ ರಂಗಕರ್ಮಿ ಶಶಿಧರ ಮರಕುಂಬಿ ಮಾತನಾಡಿ, ಸಂಘದ ಈ ಸನ್ಮಾನ ನನಗೆ ಬಯಸದೇ ಬಂದ ಭಾಗ್ಯ, ಇದರಿಂದ ನನಗೆ ತುಂಬಾ ಸಂತಸವಾಗಿದೆ ಎಂದು ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ವೇದಿಕೆ ಮೇಲೆ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಗೌರವ ಉಪಾಧ್ಯಕ್ಷರಾದ ಡಾ. ಇಸಬೆಲ್ಲಾ ಝೇವಿಯರ್, ಉಪಸ್ಥಿತರಿದ್ದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ಸ್ವಾಗತಿಸಿದರು. ಶಾಂತೇಶ ಗಾಮನಗಟ್ಟಿ ನಿರ್ವಹಿಸಿದರು, ಶಿವಾನಂದ ಭಾವಿಕಟ್ಟಿ ವಂದಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಸನ್ಮಾನಿತರನ್ನು ಪರಿಚಯಿಸಿದರು. ಪ್ರಾರಂಭದಲ್ಲಿ ಬಸಲಿಂಗಯ್ಯ ಹಿರೇಮಠ ನಾಡಿಗೀತೆ ಹಾಗೂ ಕು. ಅತ್ರಿ ಹುಣಸಿಮರದ ಕನ್ನಡ ಗೀತೆ ಹಾಡಿದರು.

ನಂತರ ಜೋಸೆಫ್ ಮಲ್ಲಾಡಿ ರಚನೆ, ನಿರ್ದೇಶನದ **'ನೀ ಹೆಂಗಂತಿ ಹಂಗ'** ಹಾಸ್ಯ ನಾಟಕವನ್ನು ಜೋಗುಳದೀಪ ಸಾಂಸ್ಕೃತಿಕ ಸಂಘ, ತುಮರಿಕೊಪ್ಪ ತಂಡದವರು ಸೊಗಸಾಗಿ ಪ್ರಸ್ತುತಪಡಿಸಿ ನೆರೆದ ಸಭಿಕರನ್ನು ನಗೆಗಡಲಲ್ಲಿ ತೇಲಿಸಿದರು.

೧೪. **'ಪ್ರತಿಷ್ಠಿತ ಪ್ರಶಸ್ತಿ ಪುರಸ್ಕೃತರಿಗೆ ಗೌರವ ಸನ್ಮಾನ ಹಾಗೂ ನಾಟಕ ಸಂಜೆ :**

ಪೂಜ್ಯ ಮಹಾತ್ಮಾ ಗಾಂಧೀಜಿಯವರನ್ನು ನಾನು ಭೆಟ್ಟಿಯಾದ ಕ್ಷಣಗಳು ನನ್ನ ಜೀವನದ ಮಹತ್ವದ ಕ್ಷಣಗಳು. ಪೂಜ್ಯ ಮಹಾತ್ಮಾ ಗಾಂಧೀಜಿಯವರು ಮಾತೃಸ್ವಭಾವದವರು. ಬಾಲಕನಾಗಿದ್ದ ನನಗೆ ಭೆಟ್ಟಿಗೆ ಅವಕಾಶ ನೀಡಿ, ನನ್ನೊಡನೆ ಮಾತನಾಡಿ, ನನ್ನ ಬೆನ್ನನ್ನು ಸವರಿ, ತಟ್ಟಿ ಪ್ರೇರೆಪಣೆಯ ಮಾತನಾಡಿದ ಸಂದರ್ಭ ನನ್ನ ಮನಸಿನಲ್ಲಿ ಇಂದಿಗೂ ಹಚ್ಚಹಸಿರಾಗಿ ಉಳಿದದೆ. ಪೂಜ್ಯ ಮಹಾತ್ಮಾ ಗಾಂಧೀಜಿಯವರು ನಿನ್ನ ಜೀವನದುದ್ದಕ್ಕೂ ಸಾಧ್ಯವಿದ್ದಷ್ಟು ಒಳ್ಳೆಯ ಕೆಲಸ ಮಾಡು, ದೇಶಸೇವೆ ಮಾಡು, ಧೀನದುರ್ಬಲರ ಬೆನ್ನಿಗೆ ನಿಲ್ಲು ಮತ್ತು ಜನತಗೆ ಉಪಯೋಗವಾಗುವ ಸಾಮಾಜಿಕ ಕಾರ್ಯಗಳನ್ನು ಅಂಜದೇ ಅಳುಕದೆ ಮಾಡುತ್ತಾ ಹೋಗು ಎಂದು ನನಗೆ ಉಪದೇಶಿಸಿದಂತೆ ನಾನು ಇಂದಿಗೂ ಕೂಡ ನನ್ನ ಕೈಲಾದಷ್ಟು ಈ ಕಾರ್ಯಗಳನ್ನು ಮಹಾತ್ಮಾ ಗಾಂಧೀಜಿಯವರ ಅಣತೆಯಂತೆ ಮಾಡುತ್ತಾ ಬಂದಿದ್ದೇನೆ. ಇದೇ

ಕಾರಣಕ್ಕೆ ನಾನು ಕನ್ನಡ ನಾಡಿಗೆ ಏನನ್ನಾದರೂ ವಿಶೇಷವಾದದ್ದನ್ನು ಮಾಡಬೇಕೆಂಬ ಹೆಬ್ಬಯಕೆಯಿಂದ, ನಾನು ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಿದ್ದಾಗ, ಇಡೀ ರಾಜ್ಯವನ್ನು ಐದು ಬಾರಿ ಸುತ್ತಿ, ಕನ್ನಡಿಗರ ಸಮಸ್ಯೆಗಳನ್ನು ಸರಕಾರದ ಮುಂದೆ ಇಟ್ಟಿರುತ್ತೇನೆ, ಈಗಲೂ ನಾನು ಕನ್ನಡ ನಾಡು-ನುಡಿ-ನೆಲ-ಜಲ-ಗಡಿಗಳಿಗಾಗಿ ಅವಿರತವಾಗಿ ನನ್ನ ಹೋರಾಟವನ್ನು ಮುಂದುವರೆಸಿಕೊಂಡು ಹೋಗಲು ಸಿದ್ಧನಿದ್ದೇನೆ ಎಂದು ನಾಡೋಜ ಡಾ. ಪಾಟೀಲ ಪುಟ್ಟಪ್ಪ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ೧೫ ದಿನಗಳ ಕಾಲ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದ ೧೪ ನೇ ದಿನ **(೨೯-೧೧-೨೦೧೮)** 'ಪ್ರತಿಷ್ಠಿತ ಪ್ರಶಸ್ತಿ ಪುರಸ್ಕೃತರಿಗೆ ಹಾಗೂ ಹಿರಿಯ ಸದಸ್ಯರಿಗೆ ಗೌರವ ಸನ್ಮಾನ' ಮತ್ತು ನಾಟಕ ಸಂಜೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ನಾಡು-ನುಡಿಯ ಸೇವೆಗಾಗಿ ಯುವಜನರು ಇನ್ನೂ ಹೆಚ್ಚಿನ ಸೇವೆ ಮಾಡಲು ಸನ್ನದ್ದರಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಂಘದ ಸದಸ್ಯರಾದ ಡಾ. ರಾಜನ್ ದೇಶಪಾಂಡೆ, ಡಾ. ಬಿ. ಸಿ. ರಾಯ್ ಪ್ರಶಸ್ತಿ ಪುರಸ್ಕೃತರು, ಡಾ. ಆದಿತ್ಯ ಆನಂದ ಪಾಂಡುರಂಗಿ, ಡಾ. ಎಸ್.ಎಸ್. ಜಯರಾಮ ಪ್ರಶಸ್ತಿ ಪುರಸ್ಕೃತರು, ಶ್ರೀ ಮಧು ದೇಸಾಯಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತರು, ಶ್ರೀ ಬಸವರಾಜ ಬೆಂಗೇರಿ, ಶಿವಕುಮಾರ ಶ್ರೀ ಪ್ರಶಸ್ತಿ ಪುರಸ್ಕೃತರು ಇವರಿಗೆ ಪ್ರತಿಷ್ಠಿತ ಪ್ರಶಸ್ತಿ ಪುರಸ್ಕೃತರು ಎಂದು ಗೌರವ ಸನ್ಮಾನ ಮಾಡಲಾಯಿತು.

ಪ್ರತಿಷ್ಠಿತ ಪ್ರಶಸ್ತಿ ಪುರಸ್ಕೃತರು ಸನ್ಮಾನ ಸ್ವೀಕರಿಸಿ ಪ್ರತಿಕ್ರಿಯಿಸಿ ಮಾತನಾಡಿದ ಖ್ಯಾತ ಮಕ್ಕಳ ತಜ್ಞರಾದ ಡಾ. ರಾಜನ್ ದೇಶಪಾಂಡೆ, ನಮ್ಮೂರಿನಿಂದ ಹಿಡಿದು ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಭೆ, ಸಮಾರಂಭಗಳಲ್ಲಿ ನನ್ನನ್ನು ಸನ್ಮಾನಿಸಲಾಗಿದೆ. ನಾಡೋಡ ಡಾ. ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ನಾಡಿಯ ಹಿರಿಯ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಇಂದು ನನಗೆ ಮಾಡಿದ ಸನ್ಮಾನವು ನನ್ನ ಜೀವನದ ಸರ್ವಶ್ರೇಷ್ಠ ಸನ್ಮಾನವಾಗಿದೆ, ಇದು ನನ್ನ ಸೌಭಾಗ್ಯ ಎಂದರು. ಮುಂದುವರೆದು ಮಾತನಾಡಿದ ಡಾ. ರಾಜನ್ ದೇಶಪಾಂಡೆ, ನಾನು ಕೇವಲ ಸಾಮಾಜಿಕ ಕಳಕಳಿ ಉಳ್ಳ ವ್ಯಕ್ತಿಯಾಗಿದ್ದೇನೆ, ನನ್ನ ಬಳಿ ಇರುವುದನ್ನು ಇಲ್ಲದವರ ಸೇವೆಗಾಗಿ ಸದುಪಯೋಗ ಮಾಡುತ್ತಾ ಬಂದಿರುತ್ತೇನೆ, ನನ್ನ ವೃತ್ತಿಯ ಜೊತೆಗೆ ಇಂತಹ ಸಾಮಾಜಿಕ ಕಳಕಳಿಯಿಂದ ನಾನು ಮಾಡಿದ ಸೇವೆಯನ್ನು ಗುರುತಿಸಿ ಸಾಮಾಜಿಕ ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿದವರು ಎಂದು ಗುರುತಿಸಿ ಭಾರತ ಸರಕಾರ ನನಗೆ ಡಾ. ಬಿ. ಸಿ. ರಾಯ್ ಪ್ರಶಸ್ತಿ ನೀಡಿದ್ದು ಕೂಡ ನನಗೆ ಅತ್ಯಂತ ಸಂತೋಷ ಉಂಟುಮಾಡಿದೆ, ಎಲ್ಲ ಸನ್ಮಾನಿತರ ಪರವಾಗಿ ನಾನು ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಕೃತಜ್ಞತೆಯನ್ನು ಅತ್ಯಂತ ಗೌರವದಿಂದ ಸಮರ್ಪಣೆ ಮಾಡಿದ್ದೇನೆ ಎಂದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಪ್ರೊ. ವಿಜಯಕುಮಾರ ಗಿಡ್ನವರ, ಶ್ರೀ ರಾಮಚಂದ್ರ ಪಾಟೀಲ, ಡಾ. ಶಿವಾನಂದ ಗುಬ್ಬಣ್ಣವರ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಾಗೂ ಧಾರವಾಡದ ರಂಗಕರ್ಮಿ ಜನಮೆಚ್ಚಿದ ಶಿಕ್ಷಕ ಶ್ರೀ ಹನುಮಂತಪ್ಪ ತಳವಾರ ಇವರಿಗೆ ರಂಗಕಲಾ ಸನ್ಮಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿಗಳಾದ ಆರ್. ಎಸ್. ಚಂದನಗೌಡರ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಸನ್ಮಾನಿತರ ಪರವಾಗಿ ಹಿರಿಯ ಸದಸ್ಯರಾದ ಪ್ರೊ. ವಿಜಯಕುಮಾರ ಗಿಡ್ನವರ ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡಿದ ನನ್ನನ್ನು ರೈತರು ಸನ್ಮಾನಿಸುತ್ತಾ ಬಂದಿರುತ್ತಾರೆ, ಇಂದು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಪವಿತ್ರ ಕರಗಳಿಂದ, ಸಾಹಿತಿಗಳ, ಕಲಾವಿದರ ಸಮ್ಮುಖದಲ್ಲಿ ನಾನು ಸನ್ಮಾನಗೊಂಡಿರುವುದು ನನ್ನ ಜೀವನದ ಪವಿತ್ರ ಕ್ಷಣ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘದ ಈ ಹೊಸ ತಂಡ ಅತ್ಯಂತ ಸಮರ್ಪಕ ರೀತಿಯಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದು ನನಗೆ ತುಂಬಾ ಸಂತೋಷ ನೀಡಿದೆ ಎಂದರು.

ರಂಗಕಲಾ ಸನ್ಮಾನ ಸ್ವೀಕರಿಸಿದ ಶ್ರೀ ಹನುಮಂತಪ್ಪ ತಳವಾರ ಮಾತನಾಡಿ, ನನ್ನ ಪಾಡಿಗೆ ನಾನು ರಂಗಭೂಮಿಯಲ್ಲಿ ಶ್ರದ್ಧೆಯಿಂದ ಕಾರ್ಯನಿರ್ವಹಿಸುತ್ತಾ ಬಂದಿದ್ದೇನೆ, ಎಲೆಯಮರೆಯ ಕಾಯಿಯಂತಿದ್ದ ನನ್ನ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ವಿದ್ಯಾವರ್ಧಕ ಸಂಘವು ನನ್ನನ್ನು ಸನ್ಮಾನಿಸಿದ್ದರಿಂದ ನಾನು ಅತ್ಯಂತ ಪುಳುಕಿತನಾಗಿದ್ದೇನೆ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘದ ಈ ಕಾರ್ಯ ಶ್ಲಾಘನೀಯ ಎಂದರು.

ವೇದಿಕೆ ಮೆಲೆ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ) ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಗೌರವ ಉಪಾಧ್ಯಕ್ಷರಾದ ಬಿ.ಎಲ್. ಪಾಟೀಲ, ಸೇತುರಾಮ ಹುನಗುಂದ, ಡಾ. ಇಸಬೆಲ್ಲಾ ಝೇವಿಯರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ಉಪಸ್ಥಿತರಿದ್ದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಮನೋಜ ಪಾಟೀಲ ಸ್ವಾಗತಿಸಿದರು. ಶ್ರೀಮತಿ ಪ್ರಫುಲ್ಲಾ ನಾಯಕ ನಿರ್ವಹಿಸಿದರು, ಶಿವಾನಂದ ಭಾವಿಕಟ್ಟಿ ವಂದಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಶಾಂತೇಶ ಗಾಮನಗಟ್ಟಿ ಸನ್ಮಾನಿತರನ್ನು ಪರಿಚಯಿಸಿದರು. ಪ್ರಾರಂಭದಲ್ಲಿ ಸುವರ್ಣ ಸುರಕೋಡ ನಾಡಿಗೀತೆ ಹಾಡಿದರು.

ನಂತರ ಎಚ್. ಬಿ. ಪರೀಟ್ ರಚನೆ, ಹೆಲನ್ ಮೈಸೂರು ನಿರ್ದೇಶನದ **'ಮರಾಠಿ ಹೆಂಡತಿ'** ಹಾಸ್ಯ ನಾಟಕವನ್ನು ಬೆಂಗಳೂರಿನ ರಂಗಬದುಕು ಟ್ರಸ್ಟ್ ತಂಡದವರು ಸೊಗಸಾಗಿ ಪ್ರಸ್ತುತಪಡಿಸಿ ನೆರೆದ ಸಭೀಕರನ್ನು ನಗೆಗಡಲಲ್ಲಿ ತೇಲಿಸಿದರು.

೧೫. **ಸಮಾರೋಪ ಸಮಾರಂಭ : ೧೫ ದಿನಗಳ ಸಾಂಸ್ಕೃತಿಕ ಉತ್ಸವಕ್ಕೆ ತೆರೆ**

'ನಾನು ಮೊದಲು ಕನ್ನಡಿಗ, ನಂತರ ಪೊಲೀಸ್ ಅಧಿಕಾರಿ' ಎಂದು ರೇಲ್ವೆ ಇಲಾಖೆಯ ಮೇಲಾಧಿಕಾರಿಗಳಿಗೆ ನಾನು ರೇಲ್ವೆ ಪೊಲೀಸ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ದಿಟ್ಟತನದಿಂದ ಹೇಳಿದ್ದೆ ಎಂದು ಈಗಲೂ ನಾನು ಎದೆತಟ್ಟಿ ಹೇಳುತ್ತೇನೆ ಮತ್ತು ಈ ಪ್ರಜ್ಞೆ ಕನ್ನಡ ನಾಡಿನ ಪ್ರತಿಯೊಬ್ಬ ಸರಕಾರಿ ನೌಕರರಿಗೆ ಬರಬೇಕು ಎಂದು ನಿವೃತ್ತ ಡಿ.ವಾಯ್.ಎಸ್.ಪಿ. ಹಾಗೂ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದ ಟ್ರಸ್ಟ್ ಕಮಿಟಿಯ ಚೇರಮನ್ನರಾದ ಶ್ರೀ ಡಿ. ಡಿ. ಮಾಳಗಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ೬೩ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ೧೫ ದಿನಗಳ ಕಾಲ ಆಯೋಜಿಸಿರುವ ವೈವಿಧ್ಯಮಯ ಕಾರ್ಯಕ್ರಮಗಳ **(೩೦-೧೧-೨೦೧೮)** ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಶ್ರೀಯುತ ಡಿ. ಡಿ. ಮಾಳಗಿಯವರು, ಹುಬ್ಬಳ್ಳಿಯಲ್ಲಿ ನಾನು ರೇಲ್ವೆ ಪೊಲೀಸ್ ಅಧಿಕಾರಿಯಾಗಿ ಕೆಲಸ ನಿರ್ವಹಿಸುವ ಕಾಲದಲ್ಲಿ, ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಹುಬ್ಬಳ್ಳಿಯಲ್ಲಿ ರೇಲ್ವೆ ವಲಯ ಸ್ಥಾಪನೆಯಾಗಬೇಕೆಂಬ ಹೋರಾಟದ ಭಾಗವಾಗಿ ಹುಬ್ಬಳ್ಳಿಯ ರೈಲು ನಿಲ್ದಾಣದಲ್ಲಿ ಸುಧೀರ್ಘಾವದಿಗೆ ರೈಲು ರೋಖೋ ಕಾರ್ಯಕ್ರಮ ಮಾಡಿದ್ದರು, ರೇಲ್ವೆ ಇಲಾಖೆಯವರು ರೈಲು ರೋಖೊ ನಡೆಸುತ್ತಿದ್ದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಮತ್ತು ಇತರ ಹೋರಾಟಗಾರರನ್ನು ಬಂಧಿಸಬೇಕೆಂದು ರೇಲ್ವೆ ಇಲಾಖೆ ನನಗೆ ಆದೇಶ ನೀಡಿದಾಗ, ವಿಧಿಯಲ್ಲದೆ ನಾನು ನನ್ನ ಕರ್ತವ್ಯ ಮಾಡುವ ಪ್ರಸಂಗ ಬಂದಾಗ, ನಾನು ನಾಡೋಜ ಡಾ. ಪಾಟೀಲ ಪುಟ್ಟಪ್ಪನವರನ್ನು ಬಂಧಿಸುವ ಸಂದರ್ಭದಲ್ಲಿ, ಅವರ ಚರಣಕಮಲಗಳಿಗೆ ವಂದಿಸಿ ನಾನು ನನ್ನ ಕರ್ತವ್ಯ ತಮ್ಮ ಬಂಧಿಸಿ ಮಾಡಬೇಕಿದೆ ಎಂದು ಹೇಳಿ, ಅವರನ್ನು ಬಂಧಿಸಲು ಮುಂದಾದಾಗ ನಾಡೋಜ ಡಾ. ಪಾಟೀಲ ಪುಟ್ಟಪ್ಪ ನೀವು ನನ್ನನ್ನು ಬಂಧಿಸಿದರೆ ಅದು ಯಾವುದೇ ಪರಿಣಾಮ ಬೀರದು, ನಾನು ನನ್ನ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ, ನಾನು ನನ್ನ ಕರ್ತವ್ಯ ಮಾಡುತ್ತೇನೆ, ನೀವು ನಿಮ್ಮ ಕರ್ತವ್ಯ ಮಾಡಿ ಎಂದು ಹೇಳುತ್ತಿದ್ದಂತೆ, ರೇಲ್ವೆ ಇಲಾಖೆಯ ಉನ್ನತ ಅಧಿಕಾರಿಯು ಮಿಸ್ಟರ್ ಮಾಳಗಿ ನೀವೊಬ್ಬ ಪೊಲೀಸ್ ಅಧಿಕಾರಿ, ಮೇಲೆ ಸಮವಸ್ತ್ರಧಾರಿ, ಅಂತಹದರಲ್ಲಿ ಇವರ ಪಾದವನ್ನು ಮುಟ್ಟಿ ನಮಸ್ಕರಿಸಿದ್ದು ಏಕೆ ಎಂದು ನನಗೆ ಪ್ರಶ್ನಿಸಿದಾಗ, ನಾನು ಮೊದಲು ಕನ್ನಡಿಗ, ಕನ್ನಡಿಗನ ಆದ್ಯ ಕರ್ತವ್ಯ ನಾನು ಮಾಡಿದ್ದೇನೆ, ನಂತರ ನಾನು ಪೊಲೀಸ್ ಅಧಿಕಾರಿ, ನಾನು ಬಂಧಿಸುವ ವ್ಯಕ್ತಿ ಸಾಮಾನ್ಯರಲ್ಲ, ಅವರು ಈ ನಾಡಿನ ಬಹುದೊಡ್ಡ ಆಸ್ತಿ, ಅವರೊಬ್ಬ ಬರೀ ವ್ಯಕ್ತಿಯಲ್ಲ ಕನ್ನಡದ ಶಕ್ತಿ ಎಂದು ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಬಗ್ಗೆ ತಲೆಯೆತ್ತಿ ಗೌರವದಿಂದ ಹೇಳಿದ್ದೇನೆ, ಈ ಮನೋಭಾವನೆ ನಮ್ಮ ನಾಡಿನ ಎಲ್ಲ ಸರಕಾರಿ ನೌಕರರಲ್ಲಿ ಬಂದಾಗ ನಮ್ಮ ನಾಡಿಗೆ ಅತ್ಯಂತ ಗೌರವ ಸಿಗುತ್ತದೆ, ಭಾಷಾವಾರು ಪ್ರಾಂತ ರಚನೆ ಮಾಡುವಂತೆ ಕೇಂದ್ರ ಸರಕಾರ ಆಯೋಗ ರಚನೆ ಮಾಡುವಂತೆ ಮಾಡಿದ್ದು ಈ ನಾಡಿನಲ್ಲಿ ಕನ್ನಡ ನಾಡು ಸ್ಥಾಪನೆಗಾಗಿ ನಡೆಸಿದ ಹೋರಾಟ ಕಾರಣ, ಈ ಶ್ರೇಯಸ್ಸು ಅದರಗುಂಚಿ ಶಂಕರಗೌಡರಿಗೆ, ಜ್ಞಾನದೇವ ದೊಡ್ಡಮೇಟಿಯವರಿಗೆ ಹಾಗೂ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರಿಗೆ ಸಲ್ಲುತ್ತದೆ, ಇಂದಿಗೂ ಈ ಹಿರಿಯರ ಆಶೆಯದಂತೆ ಅಖಂಡ ಕರ್ನಾಟಕ ರಚನೆಯಾಗಿಲ್ಲ ಮತ್ತು ಕರ್ನಾಟಕಕ್ಕೆ ದೊಡ್ಡ ಅನ್ಯಾಯವಾಗಿದೆ ಎಂಬ ನೋವು ನಮ್ಮ ಜನರಿಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜುಡೋ ಮತ್ತು ಕುರಾಶ ಕ್ರೀಡೆಯಲ್ಲಿ ಅಂತರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದ ಕ್ರೀಡಾಪಟು ಕುಮಾರಿ ಮಲಪ್ರಭಾ ವಾಯ್. ಜಾಧವ ಮತ್ತು ಅವಳ ತರಬೇತುದಾರರಾದ ಏಕಲವ್ಯ ಮತ್ತು ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತರೂ ಆದ, ಭಾರತೀಯ ಜುಡೋ ಮತ್ತು ಕುರಾಶ ತಂಡದ ತರಬೇತುದಾರರಾದ ಶ್ರೀಮತಿ ತ್ರಿವೇಣಿ ಎಂ. ಎನ್. ಇವರನ್ನು ಮಹಾನ್ ಸಾಧಕರು ಎಂದು ಸನ್ಮಾನಿಸಿ ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಪ್ರತಿಕ್ರಿಯಸಿ ತರಬೇತಿದಾರರಾದ ಶ್ರೀಮತಿ ತ್ರಿವೇಣಿ ಎಂ. ಎನ್. ಮಾತನಾಡಿ, ಗುರು ತನ್ನ ಶಿಷ್ಯರನ್ನು ಕಠಿಣ ಪರಿಶ್ರಮ ವಹಿಸಿ ತಿದ್ದಿತೀಡಿ ಸಾಧನೆಯ ದಾರಿಗೆ ತಂದಿರುತ್ತಾರೆ, ಇಂತಹ ಗುರುವನ್ನು ಗುರುತಿಸುವ ಕೆಲಸ ಸಮಾಜದಲ್ಲಿ ನಡೆಯದೇ ಇರುವುದು ವಿಷಾದನೀಯ ಸಂಗತಿ, ಕರ್ನಾಟಕ ವಿದ್ಯಾವರ್ಧಕ ಸಂಘದವರು ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕು. ಮಲಪ್ರಭಾ ವಾಯ್. ಜಾಧವ ಇವಳ ತರಬೇತಿದಾರಳಾದ ನನ್ನನ್ನು ಗುರುತಿಸಿ ಆ ಮಹಾನ್ ಸಾಧಕಿಯ ಜೊತೆಗೆ ನನ್ನನ್ನೂ ಗುರುಸಿದ್ದು ನಮ್ಮಿಬ್ಬರಿಗೂ ಅತ್ಯಂತ ಸಂತೊಷ ತಂದಿದೆ, ಕರ್ನಾಟಕ ವಿದ್ಯಾವರ್ಧಕ ಸಂಘದ ಈ ಕಾರ್ಯ ಮಾದರಿಯ ಕಾರ್ಯವಾಗಿದೆ, ಇಲ್ಲಿಂದ ಗುರುಶಿಷ್ಯರಾದ ನಾವು ಹೊಸ ಸ್ಫೂರ್ತಿ ಮತ್ತು ಹುಮ್ಮಸಿನಿಂದ ಹೋಗುತ್ತಿದ್ದೇವೆ, ಮತ್ತೆ ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಿ ನಿಮ್ಮ ಸನ್ಮಾನದ ಋಣ ತೀರಿಸುತ್ತೇವೆ, ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಬಗ್ಗೆ ಓದಿದ್ದೆ, ಇಂದು ಅವರ ಪಕ್ಕಕ್ಕೆ ಕುಳಿತು ಅವರ ದರ್ಶನ ಪಡೆದ ನಾನು ಮತ್ತು ಮಲಪ್ರಭಾ ಜಾಧವ ಸೌಭಾಗ್ಯವಂತರು, ಆ ಹಿರಿಯರ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ ಆಗ ನಾವು ಇನ್ನೂ ಹೆಚ್ಚಿನ ಸಾಧನೆ ಮಾಡಲು ಸಾಧ್ಯ ಎಂದರು.

ಕರ್ನಾಟಕ ಏಕೀರಣದ ಹೋರಾಟಗಾರ ಅದರಗುಂಚಿ ಶಂಕರಗೌಡರ ಕರ್ಮಭೂಮಿ ಹುಬ್ಬಳ್ಳಿ, ಅದರಗುಂಚಿ ಶಂಕರಗೌಡರು ಮಾಡಿದ ಹೋರಾಟ ಚಿರಸ್ಮರಣಿಯ. ಅದೇ ರೀತಿ ಕರ್ನಾಟಕ ಏಕೀಕರಣದ ಹೋರಾಟಗಾರ ಜ್ಞಾನದೇವ ದೊಡ್ಡಮೇಟಿ ಕರ್ನಾಟಕ ಏಕೀಕರಣಕ್ಕಾಗಿ ಮುಂಬಯಿ ಸರಕಾರದಲ್ಲಿದ್ದ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಈ ಚಳುವಳಿಗೆ ಧುಮುಕಿದ ಮಹಾನ್ ಚೇತನ, ಇವರಿಬ್ಬರ ಮೂರ್ತಿಗಳು ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಗಬೇಕು, ಅಂದಾಗ ಈ ಚಳುವಳಿಗೆ ನ್ಯಾಯ ಸಿಕ್ಕಂತಾಗುತ್ತದೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಹೇಳಿದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಡಾ. ಬಾಳಣ್ಣ ಶೀಗೀಹಳ್ಳಿ, ಶ್ರೀ ವಾಯ್. ಪಿ. ಮದ್ನೂರ, ಪ್ರೊ. ಸಿ. ವೀರಬಸಣ್ಣ, ಡಾ. ವಿ. ಶಾರದಾ, ಪ್ರೊ. ಕೆ. ಎ. ಸಿದ್ಧಾಂತಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸನ್ಮಾನಿತರ ಪರವಾಗಿ ಹಿರಿಯ ಸದಸ್ಯರಾದ ಡಾ. ಬಾಳಣ್ಣ ಶೀಗೀಹಳ್ಳಿ ಮಾತನಾಡಿ, ನನಗೆ ಇಂದು ಸಂಘದ ಸನ್ಮಾನ ಸ್ವೀಕರಿಸುವ ಸೌಭಾಗ್ಯ ದೊರೆತಿದ್ದು ನನ್ನ ಜೀವನದಲ್ಲಿ ಇದೊಂದು ಚರಿತ್ರಾರ್ಹ ಘಳಿಗೆ ಎಂದು ಬಾವಿಸಿದ್ದೇನೆ. ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಒಂದು ಇಮಾರತಿ ಅಥವಾ ಒಂದು ಬೌದ್ಧಿಕವಾದ ಕಟ್ಟಡ ಇದೆ ಅನ್ನುವುದರ ಜೊತೆಗೆ ಇದರ ಒಳಗಡೆ ನಿರಂತರ  ನಡೆಯುವ ಮೌಲಿಕವಾದ ಚಟುವಟಿಕೆಗಳನ್ನು ನೋಡಿದಾಗ ಇದೊಂದು ಜೀವಂತವಾಗಿರುವ ಮಾದರಿ ಸಂಘ ಎನ್ನುವುದರಲ್ಲಿ ಎರಡು ಮಾತಿಲ್ಲ. ಒಂದು ಸಂಸ್ಥೆ ಪರಂಪರೆ ನಿರ್ಮಾಣ ಮಾಡುವುದರ ಜೊತೆಗೆ ಇತಿಹಾಸ ನಿರ್ಮಾಣ ಮಾಡುವುದು ಕಷ್ಟದ ಕೆಲಸ. ಈ ಎರಡನ್ನೂ ಕಟ್ಟುತ್ತಾ ಬಂದ ಅದ್ಭುತವಾದ ಸಂಸ್ಥೆ ಕರ್ನಾಟಕ ವಿದ್ಯಾವರ್ಧಕ ಸಂಘ. ಇಂಥ ಸಂಘದ ವೇದಿಕೆ ಮೇಲೆ ನಿಲ್ಲುವುದು ಒಂದು ಸೌಭಾಗ್ಯ. ಸಂಘವು ನನಗೆ ಬಹಳಷ್ಟು ಕಲಿಸಿದೆ, ಸಂಘವು ನನ್ನ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಆಗಾಗ ವೇದಿಕೆ ಒದಗಿಸಿಕೊಟ್ಟಿದ್ದನ್ನು ಎಂದೂ ಮರೆಯುವಂತಿಲ್ಲ. ಕಳೆದ ೫೨ ವರ್ಷಗಳಿಂದ ಸಂಘದ ದಂಡನಾಯಕರಾಗಿ ಸೇವೆ ಸಲ್ಲಿಸುತ್ತಿರುವ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಸಂಘವು ನಮ್ಮನ್ನು ಸನ್ಮಾನಿಸಿದ್ದು ಅತ್ಯಂತ ಹೃದಯಸ್ಪರ್ಶಿ ಸನ್ಮಾನವಾಗಿದೆ ಎಂದು ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ಇನ್ನೋರ್ವ ಹಿರಿಯ ಸದಸ್ಯೆ ಡಾ. ವಿ.ಶಾರದಾ ಸನ್ಮಾನಕ್ಕೆ ಪ್ರತಿಕ್ರಿಯಿಸಿ ಮಾತನಾಡಿ ಕರ್ನಾಟಕ ವಿದ್ಯಾವರ್ಧಕ ಸಂಘವು ನಾಗರಿಕರಲ್ಲಿ ನಾಡು–ನುಡಿ–ನೆಲ, ಜಲಗಳ ಬಗ್ಗೆ ಹಾಗೂ ಸಾಹಿತ್ಯಿಕ, ಸಾಂಸ್ಕೃತಿಕ, ಚಟುವಟಿಕೆಳಿಗೆ ಉತ್ತೇಜನ ನೀಡುತ್ತಾ ಜನರನ್ನು ಸದಭಿರುಚಿಯತ್ತ ಕೊಂಡೊಯ್ಯುತ್ತಿರುವ ಸಂಸ್ಥೆಯಾಗಿದೆ. ಯಥಾ ರಾಜಾ ತಥಾ ಪ್ರಜಾ ಎನ್ನುವಂತೆ ಸಂಘವು ನಾಡೋಜ ಡಾ. ಪಾಟೀಲ ಪುಟ್ಟಪ್ಪನವರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ  ಕಾರ್ಯನಿರ್ವಹಿಸುತ್ತಿದೆ ಎಂದು ಸಂಘಕ್ಕೆ ತಮ್ಮ ಕೃತಜ್ಞತೆ ಸಲ್ಲಿಸಿದರು.

ವೇದಿಕೆ ಮೆಲೆ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ) ಗೌರವ ಉಪಾಧ್ಯಕ್ಷರಾದ ಸೇತುರಾಮ ಹುನಗುಂದ, ಎಂ.ಬಿ. ಕಟ್ಟಿ, ಡಾ. ಇಸಬೆಲ್ಲಾ ಝೇವಿಯರ, ಬಿ.ಎಲ್. ಪಾಟೀಲ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ, ಶಿವಾನಂದ ಭಾವಿಕಟ್ಟಿ ಹಾಗೂ ಧಾರವಾಡ ಜಿಲ್ಲಾ  ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಡಾ. ಲಿಂಗರಾಜ ಅಂಗಡಿ ಉಪಸ್ಥಿತರಿದ್ದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಶಾಂತೇಶ ಗಾಮನಗಟ್ಟಿ ನಿರ್ವಹಿಸಿದರು,  ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ  ಸನ್ಮಾನಿತರನ್ನು ಪರಿಚಯಿಸಿ, ವಂದಿಸಿದರು. ಪ್ರಾರಂಭದಲ್ಲಿ ಸುನಂದಾ ಹೊಸಮನಿ ಹಾಗೂ ಖೈರುನ್ನಿಸಾ ಕನ್ನಡ ಗೀತೆ ಹಾಡಿದರು.

೧೬. **‘ಕೊಳಲು ವಾದನ’ :**

೧೨೯ ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ನಾಡಿನ ಹೆಮ್ಮೆಯ ಸಂಸ್ಥೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಸಾಹಿತ್ಯ, ಸಂಗೀತ, ಕಲೆ, ನಾಡು–ನುಡಿಗೆ  ಬಹುದೊಡ್ಡ ಕೊಡುಗೆ ನೀಡುತ್ತಿದೆ. ಈ ದಿಶೆಯಲ್ಲಿ ಸಂಘವು ಇಂದು ಜಗತ್ತು ಕಂಡ ಅತ್ಯಂತ ಶ್ರೇಷ್ಠ ಕಲಾವಿದ, ಕೊಳಲು ಮಾಂತ್ರಿಕ ಹರಿಪ್ರಸಾದ ಚೌರಾಸಿಯಾ ಅವರ ಶಿಷ್ಯರಾದ ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ ಸಹೋದರಿಯರಾದ ಶುಚಿಸ್ಮಿತಾ ಹಾಗೂ ದೇವಪ್ರಿಯಾ ಚಟರ್ಜಿ ಇವರ ಕೊಳಲು ವಾದನ ಕಾರ್ಯಕ್ರಮ ಏರ್ಪಡಿಸಿರುವುದು ಶ್ಲಾಘನೀಯ ಎಂದು  ರಂಗಕರ್ಮಿ, ಧಾರವಾಡ ಆಕಾಶವಾಣಿಯ ಡಾ. ಶಶಿಧರ ನರೇಂದ್ರ ಹೇಳಿದರು. ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ ೨೯–೧೨–೨೦೧೮ ರಂದು ಏರ್ಪಡಿಸಿದ್ದ **‘ಕೊಳಲು ವಾದನ’** ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು.

ಧಾರವಾಡದ ಮಣ್ಣಿನಲ್ಲಿ ಸಂಗೀತ ಪರಂಪರೆ ಹಾಸುಹೊಕ್ಕಾಗಿದೆ. ಡಾ. ಗಂಗೂಬಾಯಿ ಹಾನಗಲ್ಲ, ಪಂ. ಭೀಮಸೇನ ಜೋಶಿ, ಪಂ. ಮಲ್ಲಿಕಾರ್ಜುನ ಮನ್ಸೂರ, ಪಂ. ಬಸವರಾಜ ರಾಜಗುರು ಮುಂತಾದ ಅಮೂಲ್ಯ ರತ್ನಗಳನ್ನು ಸಂಗೀತ ಕ್ಷೇತ್ರಕ್ಕೆ ನೀಡಿದ ಹೆಗ್ಗಳಿಕೆ ಧಾರವಾಡಕ್ಕಿದೆ. ಧಾರವಾಡದಲ್ಲಿ ತಜ್ಞ ಕೇಳುವ ವರ್ಗವಿದ್ದು, ಇಲ್ಲಿ ಕಾರ್ಯಕ್ರಮ ನೀಡಿ ಯಶಸ್ವಿಯಾಗುವುದು ಸುಲಭವಲ್ಲ ಎಂದರು.

ಸಂಗೀತ ಪ್ರಕಾರಗಳಲ್ಲಿ ಕೊಳಲು ವಾದನ ಅತ್ಯಂತ ಶ್ರೇಷ್ಠ ಕಲೆಯಾಗಿದೆ. ಶುಚಿಸ್ಮಿತಾ ಹಾಗೂ ದೇವಪ್ರಿಯಾ ಚಟರ್ಜಿ ಅವರು ತಮ್ಮ ಅಮೋಘ ಕೊಳಲು ವಾದನದಿಂದ ಕೇವಲ ತಮ್ಮ ೩೦ ನೇ ವಯಸ್ಸಿನಲ್ಲಿ ಫ್ಲ್ಯುಟ್ ಸಿಸ್ಟರ್ಸ್ ಎಂದೇ ಹೆಸರುವಾಸಿಯಾಗಿ ಭಾರತದಲ್ಲಿ ಅಷ್ಟೇ ಅಲ್ಲದೇ ಜಗತ್ತಿನ ಹಲವಾರು ವೇದಿಕೆಯಲ್ಲಿ ತಮ್ಮ ಅಮೋಘ ಕೊಳಲು ವಾದನ ಪ್ರಸ್ತುತಪಡಿಸಿ, ಕೊಳಲು ವಾದನದಲ್ಲಿ ತಮ್ಮದೇ ಆದ ಛಾಪು ಮೂಡಿಸಿ, ಲಕ್ಷಾಂತರ ಜನರ ಮೆಚ್ಚುಗೆ ಪಾತ್ರರಾಗಿದ್ದಾರೆ. ಸಂಘವು ಅವಳಿನಗರದ ಜನತೆಗೆ ಇಂಥ ಕಲಾವಿದರ ಕೊಳಲು ವಾದನ ಕೇಳುವ ಅವಕಾಶ ಒದಗಿಸಿದ್ದು ಸೌಭಾಗ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಹೈಕೋರ್ಟ ನ್ಯಾಯವಾದಿ ಹಾಗೂ ಸೌಂದರ್ಯ ಭಕ್ತಿ–ಸಂಸ್ಕೃತಿ ಪ್ರತಿಷ್ಠಾನ, ಧಾರವಾಡ ಅಧ್ಯಕ್ಷರಾದ ಡಾ. ಉದಯಕುಮಾರ ದೇಸಾಯಿಯವರು ಮಾತನಾಡಿ, ಕರ್ನಾಟಕ ವಿದ್ಯಾವರ್ಧಕ ಸಂಘವು ಎಂದಿನಿಂದಲೂ ಎಲ್ಲ ಪ್ರಕಾರದ ಕಲೆ, ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಾ, ಕಲೆ, ಕಲಾವಿದರನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಕಾರ್ಯ ಮಾಡುತ್ತಿದೆ. ಆ ನಿಟ್ಟಿನಲ್ಲಿ ಇಂದು ಅಂತಾರಾಷ್ಟ್ರೀಯ ಕಲಾವಿದ ಸಹೋದರಿಯರಾದ ಶುಚಿಸ್ಮಿತಾ ಹಾಗೂ ದೇವಪ್ರಿಯಾ ಚಟರ್ಜಿ ಅವರ ಕೊಳಲು ವಾದನ ಕಾರ್ಯಕ್ರಮ ಏರ್ಪಡಿಸಿರುವುದಕ್ಕೆ ಸಂಘಕ್ಕೆ ಅಭಿನಂದನೆ ಸಲ್ಲಿಸುತ್ತಾ, ಸಂಘವು ಹಮ್ಮಿಕೊಳ್ಳುತ್ತಿರುವ ವಿಭಿನ್ನ, ಅರ್ಥಪೂರ್ಣ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ ಹಾಗೂ ಶ್ರೀಮತಿ ಶೈಲಜಾ ಆಮೂರ ಉಪಸ್ಥಿತರಿದ್ದರು.

ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿಯವರು ಮಾತನಾಡಿ, ಸಂಘದಿಂದ ಮುಂಬರುವ ದಿನಗಳಲ್ಲಿ ಖ್ಯಾತ ಸಂಗೀತಗಾರರ ಅಹೋರಾತ್ರಿ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗುವುದೆಂದು ಪ್ರಕಟಿಸಿ, ಸ್ವಾಗತಿಸಿ, ವಂದಿಸಿದರು.

ನಂತರ ಶುಚಿಸ್ಮಿತಾ ಹಾಗೂ ದೇವಪ್ರಿಯಾ ಚಟರ್ಜಿ ಇವರು ಅತ್ಯಂತ ಸೊಗಸಾಗಿ ಕೊಳಲು ವಾದನ ಪ್ರಸ್ತುತಪಡಿಸಿ ಸಂಗೀತಾಸಕ್ತರ ಮನತಣಿಸಿದರು. ಇವರಿಗೆ ಮುಂಬೈನ ಕಾಳಿನಾಥ ಮಿಶ್ರಾ ತಬಲಾ ಸಾಥ್ ನೀಡಿದರು.

ಇದೇ ಸಂದರ್ಭದಲ್ಲಿ ಸಂಘದ ವತಿಯಿಂದ ಶುಚಿಸ್ಮಿತಾ ಹಾಗೂ ದೇವಪ್ರಿಯಾ ಚಟರ್ಜಿ ಹಾಗೂ ಕಾಳಿನಾಥ ಮಿಶ್ರಾ ಇವರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ) ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ, ಗೌರವ ಉಪಾಧ್ಯಕ್ಷರಾದ ಸೇತುರಾಮ ಹುನಗುಂದ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಶಿವಾನಂದ ಭಾವಿಕಟ್ಟಿ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಮನೋಜ ಪಾಟೀಲ, ಶ್ರೀಮತಿ ಪ್ರಫುಲ್ಲಾ ನಾಯಕ, ಶಾಂತೇಶ ಗಾಮನಗಟ್ಟಿ ಮತ್ತು ಡಾ. ಶ್ರೀಧರ ಕುಲಕರ್ಣಿ, ಶ್ರೀಮತಿ ಪಾರ್ವತಿ ಸುರೇಶ ಹಾಲಭಾವಿ ದಂಪತಿಗಳು, ಚಂದ್ರಶೇಖರ ಅಮಿನಗಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**೧೭. ಬೀಳ್ಕೊಡುಗೆ–ಅಭಿನಂದನಾ ಸಮಾರಂಭ**

ಕ.ವಿ.ವ.ಸಂಘದ ಕಚೇರಿ ಅಧೀಕ್ಷಕರಾಗಿ ನಾಲ್ಕು ದಶಕಗಳಿಗೂ ಮಿಕ್ಕಿ, ಸುದೀರ್ಘವಾಗಿ ಸಂಘದಲ್ಲಿ ಸಾರ್ಥಕ ಸೇವೆ ಸಲ್ಲಿಸಿದ ಶಿವಪುತ್ರಯ್ಯ ರಾಚಯ್ಯನವರ, ಸಂಘದ ಹಾಗೂ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಪುರವರ ಮತ್ತು ಸಾಹಿತಿಗಳ, ಕಲಾವಿದರ, ಸಂಗೀತಗಾರರ ಬುದ್ದಿಜೀವಿಗಳ, ಹೋರಾಟಗಾರರ ಒಡನಾಟದಿಂದ ಅಪಾರ ಜ್ಞಾನ ಸಂಪಾದಿಸಿಕೊಂಡ ಇವರೊಬ್ಬ ಸಂಘದ ಸ್ಮೃತಿಕೋಶ. ಇಂದು ಸೇವಾ ನಿವೃತ್ತಿ ಹೊಂದುತ್ತಿರುವ ಇವರು ಒಬ್ಬ ಮಾದರಿ ವ್ಯಕ್ತಿಯಾಗಿದ್ದಾರೆ ಎಂದು ಹಿರಿಯ ಸಾಹಿತಿ ಡಾ. ಬಾಳಣ್ಣ ಶೀಗೀಹಳ್ಳಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ೩೧–೧–೨೦೧೯ ರಂದು ಆಯೋಜಿದ್ದ ಕ.ವಿ.ವ.ಸಂಘದ ಪ್ರಥಮ ಕಚೇರಿ ಅಧೀಕ್ಷಕರಾಗಿ ಸೇವಾ ನಿವೃತ್ತಿ ಹೊಂದಿದ ಶಿವಪುತ್ರಯ್ಯ ಮ. ರಾಚಯ್ಯನವರ ಅವರ ಬೀಳ್ಕೊಡುಗೆ–ಅಭಿನಂದನಾ ಸಮಾರಂಭದಲ್ಲಿ ಅಭಿನಂದನಾ ನುಡಿಗಳನ್ನಾಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಡಾ. ಶೀಗೀಹಳ್ಳಿಯವರು, ತಮ್ಮ ಸೇವಾ ಅವಧಿಯಲ್ಲಿ ಸಂಘದ ಪದಾಧಿಕಾರಿಗಳೊಂದಿಗೆ, ಸೌಹಾರ್ದತೆಯಿಂದ ಸಂಘದ ಆಡಳಿತ, ಸಮ್ಮೇಳನಗಳು, ಕಾರ್ಯಚಟುವಟಿಕೆಗಳು ಸುಗಮವಾಗಿ, ಯಶಸ್ವಿಯಾಗಿ ಸಾಗುವಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದನ್ನು ಎಂದೂ ಮರೆಯಲಾಗದು. ಸಂಘಕ್ಕೆ ಬೇರೆ ಬೇರೆ ತತ್ವಸಿದ್ಧಾಂತಗಳ ಹಿನ್ನೆಲೆಯುಳ್ಳವರು, ನಾನಾ ರೀತಿಯ ನಿರೀಕ್ಷೆ, ಭಾವನೆ, ಹೊಂದಿದ ವ್ಯಕ್ತಿಗಳು ಆಗಮಿಸುವುದು ಸಹಜ, ಅಂಥ ಎಲ್ಲರನ್ನೂ ಸಂಯಮದಿಂದ, ಸೌಜನ್ಯದಿಂದ, ಪ್ರೀತಿಯಿಂದ ಬರಮಾಡಿಕೊಂಡು, ಅವರ ಕೆಲಸ ಕಾರ್ಯಗಳು ಸುಗಮವಾಗಿ ಸಾಗುವಂತೆ ಕ್ಷಮತೆಯಿಂದ, ಪ್ರಾಮಾಣಿಕತೆಯಿಂದ, ದಕ್ಷತೆಯಿಂದ, ನಿಷ್ಠೆಯಿಂದ ಸಂಘದ ಚೌಕಟ್ಟಿನಲ್ಲಿ ಮಾಡುತ್ತಿದ್ದ ಕಾರ್ಯ ಹಾಗೂ ಅವರು ಸಂಘದ ಕೆಲಸ ಕಾರ್ಯಗಳಲ್ಲಿ ಎಲ್ಲರನ್ನೂ ಒಗ್ಗೂಡಿಸಿಕೊಂಡು ಪ್ರೀತಿ, ವಿಶ್ವಾಸದಿಂದ ತೊಡಗಿಕೊಳ್ಳುತ್ತಿದುದು ಮೆಚ್ಚುವಂತದ್ದು ಇಂಥ ವ್ಯಕ್ತಿಯನ್ನು ಅತ್ಯಂತ ಸಂತೋಷದಿಂದ ಬೀಳ್ಕೋಡುತ್ತಿರುವುದು ಸಂತಸ ತಂದಿದೆ ಎಂದು ಡಾ. ಶೀಗೀಹಳ್ಳಿ ಅವರು ನುಡಿದು, ಶಿವಪುತ್ರಯ್ಯ ಅವರ ನಿವೃತ್ತಿ ಜೀವನ ಸುಖಕರವಾಗಿರಲೆಂದು ಶುಭ ಕೋರಿದರು.

ಡಾ. ಜಿ. ಎಂ. ಹೆಗಡೆ, ಶ್ರೀನಿವಾಸ ವಾಡಪ್ಪಿ, ಶಶಿ ಸಾಲಿ ಇವರೂ ಅಭಿನಂದನಾ ನುಡಿಗಳನ್ನಾಡಿ, ಶಿವಪುತ್ರಯ್ಯ ರಾಚಯ್ಯನವರ ಇವರೊಬ್ಬ ಕಾಯಕ ನಿಷ್ಠೆಯ ವ್ಯಕ್ತಿಯಾಗಿ, ಸಂಘ ಗುಣಾತ್ಮಕವಾಗಿ ಬೆಳೆಯಲು ಅವರ ಕಾರ್ಯವೈಖರಿ ಹಾಗೂ ಅತ್ಯಂತ ಬಡತನದಿಂದ ಮೇರುವ್ಯಕ್ತಿತ್ವ ಹೊಂದುವಲ್ಲಿ ಅವರು ಪಟ್ಟ ಪರಿಶ್ರಮ ಸೇರಿದಂತೆ ಹಲವಾರು ವಿಷಯಗಳನ್ನು ಅವರ ಕುರಿತು ಮೆಲಕು ಹಾಕಿ, ಸಂಘದ ಬೆಳವಣಿಗೆಯಲ್ಲಿ ಎಲೆಮರೆಯ ಕಾಯಿಯಂತೆ ಸಲ್ಲಿಸಿದ ಸೇವೆ ಶ್ಲಾಘನೀಯ. ಸಂಘವು ಬೆಳೆದುಬಂದ ದಾರಿ ಕುರಿತಂತೆ 'ಸಂಘದ ಸಮಗ್ರ ಇತಿಹಾಸ'ವುಳ್ಳ ಗ್ರಂಥ ಹೊರಬರಬೇಕಾಗಿದ್ದು, ಆ ದಿಶೆಯಲ್ಲಿ ಶಿವಪುತ್ರಯ್ಯ ರಾಚಯ್ಯನವರ ಸಂಸ್ಥೆಯ ಚರಿತ್ರೆಯನ್ನು ಗ್ರಂಥದ ಮೂಲಕ ಹೊರತರುವ ಕಾರ್ಯ ಮಾಡಬೇಕು, ಇದರಿಂದ ಸಂಘದ ನಿಜವಾದ ಚರಿತ್ರೆಯನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಇದರಿಂದ ಸಂಘವು ಇದುವರೆಗೆ ಕನ್ನಡ ನಾಡು–ನುಡಿಗೆ ನೀಡಿದ ಅಪಾರ ಕೊಡುಗೆಯ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ ಎಂದು, ಶಿವಪುತ್ರಯ್ಯ ರಾಚಯ್ಯನವರ ಅವರು ಸಂಘಕ್ಕೆ ಸಲ್ಲಿಸಿದ, ೪೩ ವರ್ಷಗಳ ಸಾರ್ಥಕ ಮಹೋನ್ನತ ಸೇವೆ ಹಾಗೂ ಅವರು ಕಟ್ಟಿಕೊಂಡ ಬದುಕನ್ನು ಕೊಂಡಾಡಿದ್ದು ವಿಶೇಷವಾಗಿತ್ತು.

ಅಭಿನಂದನಾ ಸಮಾರಂಭದಲ್ಲಿ ಶಿವಪುತ್ರಯ್ಯ ಮ. ರಾಚಯ್ಯನವರ ಹಾಗೂ ಶ್ರೀಮತಿ ಗಿರಿಜಾ ಶಿ. ರಾಚಯ್ಯನವರ ದಂಪತಿಗಳನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿವಪುತ್ರಯ್ಯ ಮ. ರಾಚಯ್ಯನವರ, ಸಂಘ ನನಗೆ ತಾಯಿ ಇದ್ದಂತೆ, ತಾಯಿಯ ಋಣ ತೀರಿಸಲು ಎಂದಿಗೂ ಸಾದ್ಯವಿಲ್ಲ, ಅದರಂತೆ ನಾನು ಸಂಘದ ಋಣ ತೀರಿಸಲೂ ಸಾಧ್ಯವಿಲ್ಲ ಎಂದ ಅವರು, ಸಂಘವು ನನಗೆ ಅನ್ನ ಹಾಗೂ ಜ್ಞಾನ ನೀಡಿ ಬೆಳೆಸಿದೆ. ಸಂಘದಲ್ಲಿ ನಾನು ಸೇವೆ ಸಲ್ಲಿಸಲು ಕಾರಣಿಕರ್ತರಾದ ದಿ. ಡಾ. ಎಂ. ಎಂ. ಕಲಬುರ್ಗಿಯವರನ್ನು ಹಾಗೂ ಸಂಘದ ಸಂಸ್ಥಾಪನಾ ಕಾರ್ಯದರ್ಶಿಗಳಾದ ಶ್ರೀ ರಾ. ಹ. ದೇಶಪಾಂಡೆ ಆದಿಯಾಗಿ, ಡಾ. ಪಾಪು ಮತ್ತು ನನ್ನ ಸೇವಾ ಅವದಿಯಲ್ಲಿಯ ಯಾವತ್ತೂ ಸಂಘದ ಪದಾಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿ, ತಮ್ಮ ಸೇವಾ ಅವದಿಯಲ್ಲಿಯ ಪ್ರಾರಂಭದ ದಿನಗಳೊಂದಿಗೆ ದಿ. ಮುರಗೋಡ ತಮಗೆ ನೀಡಿದ ಮಾರ್ಗದರ್ಶನ ಸೇರಿದಂತೆ ಸಂಘಕ್ಕೆ ಬರುತ್ತಿದ್ದ ಅನೇಕ ದಿಗ್ಗಜರು, ಗಣ್ಯಮಾನ್ಯರೊಂದಿಗಿನ ತಮ್ಮ ಒಡನಾಟವನ್ನು ಮೆಲುಕು ಹಾಕಿ, ತಮಗೆ ಸಂಘದ ಸಿಬ್ಬಂದಿ ವರ್ಗದವರು ನೀಡಿದ ಸಹಾಯ, ಸಹಕಾರವನ್ನು ಎಂದೂ ಮರೆಯಲಾಗದು ಎಂದು ಭಾವುಕರಾಗಿ, ಇಂದು ನನಗೆ ಬಹಳ ಸಂತೋಷವಾಗಿದೆ, ನನ್ನ ಜೀವನದಲ್ಲಿ ಈ ದಿನ ಸುವರ್ಣಾಕ್ಷರಗಳಿಂದ ಬರೆದಿಡುವ ದಿನ ಎಂದು ಸಂಘದ ಆತ್ಮೀಯ ಬೀಳ್ಕೊಡುಗೆ ಹಾಗೂ ಗೌರವ ಸನ್ಮಾನಕ್ಕೆ ತಮ್ಮ ಹೃಯದಪೂರ್ವಕ ಕೃತಜ್ಞತೆ ಸಲ್ಲಿಸಿ, ಸಂಘಕ್ಕೆ ಚಿರಋಣಿಯಾಗಿದ್ದೇನೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು, ಯಾವುದೇ ಸಂಘ, ಸಂಸ್ಥೆಗಳು ಯಶಸ್ವಿಯಾಗಿ ಮುನ್ನಡೆಯಬೇಕಾದರೆ ಪ್ರಾಮಾಣಿಕ, ವಿಶ್ವಾಸಿಕ, ಸಿಬ್ಬಂದಿಗಳು ಇರಬೇಕು. ಅಂದಾಗ ಅಂಥ ಸಂಘ, ಸಂಸ್ಥೆಗಳು ಉತ್ತರೋತ್ತರವಾಗಿ ಬೆಳೆಯಲು ಸಾಧ್ಯ, ಈ ದಿಶೆಯಲ್ಲಿ ಇಂದು ನಿವೃತ್ತಿ ಹೊಂದುತ್ತಿರುವ ನಮ್ಮ ಶಿವಪುತ್ರ ಸಂಘಕ್ಕೆ ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ ಸೇವೆ ಸಲ್ಲಿಸಿ, ಸಂಘದ ಬೆಳವಣಿಗೆಯಲ್ಲಿ ಅಪಾರ ಕಾರ್ಯ ಮಾಡಿದ್ದಾನೆ ಎಂದು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ, ಶಿವಪುತ್ರ ಒಬ್ಬ ವಿಶ್ವಾಸಿಕ, ಮಾದರಿ ವ್ಯಕ್ತಿಯಾಗಿ, ಒಳ್ಳೆಯ ಸೇವೆ ಮಾಡಿ, ಸಂಘದಿಂದ ಹೊರಹೊಮ್ಮಿದ್ದು ನನಗೆ ಬಹಳ ಸಂತೋವನ್ನುಂಟುಮಾಡಿದೆ ಇದು ಸಂಘಕ್ಕೆ ಹೆಮ್ಮೆ ಎಂದು, ರಾಚಯ್ಯನವರ ದಂಪತಿಗಳಿಗೆ ಆಶೀರ್ವದಿಸಿ, ನಿವೃತ್ತಿ ಜೀವನಕ್ಕೆ ಶುಭ ಕೋರಿದರು.

ಸಂಘದ ಪದಾಧಿಕಾರಿಗಳಾದ ನಿಂಗಣ್ಣ ಕುಂಟಿ (ಇಟಗಿ), ಸದಾನಂದ ಶಿವಳ್ಳಿ, ಬಸವಪ್ರಭು ಹೊಸಕೇರಿ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಮನೋಜ ಪಾಟೀಲ, ಎಸ್. ಬಿ. ಗಾಮನಗಟ್ಟಿ ಹಾಗೂ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ, ಡಾ. ಎಸ್. ಎಸ್. ಭದ್ರಾಪೂರ ಶಿವಪುತ್ರಯ್ಯ ರಾಚಯ್ಯನವರ ಕುರಿತು ಮಾತನಾಡಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಶಿವಪುತ್ರಯ್ಯ ರಾಚಯ್ಯನವರ ದಂಪತಿಗಳಿಗೆ, ಸಂಘದ ಸಿಬ್ಬಂದಿಗಳಾದ ಎನ್. ಎಸ್. ಕಾಶಪ್ಪನವರ, ಎಸ್. ಆಯ್. ಭಾವಿಕಟ್ಟಿ, ಮಹೇಶ ಗುರುಪುತ್ರನವರ, ಆರ್. ಬಿ. ಪಟ್ಟಣಶೆಟ್ಟಿ, ಆನಂದೀಶ್ವರ ಗೋಣೆಪ್ಪನವರ, ಶ್ರೀಕಾಂತ ಪರ್ವತದೇವರಮಠ, ಶೇಖಯ್ಯ ರಾಚಯ್ಯನವರ, ರವಿ ಮೇಟಿ, ರಾಘವೇಂದ್ರ ತೇರದಾಳ, ನಾಗರಾಜ ಸವದತ್ತಿ, ಶ್ರೀಮತಿ ಶಕುಂತಲಾ ದೊಡಮನಿ, ಸಂಗನಗೌಡ ಖಂಡಪ್ಪಗೌಡರ, ಈಶ್ವರ ಕಡಕೋಳ ಆತ್ಮೀಯತೆಯಿಂದ ಶಾಲು ಹೊದಿಸಿ, ಫಲಪುಷ್ಪದೊಂದಿಗೆ ಸನ್ಮಾನಿಸಿ ಗೌರವಿಸಿದರು.

ವೇದಿಕೆಯಲ್ಲಿ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕಾ.ಕಾ.ಸಮಿತಿ ಸದಸ್ಯರಾದ ಸತೀಶ ತುರಮರಿ, ಶ್ರೀಮತಿ ಪ್ರಫುಲ್ಲಾ ನಾಯಕ, ಗೌರವ ಉಪಾಧ್ಯಕ್ಷ ಸೇತುರಾಮ ಹುನಗುಂದ ಉಪಸ್ಥಿತರಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಅಭಿನಂದನಾ ಪತ್ರ ಓದಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ ನಿರೂಪಿಸಿದರು. ಶಂಕರ ಕುಂಬಿ ವಂದಿಸಿದರು.

೧೮. **ಶಾಂತಕವಿಗಳ ಸ್ಮರಣೆ :**

ಶಾಂತಕವಿಗಳಿಗೆ ಕನ್ನಡವೇ ಉಸಿರಾಗಿ, ಅದು ಅವರ ಬಾಳಿನ ದಿವ್ಯ ಮಂತ್ರವಾಗಿತ್ತು. ಅವರು ಕನ್ನಡದ ಉಳಿವಿಗಾಗಿ, ಏಳ್ಗೆಗಾಗಿ ಪಡಬಾರದ ಕಷ್ಟಪಟ್ಟ ಕನ್ನಡದ ಕಟ್ಟಾಳು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ನಿವೃತ್ತ ಅಧೀಕ್ಷಕ ಶಿವಪುತ್ರಯ್ಯ ರಾಚಯ್ಯನವರ ಅಭಿಪ್ರಾಯಪಟ್ಟರು.

ಕನ್ನಡ ನಾಟಕ ರಂಗದ ಪಿತಾಮಹ ಶಾಂತಕವಿ (ಸಕ್ಕರಿ ಬಾಳಾಚಾರ್ಯರ) ಪುಣ್ಯಸ್ಮರಣೆ ಅಂಗವಾಗಿ ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ **೧೫-೩-೨೦೧೯** ರಂದು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಶಾಂತಕವಿಗಳು ಕನ್ನಡಿಗರು ಕನ್ನಡ ನಾಡಿನಲ್ಲಿ ಅನಾಥ ಪ್ರಜ್ಞೆಯಿಂದ ಬದುಕಬಾರದೆಂಬ ಛಲ ಹೊಂದಿದ್ದರು ಎಂದರು.

ಅವರ ಜೀವನವೇ ತೆರೆದ ಪುಸ್ತಕ. ಕನ್ನಡದ ಕೆಲಸಕ್ಕಾಗಿ ಅವರು ಪಡೆದದಕ್ಕಿಂತ ಕೊಟ್ಟಿದ್ದೆ ಜಾಸ್ತಿ, ಯಾರಿಗೂ ತಗ್ಗಿಸಬಾರದೆಂಬ ಸ್ವಾಭಿಮಾನದ ಸಾಕಾರ ಮೂರ್ತಿಗಳಾಗಿದ್ದರು. ಯಾವುದೇ ಪುರಸ್ಕಾರ, ಸನ್ಮಾನಕ್ಕೆ ಒಳಗಾಗಲಿಲ್ಲ, ದಾಕ್ಷಿಣ್ಯಕ್ಕೂ ಕಟ್ಟು ಬೀಳಲಿಲ್ಲ, ಶಿಕ್ಷಕ ವೃತ್ತಿ ಜೀವನದಲ್ಲಿ ಉನ್ನತ ಹುದ್ದೆಗಳಿಂದ ವಂಚಿತರಾದರು ಎಂದರು.

ಶಾಂತಕವಿಗಳು ೩೫ ಕ್ಕೂ ಹೆಚ್ಚು ಸ್ವತಂತ್ರ ನಾಟಕಗಳನ್ನು ರಚಿಸಿ ರಂಗಭೂಮಿಗೆ ಅಮರ ಕಾಣಿಕೆ ನೀಡಿದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ, ಶಾಂತಕವಿಗಳು ಮರಾಠಿಮಯವಾದ ಅಂದಿನ ಕಾಲಘಟ್ಟದಲ್ಲಿ ಕನ್ನಡ ಸೇವೆ ಮಾಡಿದ ಸ್ಮರಣೀಯರು. ಕನ್ನಡ ಸಾಹಿತ್ಯ ಲೋಕದ ಧ್ರುವತಾರೆ. ರಾಷ್ಟ್ರೀಯತೆ ಇಂದಿನ ಯುಗಧರ್ಮ ಆಗಬೇಕೆಂಬ ಕನಸು ಕಂಡ ಮಹಾನ್ ಚೇತನ ಎಂದರು.

ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ವಿದ್ಯಾ ಕುಂದರಗಿ, ಸಕ್ಕರಿ ಬಾಳಾಚಾರ್ಯರು ಯಾವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ಮಾಡದ ಅನನ್ಯ ಕಾರ್ಯ ಮಾಡಿದ ಅಪರೂಪದ ವ್ಯಕ್ತಿಗಳು. ಕನ್ನಡದ ಉಳಿವಿಗಾಗಿ ಹಾಗೂ ಏಳ್ಗೆಗಾಗಿ ಜೋಳಿಗೆ ಹಿಡಿದು ಭಿಕ್ಷೆ ಬೇಡಿದ ದಾಸಯ್ಯರಾಗಿದ್ದರು ಎಂದರು.

ವೇದಿಕೆಯ ಮೇಲಿನ ಗಣ್ಯರು ಸಕ್ರಿ ಬಾಳಾಚಾರ್ಯರ (ಶಾಂತಕವಿಗಳ) ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ಪ್ರಾರಂಭದಲ್ಲಿ ಪ್ರಸಾದ ಪ್ರಭು ಹಾಗೂ ಅರ್ಜುನ ವಠಾರರಿಂದ ಸಂಗೀತ ಕಚೇರಿ ನೆರವೇರಿತು. ಬಸವಧರ್ಮ ಪೀಠಾಧ್ಯಕ್ಷೆ ಲಿಂಗೈಕ್ಯ ಮಾತೆ ಮಹಾದೇವಿಯರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ನಿಂಗಣ್ಣ ಕುಂಟಿ, ಶಿವಣ್ಣ ಬೆಲ್ಲದ, ಮನೋಜ ಪಾಟೀಲ, ಚಂದ್ರಕಾಂತ ಬೆಲ್ಲದ, ಸಕ್ಕರಿ ಬಾಬುರಾವ್, ಇದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ ಸ್ವಾಗತಿಸಿದರು. ಬಸವರಾಜ ಪಾಟೀಲ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು.

೧೯. **ರಾ.ಹ. ದೇಶಪಾಂಡೆಯವರ ೧೫೮ ನೇ ಜನ್ಮದಿನದ ಸ್ಮರಣೆ :**

ಸಂಘ ಜೀವನದಲ್ಲಿ ನಿಸ್ಪ್ರಹತೆಯನ್ನು ಹೊಂದಿದ್ದ ರಾ. ಹ. ದೇಶಪಾಂಡೆಯವರು ಕನ್ನಡದ ಸಾಂಸ್ಕೃತಿಕ ಲೋಕದ ಮಹಾಚೇತನರು. ಅವರ ಸ್ಮರಣೆ ನಮಗೆಲ್ಲಾ ದಾರಿದೀಪ ಎಂದು ಸಾಹಿತಿಗಳಾದ ಶ್ರೀನಿವಾಸ ವಾಡಪ್ಪಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಆಯೋಜಿಸಿದ್ದ, ಸಂಘದ ಸಂಸ್ಥಾಪಕರು ಹಾಗೂ ಸಂಸ್ಥಾಪನಾ ಕಾರ್ಯದರ್ಶಿಗಳಾದ ರಾ. ಹ. ದೇಶಪಾಂಡೆಯವರ ೧೫೮ ನೇ ಜನ್ಮದಿನದ ಸ್ಮರಣೋತ್ಸವ ಕಾರ್ಯಕ್ರಮದ ಅತಿಥಿಗಳಾಗಿ ಮಾತನಾಡಿ, ರಾ. ಹ. ದೇಶಪಾಂಡೆಯವರು ಉತ್ತರ ಕರ್ನಾಟಕದ ಮೊದಲ ಎಂ. ಎ. ಪದವೀಧರರಾಗಿ, ಆಗಿನ ವಿದ್ಯಾಧಿಕಾರಿ ರಸೆಲ್‌ರಿಂದ ಪ್ರಭಾವಿತರಾದವರು. ಡೆಪ್ಯೂಟಿ ಚನ್ನಬಸಪ್ಪನವರು, ವೆಂಕಟ ರಂಗೋಕಟ್ಟಿ, ರೊದ್ದ ಶ್ರೀನಿವಾಸ್ ಹಾಗೂ ಆಲೂರ್ ವೆಂಕಟರಾಯರ ಮಾರ್ಗದರ್ಶನದಲ್ಲಿ ನಾಡು, ನುಡಿ, ಭಾಷೆಯ ಬಲವರ್ಧನೆಗಾಗಿ ಅವಿಶ್ರಾಂತವಾಗಿ ದಣಿವರಿಯದ ಅವರ ಕಾರ್ಯ ಅನನ್ಯ ಎಂದರು.

ಮರಾಠಿ ಭಾಷಾಭಿಮಾನದಲ್ಲಿ ಕನ್ನಡ ಭಾಷೆ ಕೊಚ್ಚಿಹೋಗಿ ಕನ್ನಡಿಗರಲ್ಲಿ ಆವರಿಸಿದ್ದ ಉದಾಶೀನತೆಯನ್ನು ತೊಲಗಿಸಿ, ಕನ್ನಡಿಗರಲ್ಲಿ ಸ್ವಾಭಿಮಾನದ ಬೀಜ ಬಿತ್ತಿದರು. ಕನ್ನಡಿಗರು ಕರ್ನಾಟಕದ ಹೋಳುಭಾಗದಲ್ಲಿ ಅಲ್ಪಸಂಖ್ಯಾತರಾಗಿ ಬಾಳುವ ಸ್ಥಿತಿ ಕಂಡು ಕಾಲ, ಶಕ್ತಿ ಹರಣ ಮಾಡದೇ ಕನ್ನಡ ಸಾಹಿತ್ಯ, ಭಾಷೆ, ಸಂಸ್ಕೃತಿ ಕಲಾ ಪೋಷಣೆಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ ಸಾರ್ಥಕತೆಯನ್ನು ಮೆರೆದರು.

ಕ.ವಿ.ವ.ಸಂಘವು ಅವರ ಕತೃತ್ವ ಶಕ್ತಿಗೆ ರಂಗವಾದರೆ, ಗ್ರಂಥರಚನೆ ಇನ್ನೊಂದು ಕಾರ್ಯವನ್ನಾಗಿಸಿತು. ಒಟ್ಟು ೩೦ ಕನ್ನಡ ಗ್ರಂಥ ರಚಿಸಿದ ಅವರು ಕನ್ನಡ ಗ್ರಂಥಗಳ ಕೊರತೆ ನೀಗಿಸಿದರು. ಅಖಂಡ ಕರ್ನಾಟಕದ ಕನಸು ಕಂಡವರಾದ ರಾ. ಹ. ದೇಶಪಾಂಡೆಯವರಿಗೆ ಕರ್ನಾಟಕದ ಏಕೀಕರಣದ ಕರ್ಣಧಾರತ್ವ ವಹಿಸಿದ್ದ ಆಲೂರ್ ವೆಂಕಟರಾಯರಿಗೆ ವಿದ್ಯಾವರ್ಧಕ ಸಂಘವೇ ವೇದಿಕೆಯಾಗಿದ್ದು ಕನ್ನಡಿಗರಾದ ನಮಗೆ ಹೆಮ್ಮೆಯ ಸಂಗತಿ. ವಾಗ್ಭೂಷಣ ಪತ್ರಿಕೆಯ ಮೂಲಕ ಅಗ್ರಲೇಖನ ಬರೆದು ಕನ್ನಡಿಗರಲ್ಲಿ ಕನ್ನಡತ್ವ ಜಾಗೃತಿಗೊಳಿಸಿದ ಧೀಮಂತರು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾರ್ಯಕಾರಿ ಸಮಿತಿ ಸದಸ್ಯರಾದ ಮನೋಜ ಪಾಟೀಲ ಮಾತನಾಡಿ, ರಾ. ಹ. ದೇಶಪಾಂಡೆಯವರು ಕನ್ನಡಕ್ಕೆ ಕುಂದು ಬರುವ ಸಂದರ್ಭ ಬಂದಾಗ ಧೈರ್ಯದಿಂದ ಎದುರಿಸಿದ ಪ್ರಾತಃಸ್ಮರಣೀಯರು. ಮರಾಠಿಮಯವಾದ ಆ ಕಾಲದಲ್ಲಿ ನಾನು ಕನ್ನಡಿಗ ಎಂದು ಹೇಳಿಕೊಳ್ಳಲು ಹಿಂಜರಿಯುತ್ತಿದ್ದ ಕನ್ನಡಿಗರಲ್ಲಿ ಆತ್ಮಬಲ, ದೃಢಸಂಕಲ್ಪ, ಕೆಚ್ಚನ್ನು ಮೂಡಿಸಿ ನಾಡುನುಡಿಯ ಸಮೃದ್ಧಿಗಾಗಿ ಶಕ್ತಿಶಾಲಿಗಳಾಗಿ ಕನ್ನಡಿಗರು ದುಡಿಯಲು ಅವರಲ್ಲಿ ಕತೃತ್ವಶಕ್ತಿ ತುಂಬಿದರು ಎಂದು ಹೇಳಿದರು.

ದಿ. ಕೆ. ಎಸ್. ದೇಶಪಾಂಡೆಯವರ ಧರ್ಮಪತ್ನಿ ಕುಸುಮಾತಾಯಿಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ತಮ್ಮ ಪತಿ ದಿ. ಕೆ. ಎಸ್. ದೇಶಪಾಂಡೆಯವರು ಅವರ ಅಜ್ಜನಾದ ರಾ. ಹ. ದೇಶಪಾಂಡೆಯವರು ಬರೆದ ೨೧ ವರ್ಷದ ದಿನಚರಿಯನ್ನು ಬೆಳಕಿಗೆ ತಂದು ಸಾರ್ಥಕ ಜೀವನವನ್ನು ನಡೆಸಿದವರೆಂದು ಸ್ಮರಿಸಿದರು.

ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ರಾ. ಹ. ದೇಶಪಾಂಡೆಯವರು ನಮಗೆಲ್ಲ ನಿತ್ಯ ಸ್ಮರಣೀಯರು. ಅವರ ಜನ್ಮದಿನವನ್ನು ಕೇವಲ ಕರ್ನಾಟಕ ವಿದ್ಯಾವರ್ಧಕ ಸಂಘವಷ್ಟೇ ಅಲ್ಲ ಇಡೀ ರಾಜ್ಯ ಆಚರಿಸಿದಾಗ ಮಾತ್ರ ಅವರಿಗೆ ನಿಜವಾದ ಸಂದ ಗೌರವ ಎಂದರು.

ಖ್ಯಾತ ಕಲಾವಿದ ಡಾ. ಶ್ರೀಧರ ಕುಲಕರ್ಣಿ ಸೊಗಸಾಗಿ ಕನ್ನಡ ಗೀತ ಗಾಯನ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ರಾ. ಹ. ದೇಶಪಾಂಡೆಯವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗಣ್ಯರು ಗೌರವ ಸಲ್ಲಿಸಿದರು. ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಕಾ.ಕಾ. ಸಮಿತಿ ಸದಸ್ಯರಾದ ಬಸವಪ್ರಭು ಹೊಸಕೇರಿ, ಚೈತ್ರಾ ಮೋಹನ ನಾಗಮ್ಮನವರ, ಎಸ್. ಬಿ. ಗಾಮನಗಟ್ಟಿ, ಗೌರವ ಉಪಾಧ್ಯಕ್ಷ ಎಂ. ಬಿ. ಕಟ್ಟಿ, ಮತ್ತಿತರರು ಇದ್ದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಕಾ.ಕಾ. ಸಮಿತಿ ಸದಸ್ಯ ಶಿವಾನಂದ ಭಾವಿಕಟ್ಟಿ ವಂದಿಸಿದರು. ಡಾ. ಸ್ನೇಹಾ ಜೋಶಿ ನಿರೂಪಿಸಿದರು.

* * * * * *

## ಸಂಘದ ಸಂಸ್ಥಾಪನಾ ದಿನಾಚರಣೆ
## ದಿನಾಂಕ: ೨೦ ಹಾಗೂ ೨೬ ಜುಲೈ ೨೦೧೮

* **೧೫೩ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟನೆ :**

ಕನ್ನಡ ಕಾರ್ಯಕ್ಕಾಗಿ ಅಂದು ರಾ.ಹ. ದೇಶಪಾಂಡೆ ಅವರು ಸ್ಥಾಪಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡಿಗರ ಬದುಕಿಗೆ ಬೆಳಕಾಗಿದೆ ಎಂದು ಗದಗಿನ ತೋಂಟದಾರ್ಯ ಮಠದ ತೋಂಟದ ಸಿದ್ಧಲಿಂಗ ಸ್ವಾಮಿಗಳು ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಹಮ್ಮಿಕೊಂಡಿದ್ದ ಸಂಘದ ೧೫೩ ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದ **ಸಾನ್ನಿಧ್ಯ** ವಹಿಸಿ ಹಾಗೂ **ಕಾರ್ಯಕ್ರಮ ಉದ್ಘಾಟಿ**ಸಿ ದಿನಾಂಕ **೨೦-೭-೨೦೧೮** ರಂದು ಶ್ರೀ ಶ್ಯಾಮರಾಮ ಕೈಕಿಣಿ ವೇದಿಕೆಯಿಂದ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ ಆಗುವ ಮೊದಲೇ ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡದ ಉಳುವಿಗಾಗಿ ಹೋರಾಟ ಮಾಡಿದ ಪರಿಣಾಮ ಇಂದು ಕನ್ನಡ ಜೀವಂತವಾಗಿದೆ ಎಂದ ಅವರು, ಕರ್ನಾಟಕ ಏಕೀಕರಣದಲ್ಲಿ ಸಂಘದ ಪಾತ್ರ ಮಹತ್ವದ್ದು ಎಂದರು.

ಕರುನಾಡಿಗೆ ಆಪತ್ತು ಬಂದಾಗ ಕನ್ನಡ, ಕನ್ನಡಿಗ, ಕರ್ನಾಟಕ ಎಂದು ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವಂತೆ ಹೋರಾಟ ಮಾಡಿದ ಸಂಘದ ಮಹತ್ ಕಾರ್ಯವನ್ನು ಕನ್ನಡಿಗರು ಸ್ಮರಿಸಬೇಕು. ಜತೆಗೆ ಕನ್ನಡಕ್ಕೆ ಮನೋಹರ ಗ್ರಂಥಮಾಲಾ ಕೊಡುಗೆ ಅನನ್ಯ ಎಂದರು.

**ಪಾಪು ಸೇವೆ ಅನನ್ಯ:** ನಾಡೋಜ ಪಾಪು ಅವರು ಪ್ರಪಂಚ ಪತ್ರಿಕೆ ಮೂಲಕ ಅಕ್ಕಿ ಕಾಳಿನಲ್ಲಿ ಅಮೂಲ್ಯ ವಿಗ್ರಹ ಕೆತ್ತನೆ ಮಾಡುತ್ತಿದ್ದರು. ಅವರ ಹೋರಾಟ ಹಾಗೂ ಅವರ ಆತ್ಮಸ್ಥೈರ್ಯವನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಂಡರೆ ಬಲಿಷ್ಠ ರಾಷ್ಟ್ರ ಕಟ್ಟಬಹುದು ಎಂದರು.

**ಹೋರಾಟ ನಿಲ್ಲಲ್ಲ:** ಅಧ್ಯಕ್ಷತೆ ವಹಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪಾಟೀಲ ಪುಟ್ಟಪ್ಪ ಮಾತನಾಡಿ, ಕರ್ನಾಟಕ ಕಾಲೇಜು ನನ್ನ ಹೊರ ಹಾಕಿತು. ಆದರೂ ನನ್ನ ಹೋರಾಟ ನಿಲ್ಲಲಿಲ್ಲ. ನಂತರ ನಾನು ವಿವಿಧ ಚಳುವಳಿ ಮೂಲಕ ಮಂಚೂಣಿಗೆ ಬಂದೆ ಎಂದು ತಮ್ಮ ಹೋರಾಟಗಳನ್ನು ಮೆಲುಕು ಹಾಕಿದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘ ನಡೆದ ಬಂದ ದಾರಿ ಹಾಗೂ ಸಂಘದ ಮೈಲುಗಲ್ಲುಗಳ ಬಗ್ಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಎಸ್.ಬಿ. ಗುತ್ತಲ, ಪ್ರೊ. ಉಷಾ ಮೂರ್ತಿ, ಪ್ರೊ. ರಮಾಕಾಂತ ಜೋಶಿ, ಕೃಷ್ಣ ಜೋಶಿ, ಸಿ.ಜಿ. ಹಿರೇಮಠ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ನಂತರ ಸನ್ಮಾನಿತರ ಪರವಾಗಿ ಪ್ರೊ. ಉಷಾ ಮೂರ್ತಿ, ಸಿ.ಜಿ. ಹಿರೇಮಠ ಮಾತನಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ, ಎಸ್.ಬಿ. ಗಾಮನಗಟ್ಟಿ ಸೇರಿದಂತೆ ನೂರಾರು ಸಾರ್ವಜನಿಕರು ಇದ್ದರು. ಮೇಘಾ ಹುಕ್ಕೇರಿ ಹಾಗೂ ಸಾಕ್ಷಿ ಹುಕ್ಕೇರಿ ಪ್ರಾರ್ಥಿಸಿದರು. ಪ್ರಫುಲ್ಲಾ ನಾಯಕ ಪರಿಚಯಿಸಿದರು. ಶಿವಾನಂದ ಭಾವಿಕಟ್ಟಿ ನಿರೂಪಿಸಿ, ವಂದಿಸಿದರು.

* **ಹಾಸ್ಯ ಸಂಜೆ ಮತ್ತು ಸನ್ಮಾನ :**

ಕನ್ನಡ ಭಾಷೆ ವಿಶ್ವದಲ್ಲಿಯೆ ಉತ್ಕೃಷ್ಟ ಮತ್ತು ಅದ್ಭುತವಾದ ಭಾಷೆಯಾಗಿದೆ. ಕನ್ನಡ ಎಂಬುದು ಬರೀ ಭಾಷೆಯಲ್ಲ. ಕನ್ನಡ ಕನ್ನಡಿಗರ ಜೀವನಕ್ರಮವಾಗಿದೆ. ಕನ್ನಡಿಗರ ಜೀವನಾಡಿಯಾಗಿರುವ ಕನ್ನಡ ಭಾಷೆಯ ಅಸ್ಮಿತೆ ನಾವೆಂದೂ ಮರೆಯಬಾರದು ಎಂದು ಹಿರಿಯ ಸಾಹಿತಿ ಡಾ. ಗುರುಲಿಂಗ ಕಾಪಸೆ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೧೨೯ ನೇ ಸಂಸ್ಥಾಪನಾ ದಿನಾಚರಣೆಯ ಎರಡನೇ ದಿನ ದಿನಾಂಕ **೨೧–೭–೨೦೧೮** ರಂದು **ಹಾಸ್ಯ ಸಂಜೆ ಮತ್ತು ಸನ್ಮಾನ** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, **"ಮೆ॥ ಝಿಗ್ಲರ್ (ಸಾಹೇಬರು) ವೇದಿಕೆ"** ಯಿಂದ ಮಾತನಾಡಿದ ಅವರು, ಹಿರಿಯರು ಕಟ್ಟಿದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ತನ್ನದೇ ಆದ ಐತಿಹಾಸಿಕ ಶಕ್ತಿ ಹಾಗೂ ಭವ್ಯವಾದ ಇತಿಹಾಸವಿದೆ. ಕನ್ನಡ ಭಾಷೆಯಲ್ಲಿ ಇರುವ ಶಕ್ತಿಯಿಂದಲೇ ಉಳಿದ ಭಾಷೆಗಳಿಗಿಂತ ಕನ್ನಡಕ್ಕೆ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳು ಒಲಿದಿವೆ. ಇದು ಸಾವಿಲ್ಲದ ಭಾಷೆಯಾಗಿದೆ. ಕನ್ನಡ ಭಾರತದ ಎಲ್ಲ ಭಾಷೆಗಳಿಗಿಂತ ಸಮೃದ್ಧ, ಸಿಹಿಯಾದ ಹಾಗೂ ಮೃದುವಾದ ಭಾಷೆಯಾಗಿದೆ. ಕನ್ನಡ ಭಾಷೆ ಆಲಿಸಲು ಕೂಡ ಇಂಪಾಗಿದೆ. ಕರ್ನಾಟಕದ ವಿಸ್ತಾರ ಮೊದಲು ಕಾವೇರಿಯಿಂದ ಗೋದಾವರಿಯವರೆಗೆ ಇತ್ತು. ಅದು ಈಗ ಭೀಮಾ ನದಿಯ ತಟದವರೆಗೆ ಎಂಬಂತಾಗಿದೆ. ಈ ರೀತಿ ವಿಸ್ತಾರ ಕಡಿಮೆಯಾಗಲು ಕನ್ನಡಿಗರ ಔದಾರ್ಯವೆ ಕಾರಣ. ಕನ್ನಡಕ್ಕೆ, ಕರ್ನಾಟಕಕ್ಕೆ ಸಿಗಬೇಕಾದಷ್ಟು ಸ್ಥಾನಮಾನ, ಗೌರವ ಸಿಕ್ಕಿಲ್ಲ. ಇನ್ನೂ ಕನ್ನಡದ ಕೆಲಸ ಆಗುವುದು ಬಹಳವಿದೆ. ಆದ್ದರಿಂದ ಕನ್ನಡಿಗರು ಇನ್ನಾದರೂ ಎಚ್ಚೆತ್ತು ಕನ್ನಡದ ಕೈಂಕರ್ಯಕ್ಕೆ ಕೈ ಜೋಡಿಸಲಿ. ಈ ದಿಶೆಯಲ್ಲಿ ಕಳೆದ ಐವತ್ತು ವರ್ಷಗಳಿಂದ ಕನ್ನಡ ಕಟ್ಟುತ್ತಾ, ಬೆಳೆಸುತ್ತಾ, ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಸಿದ ಶ್ರೇಯಸ್ಸು, ಕೀರ್ತಿ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರಿಗೆ ಸಲ್ಲುತ್ತದೆ. ನಿಜವಾಗಿ ಅವರು ಕನ್ನಡದ ಭೀಷ್ಮಾಚಾರ್ಯರು. ಯಾವುದೇ ಸರಕಾರ ಇರಲಿ ಡಾ. ಪಾಪುರವರ ಮಾತಿಗೆ ಬೆಲೆ ಕೊಡುತ್ತದೆ, ಅಷ್ಟೇ ಅಲ್ಲ ಹೆದರುತ್ತದೆ ಕೂಡಾ ಎಂದು ಮುಂದುವರೆದು ಮಾತನಾಡುತ್ತಾ ಹೇಳಿದರು.

ಅತಿಥಿಯಾಗಿ ಆಗಮಿಸಿದ್ದ ಪ್ರೊ. ಸಿ. ವ್ಹಿ. ಕೆರಿಮನಿ ಅವರು ಮಾತನಾಡಿ, ಕನ್ನಡಕ್ಕೆ ಕುತ್ತು ಬಂದಾಗಲೆಲ್ಲ ಕರ್ನಾಟಕ ವಿದ್ಯಾವರ್ಧಕ ಸಂಘವು ಕೈ ಎತ್ತಿ ಹೋರಾಟ, ಚಳುವಳಿಗಳನ್ನು ಹುಟ್ಟುಹಾಕಿ ಕನ್ನಡಿಗರನ್ನು ಬಡಿದೆಬ್ಬಿಸಿ ಜಾಗೃತಿಗೊಳಿಸುತ್ತಾ, ನಾಡು–ನುಡಿ ಸಾಹಿತ್ಯ, ಸಂಸ್ಕೃತಿ ಉಳಿಸಿ ಬೆಳೆಸುವ ಕಾರ್ಯವನ್ನು ಮಾಡುತ್ತಿದೆ ಎಂದ ಅವರು ಸಂಘದ ಜೊತೆಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡು, ಕನ್ನಡ ಕಟ್ಟುವ ಕಾಯದಲ್ಲಿ ಡಾ. ಪಾಪು ನಮಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ ಎಂದರು.

ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಗೌರವ ಉಪಸ್ಥಿತಿ ವಹಿಸಿದ್ದರು. ಸಂಘದ ಹಿರಿಯ ಸದಸ್ಯರಾದ ಶಿವಶಂಕರ ಹಿರೇಮಠ, ಎಂ.ಸಿ. ಬಂಡಿ, ಎಂ.ಆರ್. ಸತ್ಯನಾರಾಯಣ, ಡಾ. ಸುಲೋಚನಾ ಮಟ್ಟಿ ಅವರನ್ನು ಸನ್ಮಾನಿಸಲಾಯಿತು. ಸನ್ಮಾನಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಪ್ರಿ. ಶಿವಶಂಕರ ಹಿರೇಮಠ ಮತ್ತು ಎಂ. ಸಿ. ಬಂಡಿ ವಕೀಲರು, ಸಂಘವು ನಮ್ಮನ್ನು ಗುರುತಿಸಿ ಗೌರವ ಸೂಚಿಸಿದ್ದು ನಮ್ಮ ಜೀವಮಾನದ ಅವಿಸ್ಮರಣೀಯ ಘಳಿಗೆಯಾಗಿದೆ ಮತ್ತು ಸಂಘಕ್ಕೆ ನಾವು ಚಿರಋಣಿಯಾಗಿದ್ದೇವೆ ಎಂದು ಹೇಳಿದರು.

ಹಾಸ್ಯ ಕಲಾವಿದರಾದ ಮಹದೇವ ಸತ್ತಿಗೇರಿ, ಮಲ್ಲಪ್ಪ ಹೊಂಗಲ ಹಾಗೂ ಡಾ. ರಾಜಶೇಖರ ಬಶೆಟ್ಟಿ ಹಾಸ್ಯ ಸಂಜೆ ನಡೆಸಿಕೊಟ್ಟು ಸಭಿಕರನ್ನು ನಗೆಗಡಲಲ್ಲಿ ತೇಲಿಸಿದರು.

ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಸ್ವಾಗತಿಸಿದರು. ಕಾ.ಕಾ. ಸಮಿತಿ ಸದಸ್ಯರಾದ ಶಂಕರ ಕುಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸತೀಶ ತುರಮರಿ ನಿರೂಪಿಸಿದರು. ಶಾಂತೇಶ ಗಾಮನಗಟ್ಟಿ ಸನ್ಮಾನಿತರನ್ನು ಪರಿಚಯಿಸಿ, ವಂದಿಸಿದರು. ಡಾ. ಸ್ನೇಹಾ ಜೋಶಿ ಪ್ರಾರ್ಥಿಸಿದರು.

ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ), ಕೋಶಾಧ್ಯಕ್ಷರಾದ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ ಎಸ್. ಉಡಿಕೇರಿ, ಬಸವಪ್ರಭು ಹೊಸಕೇರಿ, ಶಿವಾನಂದ ಭಾವಿಕಟ್ಟಿ, ಮೋಹನ ನಾಗಮ್ಮನವರ ಉಪಸ್ಥಿತರಿದ್ದರು.

*        **‘ಜಾನಪದ ಸಂಜೆ ಹಾಗೂ ಸನ್ಮಾನ’ :**

ರೈತರನ್ನು ಸ್ವಂತ ಬಲದಲ್ಲಿ ನಿಲ್ಲುವಂತೆ ಮಾಡುವ ಯೋಜನೆಗಳನ್ನು ಸರ್ಕಾರಗಳು ಜಾರಿ ತಂದದ್ದೇ ಆದಲ್ಲಿ ರೈತರೆ ಸರ್ಕಾರ ಮಾಡಿದ ಸಾಲಗಳನ್ನು ತೀರಿಸಬಹುದಾಗಿದೆ. ರೈತರ ಸಾಲಮನ್ನಾ ಮಾಡುವ ಯೋಜನೆ ಒಂದು ಆಕರ್ಷಣೆ ಯೋಜನೆಯೆ ವಿನಹ ಪರಿಣಾಮಕಾರಿ ಮತ್ತು ದೇಶವನ್ನು ಆರ್ಥಿಕವಾಗಿ ಬಲಗೊಳಿಸುವ ಪರಿಣಾಮಕಾರಿ ಯೋಜನೆಯಲ್ಲಾ ಎಂದು ಖ್ಯಾತ ತಳಿ ತಜ್ಞ ಹಾಗೂ ಕೃಷಿ ವಿಜ್ಞಾನಿ ಡಾ. ಎಂ. ಮಹದೇವಪ್ಪಾ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೧೨೫ನೇ ಸಂಸ್ಥಾಪನಾ ದಿನಾಚರಣೆ ೩ ದಿನ ದಿನಾಂಕ **೨೨-೭-೨೦೧೮** ರಂದು ಮೆ॥ ಫೆರಲಿ ಮ್ಯೂರ(ಸಾಹೇಬರು) ವೇದಿಕೆ ಮೇಲೆ **‘ಜಾನಪದ ಸಂಜೆ ಹಾಗೂ ಸನ್ಮಾನ’** ಕಾರ್ಯಕ್ರಮದ ಅಧ್ಯಕ್ಷೀಯ ಸ್ಥಾನದಿಂದ ಮಾತನಾಡಿದ ಕೃಷಿ ವಿ.ವಿ.ಯ ಮಾಜಿ ಕುಲಕಪತಿಗಳು ಪದ್ಮಭೂಷಣ ಡಾ. ಎಂ. ಮಹದೇವಪ್ಪ, ಈ ದೇಶ ಕೃಷಿ ಪ್ರಧಾನ ದೇಶ, ಈ ದೇಶಕ್ಕೆ ತಕ್ಕುದಾದ ಕೃಷಿ ಆಧಾರಿತವಾಗಿ ಬಲಗೊಳಿಸಬಲ್ಲ ಯೋಜನೆ ಕೃಷಿ ವಿಜ್ಞಾನಿಗಳು ನೀಡಿ, ದೇಶವನ್ನು ಆರ್ಥಿಕವಾಗಿ ಬಲಗೊಳಿಸಲು ಸಮರ್ಥರಿದ್ದಾರೆ. ಸರಕಾರ ಅವರನ್ನು ಬಳಿಸಿಕೊಳ್ಳಲಿ ಎಂದು ಕರೆ ನೀಡಿದ ಅವರು ಜಾನಪದ ಹಾಗೂ ಕೃಷಿ ಎರಡೂ ಒಂದೇ ಆಗಿವೆ ಎಂದು ಮುಂದುವರೆದು ಮಾತನಾಡುತ್ತಾ ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಗೊಟಗೋಡಿ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾದ ಡಿ.ಬಿ. ನಾಯಕ ಮಾತನಾಡಿ, ಕನ್ನಡ ಉಳಿಯಬೇಕೆಂದರೆ ಜಾನಪದವನ್ನು ಉಳಿಸಬೇಕು. ಜಾನಪದವೆಂದರೆ ಮನುಷ್ಯ ಸಮಗ್ರ ಅಧ್ಯಯನ. ಆಧುನಿಕತೆಯ ಹೆಸರಿನಲ್ಲಿ ಇಂದು ನಾವು ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಇಂದಿನ ಯುವ ಜನಾಂಗ ಮೂಲ ಜಾನಪದದತ್ತ ಒಲವು ತೋರಬೇಕು ಎಂದರು. ಜಾನಪದ ವಿಶ್ವವಿದ್ಯಾಲಯ ಈ ದಿಸೆಯಲ್ಲಿ ಹೊಸ ಪ್ರಯೋಗ ಮಾಡುತ್ತಲಿದೆ ಎಂದರು. ಕರ್ನಾಟಕ ವಿದ್ಯಾವರ್ಧಕ ಸಂಘ ಇಂತಹ ಕಾರ್ಯ ಮಾಡಿ ಯಶಸ್ವಿ ಆಗುತ್ತದೆ ಎಂದರು.

ವೇದಿಕೆ ಮೇಲೆ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕ.ವಿ.ವ. ಸಂಘದ ಹಿರಿಯ ಸದಸ್ಯರಾದ ವ್ಹಿ.ಜಿ. ದಿಕ್ಷೀತ, ಗಿರೀಶ ಕುಲಕರ್ಣಿ, ಈಶ್ವರ ಕಮ್ಮಾರ, ಶ್ರೀಮತಿ ಜಯಶೀಲಾ ಬೆಳಲದವರ, ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಸನ್ಮಾನಕ್ಕೆ ಪ್ರತಿಕ್ರಿಯೆ ನೀಡಿ ಮಾತನಾಡಿದ ಈಶ್ವರ ಕಮ್ಮಾರ ಹಾಗೂ ಶ್ರೀಮತಿ ಜಯಶೀಲಾ ಬೆಳಲದವರ ಸಂಘವು ಹಿರಿಯರನ್ನು ಗುರುತಿಸಿ, ಸನ್ಮಾನಿಸುತ್ತಿರುವುದು ಶ್ಲ್ಯಾಘನೀಯ ಎಂದರು.

ವೇದಿಕೆ ಮೇಲೆ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕಾರ್ಯಕಾರಿ ಸಮಿತಿ ಸದಸ್ಯರಾದ ಬಸವಪ್ರಭು ಹೊಸಕೇರಿ, ಶಿವಾನಂದ ಭಾವಿಕಟ್ಟಿ ಇದ್ದರು

ಆರಂಭದಲ್ಲಿ ವೀಣಾ ಚಿಕ್ಕಮಠ ಪ್ರಾರ್ಥಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸತೀಶ ತುರಮರಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಉಡಿಕೇರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಅವರು ಮಹಾದೇವಪ್ಪನವರಿಗೆ ಗೌರವಾರ್ಪಣೆ ಮಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಕಾರ್ಯಕ್ರಮ ಸಂಯೋಜಕರಾದ ವಿಶ್ವೇಶ್ವರಿ ಬ. ಹಿರೇಮಠ, ಅತಿಥಿಗಳನ್ನ ಪರಿಚಯಿಸಿ, ವಂದಿಸಿದರು. ಶಂಕರ ಕುಂಬಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಕೊಣ್ಣೂರಿನ ಜಾನಪದ ಕಲಾವಿದ ಮಹಾಂತೇಶ ವಾಲಿ ಮತ್ತು ಸಂಗಡಿಗರು ಹಾಗೂ ಧಾರವಾಡದ ಜಾನಪದ ಕಲಾವಿದ ಯಕ್ಕೇರಪ್ಪ ನಡುವಿನಮನಿ ಸುಮಧುರವಾದ ಜಾನಪದಗಳನ್ನು ಹಾಡಿದರು.

*        **‘ನೃತ್ಯ ಸಂಜೆ ಹಾಗೂ ಸನ್ಮಾನ’ :**

ಧಾರವಾಡದ ಮಣ್ಣಿನ ಗುಣವೋ ಏನೋ, ಈ ನಗರವನ್ನು ವಿಶ್ವದ ಅನೇಕ ಮೇಧಾವಿಗಳು ಪ್ರೀತಿಸಿರುವುದು ವಿಶೇಷ. ಹರ್ಮನ್ ಮೋಗ್ಲಿಂಗ್, ರೆವರೆಂಡ್ ಕಿಟೆಲ್ ಮತ್ತು ಫ್ಯಾರೆನ್‌ರಂತಹ ಧೀಮಂತರು ಧಾರವಾಡದ ಬಗ್ಗೆ ಅನನ್ಯ ಕಾಳಜಿಯುಳ್ಳವರಾಗಿದ್ದರು. ಕಿಟೆಲ್‌ರವರು ತಮ್ಮ ಕೊನೆಯ ದಿನಗಳಲ್ಲಿ ಭಾರತಕ್ಕೆ ಹೋಗಿ ಧಾರವಾಡದಲ್ಲಿ ನೆಲೆಸಬೇಕಾಗಿತ್ತು ಎಂದು ಚಿಂತಿಸಿದ್ದರು. ಅಂತೆಯೇ ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿದ್ದ ಫ್ಯಾರೆನ್‌ರವರು ನಿವೃತ್ತಿ ನಂತರ ವಿದೇಶದಿಂದ ಮರಳಿ ಬಂದು ಮತ್ತೆ ಹದಿನಾಲ್ಕು ವರ್ಷ ಧಾರವಾಡದಲ್ಲಿ ನೆಲೆಸಿದ್ದರು ಎಂಬ ಸಂಗತಿಗಳು ಧಾರವಾಡದ ವಿಶೇಷತೆಯನ್ನು ಎತ್ತಿ ತೋರಿಸುತ್ತವೆ ಎಂದು ಕಲಬುರ್ಗಿ ಕೇಂದ್ರಿಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಚ್.ಎಂ. ಮಹೇಶ್ವರಯ್ಯ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ೧೨೫ನೇ ಸಂಸ್ಥಾಪನಾ ದಿನಾಚರಣೆ ೪ ದಿನ ದಿನಾಂಕ **೨೩-೭-೨೦೧೮** ರಂದು ಶ್ರೀ ವೆಂಕಟ ರಂಗೋ ಕಟ್ಟಿ ವೇದಿಕೆ ಯಲ್ಲಿ ಆಯೋಜಿಸಲಾಗಿದ್ದ **‘ನೃತ್ಯ ಸಂಜೆ ಹಾಗೂ ಸನ್ಮಾನ’** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ರಾಷ್ಟ್ರದಲ್ಲೇ ಹಳೆಯದು ಎಂದು ಹೇಳಬಹುದಾದ ಸಂಸ್ಥೆಗಳಲ್ಲಿ ಬಹುಖ್ಯಾತಿಯ ವಿದ್ಯಾವರ್ಧಕ ಸಂಘವು ಒಂದು. ಇತ್ತೀಚೆಗೆ ಹೊರನಾಡಿನಲ್ಲಿಯೂ ಕನ್ನಡ ಸಮ್ಮೇಳನಗಳನ್ನು ಸಂಘ ಆಯೋಜಿಸಿ, ಕನ್ನಡದ ಅಸ್ಮಿತೆಯನ್ನು ಉಳಿಸಲು ಶ್ರಮಿಸುತ್ತಿರುವುದು ಶ್ಲ್ಯಾಘನೀಯ ಎಂದರು.

ಸಮಾರಂಭದಲ್ಲಿ ಅತಿಥಿಗಳಾಗಿ ಪಾಲ್ಗೊಂಡ ನಾಡಿನ ಖ್ಯಾತ ಛಾಯಾಗ್ರಾಹಕರಾದ ಹುಬ್ಬಳ್ಳಿ ಸಾಲಿ ಗ್ರಾಫಿಕ್ಸ್‌ನ ಶಶಿ ಸಾಲಿ ಅವರು ಮಾತನಾಡಿ, ವಿದ್ಯಾರ್ಥಿ ಜೀವನದಿಂದ ಸಂಘದ ಜೊತೆ ಸಂಬಂಧ ಹೊಂದಿದ ನನ್ನಂತಹ ಅನೇಕರು ಸಂಘದ ಮಾರ್ಗದರ್ಶನದಿಂದ ಉನ್ನತ ಸ್ಥಾನಮಾನ ಹೊಂದಿರುವುದು, ನಮಗೆ ಸಂಘ ಕಟ್ಟಿಕೊಟ್ಟ ಶ್ರೀಮಂತಿಕೆ ಎನ್ನಬಹುದು. ನನ್ನ ವೃತ್ತಿ ಪ್ರಾರಂಭದ ದಿನಗಳಲ್ಲಿ ಧಾರವಾಡದ ಹಿರಿಯ ಸಾಹಿತಿಗಳು, ಸಂಗೀತಗಾರರು, ವಿದ್ವಾಂಸರು ವಿದ್ಯಾವರ್ಧಕ ಸಂಘದಲ್ಲಿ ಸೇರುತ್ತಿದ್ದ ಕ್ಷಣಗಳನ್ನು ಸೆರೆ ಹಿಡಿಯುವುದೇ ನನ್ನ ಪಾಲಿನ ಸೌಭಾಗ್ಯವಾಗಿತ್ತು ಎಂದರು.

ವೇದಿಕೆ ಮೇಲೆ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕ.ವಿ.ವ. ಸಂಘದ ಹಿರಿಯ ಸದಸ್ಯರಾದ ಡಾ. ಎನ್.ಎಸ್. ಹಿರೇಮಠ, ಪ್ರಿ. ಜ್ಯೋತಿ ಹೊಸೂರ, ಪ್ರೊ. ಸಿ.ಆರ್. ಯರವಿನತೆಲಿಮಠ, ಶ್ರೀಮತಿ ರಂಜನಾ ನಾಯಕ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಸನ್ಮಾನಕ್ಕೆ ಪ್ರತಿಕ್ರಿಯೆ ನೀಡಿ ಮಾತನಾಡಿದ ಶ್ರೀಮತಿ ರಂಜನಾ ನಾಯಕ, ವಿದ್ಯಾವರ್ಧಕ ಸಂಘದ ಗೌರವ ನನಗೆ ತವರಿನ ಪ್ರೀತಿಯನ್ನು ನೀಡಿದೆ. ಸಂಘದ ಆವರಣದಲ್ಲಿ ಹಿರಿಯ ಸಾಹಿತಿಗಳೊಂದಿಗೆ ತಾವು ಕಳೆದ ಕ್ಷಣಗಳನ್ನು ಮೆಲುಕು ಹಾಕಿದ ಅವರು ಸಂಘದ ಕನ್ನಡದ ಕೈಂಕರ್ಯ ಇತರರಿಗೆ ಅನುಕರಣೀಯ ಎಂದರು. ಇನ್ನೋರ್ವ ಸನ್ಮಾನಿತರಾದ ಪ್ರಿ. ಜ್ಯೊತಿ ಹೊಸೂರ ಮಾತನಾಡಿ, ನಮ್ಮ ಮನೆತನದಲ್ಲಿಯೇ ನಾನೇ ಮೊದಲು ಶಾಲೆ ಕಲಿತವ. ನಾನು ವಿದ್ಯೆ ಕಲಿಯದಿದ್ದರೆ ನಾನು ಏನಾಗಬಹುದಾಗಿತ್ತು ಎಂದು ಚಿಂತಿಸಿದರೆ ಆಶ್ಚರ್ಯವೆನಿಸುತ್ತದೆ. ಶಿಕ್ಷಣ ನನ್ನನ್ನು ಈ ಗೌರವಕ್ಕೆ ಪಾತ್ರನನ್ನಾಗಿಸಿದೆ ಎಂದರು.

ವೇದಿಕೆ ಮೇಲೆ ಸಂಘದ ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕೋಶಾಧ್ಯಕ್ಷ ಕೃಷ್ಣ ಜೋಶಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಪ್ರಫುಲ್ಲಾ ನಾಯಕ, ಎಸ್.ಬಿ. ಗಾಮನಗಟ್ಟಿ ಇದ್ದರು.

ಆರಂಭದಲ್ಲಿ ಶ್ರೀಮತಿ ಆಶಾ ಪ್ರಳಯಕಲ್ಮಠ ಪ್ರಾರ್ಥಿಸಿದರು. ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಕಾರ್ಯಕ್ರಮ ಸಂಯೋಜಕರಾದ ಬಸವಪ್ರಭು ಹೊಸಕೇರಿ ಪ್ರಾಸ್ತಾವಿಕ ನುಡಿಗಳನ್ನಾಡಿ, ಕಾರ್ಯಕ್ರಮ ನಿರೂಪಿಸಿದರು. ಶಿವಾನಂದ ಭಾವಿಕಟ್ಟಿ ವಂದಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ನೃತ್ಯ ಅಕಾಡೆಮಿ, ಧಾರವಾಡದ ರಾಜು ಟೋಣಪಿ ಹಾಗೂ ವಿಶ್ವಾಂಬರಿ ನೃತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ ಧಾರವಾಡದ ಶ್ರೀಮತಿ ಅಂಕಿತಾ ರಾವ ನೃತ್ಯ ಪ್ರದರ್ಶನ ನೀಡಿದರು.

* **'ಸಾಂಸ್ಕೃತಿಕ ಸಂಜೆ ಹಾಗೂ ಸನ್ಮಾನ'**

ಕನ್ನಡದ ಅಸ್ಮಿತೆ ಸಮಗ್ರ ಕರ್ನಾಟಕತ್ವದ ಅಭಿವೃದ್ಧಿಯನ್ನು ನಿರಂತರವಾಗಿ ರಕ್ಷಿಸುತ್ತಿರುವ ಒಂದೂ ಕಾಲು ಶತಮಾನಕ್ಕೂ ಮಿಕ್ಕಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಸೇವೆಯ ಅಧಿಕೃತ ದಾಖಲೆ ಮತ್ತು ಸಾಕ್ಷ್ಯಚಿತ್ರವನ್ನು ಮಾಡಬೇಕೆಂದು ಮಂಗಳವಾರ ಇಲ್ಲಿ ಮಾತನಾಡಿದ ಸನ್ಮಾನಿತರಾದ ಹಿರಿಯ ಪ್ರಾಧ್ಯಾಪಕಿ ಡಾ. ಶಾಂತಾ ಇಮ್ರಾಪೂರ ಮತ್ತು ಅಧ್ಯಕ್ಷತೆ ವಹಿಸಿದ್ದ ಖ್ಯಾತ ಸಾಹಿತಿ ಡಾ. ಬಾಳಣ್ಣಾ ಶೀಗೀಹಳ್ಳಿ ತಮ್ಮ ಪ್ರತ್ಯೇಕ ಭಾಷಣದಲ್ಲಿ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೧೨೯ ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ದಿನಾಂಕ **೨೪-೭-೨೦೧೮** ರಂದು ಶ್ರೀ ಗುರುನಾಥರಾವ ಘಾಟಕ ವೇದಿಕೆಯಲ್ಲಿ ಏರ್ಪಟಿದ್ದ **'ಸಾಂಸ್ಕೃತಿಕ ಸಂಜೆ ಹಾಗೂ ಸನ್ಮಾನ'** ಸಮಾರಂಭದಲ್ಲಿ ಮೇಲಿನ ಗಣ್ಯರು ಮಾತನಾಡುತ್ತಿದ್ದರು.

ಕ.ವಿ.ವ. ಸಂಘ ಕನ್ನಡ ನಾಡು-ನುಡಿ, ಭಾಷೆಗಾಗಿ ಅವಿಶ್ರಾಂತ ಸೇವೆಯನ್ನುಸಲ್ಲಿಸುತ್ತಲೇ ಇದೆ. ಇದರಲ್ಲಿ ಪಾಲ್ಗೊಂಡ ಗಣ್ಯರು ತಮ್ಮ ಕನ್ನಡದ ಕೈಂಕರ್ಯವನ್ನು ತನು-ಮನ ಧನದಿಂದ ಮಾಡಿದ್ದಾರೆ ಎಂದು ಡಾ. ಶೀಗೀಹಳ್ಳಿ ನುಡಿದರು. ಸಂಘದ ಹಿರಿಯ ಸದಸ್ಯರೂ ಆಗಿರುವ ಕನ್ನಡ ಪ್ರಾಧ್ಯಾಪಕಿ ಡಾ. ಶಾಂತಾ ಇಮ್ರಾಪೂರ ಅವರು ಕ.ವಿ.ವ. ಸಂಘದ ಇತಿಹಾಸವೆಂದರೆ ಕನ್ನಡ ಭಾಷೆಯ ಉದಯೋನ್ಮುಖ ಚರಿತ್ರೆ ಮತ್ತು ಕನ್ನಡ ನಾಡಿನ ಗಟ್ಟಿ ಇತಿಹಾಸದ ಸುವರ್ಣ ಪುಟಗಳಾಗಿವೆ ಎಂದು ಹೇಳಿದರು.

ಗೌರವ ಉಪಸ್ಥಿತಿ ಸ್ಥಾನದಲ್ಲಿದ್ದ ಕ.ವಿ.ವ. ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಮಾತನಾಡಿ, ತಾವು ೧೯೬೭ ರಲ್ಲಿ ಸಂಘದ ಅಧ್ಯಕ್ಷರಾಗಿದ್ದಾಗ ಈ ಸಂಘಕ್ಕೆ ಸರಕಾರದಿಂದ ಬರಿ ಐದನೂರು ರೂಪಾಯಿ ಅನುದಾನ ಸಿಗುತ್ತಿತ್ತು. ಈಗ ಅದು ೧ ಕೋಟಿಗೆ ತಮ್ಮ ಅಧಿಕಾರದ ಅವಧಿಯಲ್ಲಿ ತಲುಪಿದೆ. ಇದರಿಂದಾಗಿ ಕನ್ನಡ ಮತ್ತು ಕರ್ನಾಟಕದ ಗುಣಾತ್ಮಕ ಮತ್ತು ಹೆಚ್ಚಿನ ಸೇವೆ ಸಲ್ಲಿಸಲು ನೆರವಾಗಿದೆ ಎಂದರು.

ಅತಿಥಿಗಳಾಗಿದ್ದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಬಿ.ಬಿ. ಮಾಶಾಳ ಮಾತನಾಡಿ, ತಾವು ಸಂಘದ ಸದಸ್ಯರಾಗಿದ್ದ ಅವಧಿಯಿಂದ ಪ್ರಾರಂಭಿಸಿ ಇಂದಿನವರೆಗಿನ ಸಂಘದ ಸೇವೆಯ 'ಜಮಾ ಖರ್ಚನ್ನು' ಸಭಿಕರಿಗೆ ತೆರೆದಿಟ್ಟರು. ಸಂಘದ ಆರ್ಥಿಕ ಸ್ಥಿತಿ ಸರಿ ಇಲ್ಲದ ದಿನಗಳಲ್ಲಿ "ಕಾರ್ಯಾಲಯ ದೀಪಿಕೆ" ಎಂಬ ಕೈಪಿಡಿ ರಚಿಸಿದ್ದನ್ನು ಸ್ಮರಿಸಿಕೊಂಡರು. ಸಮಾರಂಭದಲ್ಲಿ ಹಿರಿಯ ಸದಸ್ಯರಾದ ನರಗುಂದದ ಎಸ್. ಆರ್. ಹಿರೇಮಠ, ಡಾ. ಶಾಂತಾ ಇಮ್ರಾಪೂರ ಅವರನ್ನು ಸನ್ಮಾನಿಸಲಾಯಿತು.

ವೇದಿಕೆ ಮೇಲೆ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ, ಶಿವಾನಂದ ಭಾವಿಕಟ್ಟಿ ಪ್ರಫುಲ್ಲಾ ನಾಯಕ ಉಪಸ್ಥಿತರಿದ್ದರು. ಅರ್ಜುನ ವಠಾರ ಅವರು ಪ್ರಾರ್ಥನೆ ಮಾಡಿದರು. ಸಂಘದ

ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ಸಂಘದ ಸಿಬ್ಬಂದಿಯ ಸೇವೆಗಾಗಿ ಅವರಿಗೆ ಹೂಗುಚ್ಛ ನೀಡಿ ಗೌರವಿಸಲಾಯಿತು. ಕೋಶಾಧ್ಯಕ್ಷ ಕೃಷ್ಣ ಜೋಶಿ ಅವರು ಸಿಬ್ಬಂದಿ ವಿವರ ನೀಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಮನೋಜ ಪಾಟೀಲ ಕಾರ್ಯಕ್ರಮ ನಿರ್ವಹಿಸಿದರೆ, ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ ಸನ್ಮಾನಿತರ ಪರಿಚಯ ಮಾಡಿದರು. ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಆಭಾರ ಮನ್ನಿಸಿದರು.

ಎಚ್. ಬಿ. ಶಿವಕುಮಾರ, ಶ್ರೀಮತಿ ದೇವಿಕಾ ಶಿವಕುಮಾರ ಅವರು ಭಾವಗೀತೆಗಳನ್ನು ಹಾಡಿದರು. ಧಾರವಾಡದ ಸಂಸ್ಕಾರ ಮಹಿಳಾ ಮಂಡಳದವರು ಲಂಬಾಣಿ ನೃತ್ಯ ಪ್ರದರ್ಶಿಸಿದರು.

* **"ನಾಟಕ ಸಂಜೆ ಹಾಗೂ ಸನ್ಮಾನ" :**

ಭಾರತೀಯ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಧರ್ಮ ಮತ್ತು ಜಾತಿ ಭಾರತೀಯ ಸಂವಿಧಾನವಾದಾಗ ಮಾತ್ರ ನಮ್ಮ ದೇಶದಲ್ಲಿ ನೈಜ ಅಭಿವೃದ್ಧಿ ಮತ್ತು ಬೆಳವಣಿಗೆ ಕಾಣಲು ಸಾಧ್ಯ ಮತ್ತು ಭಾರತೀಯ ಸಂವಿಧಾನ ಇಡೀ ಜಗತ್ತಿನಲ್ಲಿಯೆ ಮಾದರಿಯ ಸಂವಿಧಾನವಾಗಿದೆ ಎಂದು ಭಾರತದ ಸಹಾಯಕ ಸಾಲಿಸಿಟರ್ ಜನರಲ್, ಹಿರಿಯ ನ್ಯಾಯವಾದಿ ಹಾಗೂ ಧಾರವಾಡ ಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆ. ಬಿ. ನಾವಲಗಿಮಠ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೧೨೯ ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ನಡೆದ ೬ನೇ ದಿನ ದಿನಾಂಕ **೨೫-೭-೨೦೧೮** ರಂದು **'ನಾಟಕ ಸಂಜೆ ಹಾಗೂ ಸನ್ಮಾನ"** ಕಾರ್ಯಕ್ರಮದ ಅತಿಥಿ ಸ್ಥಾನದಿಂದ "ಶ್ರೀ ವಿನಾಯಕರಾವ ಜೋಶಿ ವೇದಿಕೆ" ಯಿಂದ ಮಾತನಾಡಿದ ಅವರು, ನಮ್ಮ ಸಂವಿಧಾನ ರಚನಾ ತಂಡದ ಸದಸ್ಯರು ನಮ್ಮ ದೇಶದಲ್ಲಿ ಹಲವಾರು ಧರ್ಮಗಳು, ಜಾತಿಗಳು, ಒಳಜಾತಿಗಳು, ಭಾಷೆಗಳು ಮತ್ತು ಸಂಸ್ಕೃತಿ ಇರುವುದರಿಂದ, ಭಾರತ ಗಣರಾಜ್ಯವು ಯಾವುದೇ ಒಂದು ಜಾತಿ-ಧರ್ಮದ ರಾಷ್ಟ್ರವಾಗದೇ ಜಾತ್ಯಾತೀತ ರಾಷ್ಟ್ರವಾಗಬೇಕೆಂದು ಬಯಸಿ, ಸಂವಿಧಾನದ ಆಶೆಯವನ್ನು ಮಾಡಿರುತ್ತಾರೆ. ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ ಮೂಲ ಆಶಯವನ್ನು ಮರೆತು ಇಂದು ಧರ್ಮ ಮತ್ತು ಜಾತಿಗಳ ಮಧ್ಯ ಜಗಳ ತಂದಿಟ್ಟು, ಭಾರತವನ್ನು ಒಂದು ಧರ್ಮದ ದೇಶವನ್ನಾಗಿಸಲು ಹೊರಟಿರುವುದು ಸರಿಯಾದ ಸಾಮಾಜಿಕ ನಿಲುವಲ್ಲ, ಆದ್ದರಿಂದ ಸಂವಿಧಾನದ ಆಶಯದಂತೆ ಪ್ರಜ್ಞಾವಂತ ಪ್ರಜೆಗಳು ಇಂದು ನಡೆಯಬೇಕಾದ ಅವಶ್ಯಕತೆಯಿದೆ ಎಂದು ಮುಂದುವರೆದು ಮಾತನಾಡುತ್ತಾ ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು ಮತ್ತು ಖ್ಯಾತ ಭಾಷಾ ತಜ್ಞರಾದ ಡಾ. ಎ. ಮುರಿಗೆಪ್ಪ ಮಾತನಾಡಿ, ಕನ್ನಡ ಕಟ್ಟುವ ಮತ್ತು ಬೆಳೆಸುವ ಸಂದರ್ಭದಲ್ಲಿ ಇಂದಿಗೂ ನನಗೆ ಬ್ರಿಟೀಷ್ ಅಧಿಕಾರಿಗಳು ಆದರ್ಶಪ್ರಾಯವಾಗಿ ಕಾಣುತ್ತಾರೆ. ಮರಾಠಿಮಯವಾದ ಮುಂಬೈ ಕರ್ನಾಟಕದ ಜನಸಾಮಾನ್ಯರ ಮತ್ತು ವಾಸ್ತವಿಕ ಬದುಕಿನ ಭಾಷೆ ಕನ್ನಡವೆ ವಿನಃ ಮರಾಠಿಯಲ್ಲ, ಹಾಗಾಗಿ ಈ ಭಾಗದಲ್ಲಿ ಮರಾಠಿ ಶಾಲೆಗಳನ್ನು ಹೊಂದಿರುವುದು ಜನವಿರೋಧಿ ಮತ್ತು ಅವೈಜ್ಞಾನಿಕ ಎಂದು ಭಾವಿಸಿದ ಬ್ರಿಟೀಷ್ ಅಧಿಕಾರಿಗಳು, ವಾಸ್ತವಿಕವಾಗಿ ಈ ನೆಲದಲ್ಲಿ ಕನ್ನಡ ಶಾಲೆಗಳನ್ನು ತೆರೆಯುವುದು ಸೂಕ್ತ ಎಂದು ಅಭಿಪ್ರಾಯ ತಾಳಿ ಕನ್ನಡ ಶಾಲೆಗಳನ್ನು ತೆರೆದಿರುವ ಇತಿಹಾಸವನ್ನು ಮೆಲಕು ಹಾಕಿದಾಗ, ಬ್ರೀಟಿಷ್ ಅಧಿಕಾರಿಗಳಿಗೆ ಇರುವಷ್ಟು ಕನ್ನಡ ಭಾಷಾ ಬದ್ಧತೆ ನಮ್ಮನ್ನು ಆಳುವವರು ಮತ್ತು ಅಧಿಕಾರಿಗಳಿಗೆ ಇಲ್ಲವೆಂದು ನನಗೆ ಪ್ರಾಮಾಣಿಕವಾಗಿ ಅನಿಸುತ್ತದೆಯೆಂದರು.

ಕ.ವಿ.ವ. ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರು ಗೌರವ ಉಪಸ್ಥಿತರಿದ್ದರು. ಸಂಘದ ಹಿರಿಯ ಸದಸ್ಯರಾದ ಶ್ರೀ ಸುರೇಶ ಹಾಲಭಾವಿ, ಶ್ರೀಮತಿ ಪಾರ್ವತಿ ಬಿ. ಆರಟ್ಟಿ ಮತ್ತು ಶ್ರೀ ಎಂ. ಎಲ್. ಟೋಣಪಿ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಶ್ರೀ ಸುರೇಶ ಹಾಲಭಾವಿ, ಶ್ರೀಮತಿ ಪಾರ್ವತಿ ಬಿ. ಆರಟ್ಟಿ ಮತ್ತು ಶ್ರೀ ಎಂ. ಎಲ್. ಟೋಣಪಿ ಅವರು ಸಂಘಕ್ಕೆ ನಾವು ನೀಡಿದ ಸೇವೆಗಿಂತ ಹೆಚ್ಚಾಗಿ ನಮಗೆ ಪ್ರತಿಯಾಗಿ ನೀಡಿದೆ, ಇಂತಹ ಹೆಮ್ಮೆಯ ಸಂಸ್ಥೆಯ ಸದಸ್ಯರು ನಾವು ಎಂಬುದು ನಮಗೆ ಮಹಾಗೌರವ ತಂದುಕೊಟ್ಟಿದೆ. ಸಂಘದ ಒಡನಾಟದಿಂದಾಗಿ ನಮ್ಮ ವ್ಯಕ್ತಿತ್ವ ಬೆಳವಣಿಗೆಯಾಗಿದೆ ಆದ್ದರಿಂದ ಸಂಘಕ್ಕೆ ನಾವು ಕೃತಜ್ಞರಾಗಿದ್ದೇವೆ ಎಂದರು.

'ನಾಟಕ ಸಂಜೆ' ಕಾರ್ಯಕ್ರಮದ ಪ್ರಯುಕ್ತ, ಡಾ. ಗೋವಿಂದ ಮಣ್ಣೂರ ರಚನೆಯ 'ಕಳ್ಳರು-ಮಹಾಕಳ್ಳರು' ನಾಟಕವನ್ನು ಚನ್ನಬಸಪ್ಪ ಕಾಳೆ ನಿರ್ದೇಶನದಲ್ಲಿ ಶ್ರೀ ನಟರಾಜ ಕಲಾಬಳಗ, ಹುಬ್ಬಳ್ಳಿ ಇವರು ಸೊಗಸಾಗಿ ಪ್ರದರ್ಶಿಸಿ ಜನರನ್ನು ರಂಜಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಕು. ರೀಚಾ ಮಹೇಶ ಬೆಲ್ಲದ ಪ್ರಾರ್ಥಿಸಿದರು. ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಸ್ವಾಗತಿಸಿದರು. ಕಾ.ಕಾ. ಸಮಿತಿ ಸದಸ್ಯರಾದ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿಗಳಾದ ಪ್ರಕಾಶ ಎಸ್. ಉಡಿಕೇರಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಶಾಂತೇಶ ಗಾಮನಗಟ್ಟಿ ವಂದಿಸಿದರು.

ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷರಾದ ನಿಂಗಣ್ಣ ಕುಂಟಿ (ಇಟಗಿ), ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಶಿವಾನಂದ ಭಾವಿಕಟ್ಟಿ, ಶಂಕರ ಕುಂಬಿ, ಮನೋಜ ಪಾಟೀಲ ಉಪಸ್ಥಿತರಿದ್ದರು.

* **'ಸಮಾರೋಪ ಸಮಾರಂಭ' :**

ಇಂಗ್ಲಿಷ್ ಮೋಹದಲ್ಲಿರುವ ಕನ್ನಡಿಗರಿಗೆ ಕನ್ನಡದ ಕಾರ್ಯ ಮಾಡಲೂ ಕರ್ನಾಟಕ ವಿದ್ಯಾವರ್ಧಕ ಸಂಘ ಕಲಿಸಬೇಕಾದ ಅನಿವಾರ್ಯತೆ ಇಂದಿನ ದಿನಗಳಲ್ಲಿದೆ ಎಂದು ವಿಶ್ರಾಂತ ಕುಲಪತಿ ಡಾ. ಎಂ.ಐ. ಸವದತ್ತಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೧೨೯ನೇ ಸಂಸ್ಥಾಪನಾ ದಿನದ ಅಂಗವಾಗಿ **೨೬-೭-೨೦೧೮** ರಂದು **ಸಮಾರೋಪ**ದಲ್ಲಿ ಮೆ॥ ಎಫ್. ಆ್ಯಂಡರಸನ್ ವೇದಿಕೆಯಲ್ಲಿ ಅತಿಥಿಗಳಾಗಿ ಮಾತನಾಡಿ, ಕನ್ನಡದ ಕಾರ್ಯಕ್ರಮ ಮಾಡಲು ನಾವೆಲ್ಲರೂ ನಿಸ್ಸೀಮರು. ಆದರೆ, ಕನ್ನಡದ ಕನ್ನಡದ ಕಾಯಕ ಮಾಡುವಲ್ಲಿ ಮಾತ್ರ ಹಿಂದೆ ಬಿದ್ದಿದ್ದೇವೆ ಎಂದರು.

ಮೊದಲು ಕನ್ನಡ ಕಾಯಕ ಮಾಡುವುದನ್ನು ರೂಢಿಸಿಕೊಳ್ಳಬೇಕು. ಕರ್ನಾಟಕದಲ್ಲಿಯೇ ಕನ್ನಡದ ಅಸ್ಮಿತೆ ಕಡಿಮೆ ಆಗಬಾರದು. ವಿಜ್ಞಾನವನ್ನೂ ಕನ್ನಡದಲ್ಲಿಯೇ ಪಾಠ ಮಾಡುವಂತಾಗಬೇಕು. ಕನ್ನಡವನ್ನು ಯಾವ ರೀತಿ ಗಟ್ಟಿ ಮಾಡಬೇಕು ಎಂಬುದನ್ನು ವಿದ್ಯಾವರ್ಧಕ ಸಂಘವು ಕೆಲಸ ಮಾಡುವ ಮೂಲಕ ಕನ್ನಡ ಭಾಷೆ ಹಗೂ ಸಂಸ್ಕೃತಿಯನ್ನು ಶಾಶ್ವತವಾಗಿ ಉಳಿಯುವಂತೆ ಮಾಡಬೇಕು ಎಂದು ಕಿವಿಮಾತು ಹೇಳಿದರು.

ವಿದೇಶದಲ್ಲಿರುವ ಕನ್ನಡಿಗರೂ ತಮ್ಮ ತಮ್ಮಲ್ಲೂ ಇಂಗ್ಲೀಷನಲ್ಲೇ ಮಾತನಾಡುತ್ತಾರೆ. ಇಂಗ್ಲೀಷ ಕಲಿಯದೇ ಇದ್ದರೆ ಮೋಕ್ಷವೇ ಇಲ್ಲ ಎನ್ನುವ ಬೆಳವಣಿಗೆ ಇದೆ. ಗ್ರಾಮೀಣದಲ್ಲೂ ಬರುವ ದಿನಗಳಲ್ಲಿ ಕನ್ನಡ ಉಳಿಯದಂತಹ ಪರಿಸ್ಥಿತಿಗಳು ನಿರ್ಮಾಣವಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಇಂಗ್ಲಿಷ್ ಮಾಧ್ಯಮ ಶಾಲೆಗಳ ವಾಹನಗಳು ಗ್ರಾಮಗಳಿಂದ ಮಕ್ಕಳನ್ನು ಕರೆತಂದು ಇಂಗ್ಲಿಷ ಭೋಧಿಸುತ್ತಿವೆ. ಕನ್ನಡ ಸಿನಿಮಾ, ಟಿವಿ ಮಾಧ್ಯಮಗಳಲ್ಲೂ ಕನ್ನಡ ಉಳಿದಿಲ್ಲ. ಇಂಗ್ಲಿಷ್ ಕಲಿತರೆ ಬುದ್ಧಿವಂತ : ಕನ್ನಡ ಕಲಿತರೆ ದಡ್ಡ ಎನ್ನುವ ಭಾವನೆ ಹರಡುತ್ತಿದ್ದು ಕನ್ನಡ ಬರೀ ದಡ್ಡರ ಭಾಷೆಯಾಗಿ ಉಳಿಯಬೇಕೆ ಎಂದು ಪ್ರಶ್ನಿಸಿದರು.

ನಾಡೋಜ ಡಾ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ನೂತನ ಗೌರವ ಉಪಾಧ್ಯಕ್ಷರಾದ ಬಸಂತಕುಮಾರ ಪಾಟೀಲ, ಪ್ರೊ. ಐ.ಜಿ. ಸನದಿ, ಡಾ. ಶಾಂತಿನಾಥ ದಿಬ್ಬದ, ಸೇತುರಾಮ ಹುನಗುಂದ, ಎಂ.ಬಿ. ಕಟ್ಟಿ, ಇಸಬೆಲ್ಲಾ ಝೇವಿಯರ್, ಸಂಕಮ್ಮ ಸಂಕಣ್ಣವರ, ಬಿ.ಎಲ್. ಪಾಟೀಲ ಅವರನ್ನು ಸನ್ಮಾನಿಸಲಾಯಿತು. ಕೋಶಾಧ್ಯಕ್ಷ ಕೃಷ್ಣ ಜೋಶಿ ಮತ್ತು ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಕಾರ್ಯಕ್ರಮ ಸಂಯೋಜನೆ ಮಾಡಿದರು.

* = * = * = *